### Trade Union Leaders
### (Withdrawal of Cases)

*Q.* 801.—**Sri K. S. VASAN** (K.G.F).—Will the Government be pleased to state:—

(*a*) whether they have received a representation for withdrawal of cases pending against Trade Union leaders and activities in Kolar Gold Fields;

(*b*) the action, if any, that is proposed to be taken in this respect?

*A.*—**Sri A. G. RAMACHANDRA RAO** (Minister for Law and Education).—

(*a*) No.

(*b*) Does not arise in view of reply to (*a*) above.

---

### Mysore Alienated Villages (Protection of Tenants and Miscellaneous Provisions) Amendment Bill 1955.

INTRODUCTION.

**Sri H. M. CHANNABASAPPA** (Minister for Industries).—Sir, I introduce the Mysore Alienated Villages (Protection of Tenants and Miscellaneous Provisions) Amendment Bill, 1955, which has been published in the *Mysore Gazette* Extraordinary dated the 14th November 1955 under rule 48 of the Rules of Procedure and Conduct of Business in the Mysore Legislative Assembly.

---

### STATES REORGANISATION COMMISSIN REPORT

*Motion to consider (Contd.)*

1-10 P.M.

**Mr. SPEAKER.**—Before taking up the consideration of the S.R.C. Report, I will make an announcement regarding the days that are allotted for this discussion and there will be no further extension. Therefore, I will make a final announcement. The Assembly will meet on Saturday the 19th November 1955 in the morning and on Sunday the 20th it will meet in the afternoon and adjourn. It will again meet on the 29th November 1955 and the Session will conclude on the 1st of December 1955. On all these days the S.R.C Report will be taken up for discussion. Therefore, in view of the final allotment of days, I will restrict the time from 15 minutes to half an hour. Because all the Hon'ble Members are desirous of speaking on this motion, I am also for sitting late and continuing the debate to give an opportunity to all the members to speak.

**Sri K. PUTTASWAMY** (Srirangapatna).—You may be pleased to fix a time for discussion with respect to the position of the Opposition in this House.

**Mr. SPEAKER.**—In connection with that, I wanted to hear the Leader of the Opposition. Now I find from the records and also from the procedure adopted and the conventions prevailing in other Assemblies that there is no necessity to hear the Leader of the Opposition, I will make a statement tomorrow.

**Sri J. MAHOMED IMAM** (Jagalur).—I may suggest that the Honourable Members holding different views may be allowed alternatively to speak.

**Mr. SPEAKER.**—I will do it.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಈ ಹಿಂದೆ ಆ ಶೇಷಾದ್ರಿ ಸಮಿತಿಯ ವರದಿ ಈ ಸಭೆಯಲ್ಲಿ ಚರ್ಚೆಯಾಗುತ್ತಿದ್ದಂಥ ಕಾಲದಲ್ಲೇ ನಾನು ಸ್ವಲ್ಪ ಹೆಚ್ಚು ಸಮಯವನ್ನೇ ತೆಗೆದುಕೊಂಡು ಈ ಕರ್ನಾಟಕ ಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ ಮಾತನಾಡಿದ್ದೇನೆ. ಆ ಸಂದರ್ಭದಲ್ಲಿ ನಾವು ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡು ಸರ್ವಸುಂದರವಾದಂಥ ಒಂದು ಕನ್ನಡನಾಡನ್ನು ಅತಿಜಾಗ್ರತೆಯಾಗಿ ಕಟ್ಟಬೇಕಾದದ್ದು ಅತ್ಯಾವಶ್ಯಕ ಎಂದು ಹೇಳಿ ಆಗಲೇ ಹಾರೈಸಿದ್ದೇನೆ. ಈಗ ಫಜಲಾಲಿ ಕಮಿಷನರವರ ವರದಿ ನಮ್ಮ ಮುಂದೆ ಬಂದಿದೆ. ಮೊಟ್ಟಮೊದಲನೆಯದಾಗಿ, ನಾನು ಈ ವರದಿಯನ್ನು ಸ್ವಾಗತಿಸುತ್ತೇನೆ. ಇಂತಹ ಒಂದು ದೊಡ್ಡ ಸಮಸ್ಯೆಯ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರುವಾಗ ಎಲ್ಲರಿಗೂ ತೃಪ್ತಿಯನ್ನುಂಟುಮಾಡುವುದು ಬಹಳ ಕಷ್ಟ. ಇಂತಹ ಕಷ್ಟವಾದಂಥ ಕೆಲಸದಲ್ಲಿ ಫಜಲಾಲಿ ಸಮಿತಿಯವರು ಬಹಳಮಟ್ಟಿನ ಯಶಸ್ಸನ್ನು ತಂದುಕೊಂಡಿದ್ದಾರೆ. ಮತ್ತು ಸಂತೋಷವನ್ನುಂಟುಮಾಡಿದ್ದಾರೆ ಎಂಬುದನ್ನು ಮಾತ್ರ ನಾನು ಮೊಟ್ಟಮೊದಲನೆಯದಾಗಿ ಸೂಚಿಸಲು ಬಯಸುತ್ತೇನೆ. ಈ ವರದಿಯ ಬಗ್ಗೆ ನಾವು ಸೂಚಿಸಬಹುದಾದಂಥ ಭಿನ್ನಾಭಿಪ್ರಾಯಗಳು, ಬಳ್ಳಾರಿ ಮತ್ತು ಕಾಸರಗೋಡು ಇವುಗಳಿಗೆ ಸಂಬಂಧಪಟ್ಟವು. ಬಳ್ಳಾರಿ ಹಿಂದೆ ಎರಡು ಸಾರಿ ತೀರ್ಮಾನವಾದಂತೆ ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟ ಪ್ರದೇಶ. ಅದನ್ನು ಪುನಃ ಆಂಧ್ರ ಪ್ರಾಂತಕ್ಕೆ ಬದಲುಮಾಡುವ ಕಾರಣಗಳು ನಿರಾಧಾರವಾದುವು ಎಂಬುದು ಇತ್ತೀಚೆಗೆ ಅನೇಕ ಅಂಕಿಅಂಶಗಳ ವರದಿಯಿಂದ ನಮಗೆ ತಿಳಿದುಬಂದಿದೆ. ಮುಖ್ಯವಾಗಿ, ಅವರು

ಜಲಾಶಯದ ಆಡಳಿತ ಕೆಲವು ಕ್ಲಿಷ್ಟ ಸಮಸ್ಯೆಗಳನ್ನುಂಟುಮಾಡಬಹುದು ಎಂಬ ಭೀತಿಯನ್ನು ವ್ಯಕ್ತಪಡಿಸಿದ್ದಾರೆ. ಆ ಭೀತಿಗೆ ಅನುಭವದ ಹಿನ್ನೆಲೆ ಇಲ್ಲ. ಮೈಸೂರು ಸರ್ಕಾರಕ್ಕೂ ಆಂಧ್ರ ಸರ್ಕಾರಕ್ಕೂ ನೀರಿನ ಹಂಚಿಕೆಯ ವಿಚಾರದಲ್ಲಿ ಬಹಳ ಭಿನ್ನಾಭಿಪ್ರಾಯಗಳುಂಟಾಗಿರಬಹುದು ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಆ ಬೋರ್ಡಿನ ಅಧ್ಯಕ್ಷರು ಮೊನ್ನೆ ತಾನೇ ಕೊಟ್ಟ ಹೇಳಿಕೆಯಲ್ಲಿ ಇಂತಹ ಪ್ರಮೇಯ ಎಂದೂ ಜರುಗಿಲ್ಲ ಎಂದು ವ್ಯಕ್ತಪಡಿಸಿದ್ದಾರೆ. ಅಲ್ಲದೆ ವಿಶಾಲ ಆಂಧ್ರ ಆಗುವ ಸೂಚನೆ ಕಂಡುಬರುತ್ತಿರುವುದರಿಂದ ಕರ್ಣಾಟಕಕ್ಕೆ ಈ ಜಲಾಶಯದ ಹೆಚ್ಚಿನ ಪ್ರಯೋಜನ ಬರತಕ್ಕದ್ದಾಗಿರುವುದರಿಂದ ಬಳ್ಳಾರಿಯ ಮೂರು ತಾಲ್ಲೂಕುಗಳು ಮೈಸೂರಿನಲ್ಲಿರುವುದು ಬಹಳ ನ್ಯಾಯವಾಗಿದೆ. ನಾನಾದರೂ ತಿಳಿದಿದ್ದೇನೆ, ಆಂಧ್ರ ಸರ್ಕಾರದವರು ಅಥವಾ ಆಂಧ್ರ ನಾಯಕರು ಬಳ್ಳಾರಿಯನ್ನು ಹೆಚ್ಚಿಗೆ ಅಪೇಕ್ಷಿಸಿರುವುದು ಅಲ್ಲಿಯ ಸರ್ಕಾರಿ ಕಟ್ಟಡಗಳಿಗೆಂದು. ಈಗ ವಿಶಾಲಾಂಧ್ರದ ರಚನೆ ಕಂಡುಬರುವುದರಿಂದ ಸರ್ಕಾರಕ್ಕೆ ಅಗತ್ಯವಾಗಿರುವ ಕಟ್ಟಡದ ಕೊರತೆಗಳು ಸಿಕಂದರಾಬಾದ್ ಮತ್ತು ಹೈದರಾಬಾದ್ ಮೊದಲಾದವುಗಳಿಂದ ಪೂರೈಸಬಹುದಾಗಿರುವುದರಿಂದ ಬಹುಶಃ ಆಂಧ್ರದವರೂ ಕೂಡ ಬಳ್ಳಾರಿ, ಹೊಸಪೇಟೆ ಮತ್ತು ಸಿರುಗುಪ್ಪಾ ತಾಲ್ಲೂಕುಗಳನ್ನು ಕರ್ಣಾಟಕಕ್ಕೆ ಬಿಟ್ಟುಕೊಡುವ ಕಾಲದಲ್ಲಿ ಹೆಚ್ಚು ಅಡ್ಡಿ ಬರಲಾರರು ಎಂದು ತಿಳಿದುಕೊಂಡಿದ್ದೇನೆ. ಬಳ್ಳಾರಿಯ ಪ್ರದೇಶವನ್ನು ಕನ್ನಡನಾಡಿನ ಆಡಳಿತಕ್ಕೊಳಪಡಿಸುವುದು ಬಹಳ ಮುಖ್ಯವಾದ ವಿಚಾರ. ಇನ್ನೂ ಅನೇಕಜನ ಸ್ನೇಹಿತರು ಬಳ್ಳಾರಿ ಜನಗಳ ನೋವುಗಳೇನೆಂಬುದನ್ನು ಇನ್ನೂ ಹೆಚ್ಚಿನ ಪ್ರಭಾವಯುತವಾದ ರೀತಿಯಲ್ಲಿ ಈ ಸಭೆಯಲ್ಲಿ ತಿಳಿಸುವವರಾಗಿರುವುದರಿಂದ ನಾನು ಈ ಬಗ್ಗೆ ಹೆಚ್ಚು ಪ್ರಸ್ತಾಪಿಸುವುದಿಲ್ಲ. ನಾನು ಇನ್ನೊಂದು ವಿಚಾರವನ್ನು ನಮ್ಮ ಮೈಸೂರು ಸರ್ಕಾರದಲ್ಲಿ ಅರಿಕೆಮಾಡಿಕೊಳ್ಳಬೇಕಾಗಿದೆ. ಈಗ ಕಾಸರಗೋಡು ಪ್ರದೇಶ ಕೈಬಿಟ್ಟುಹೋಗಿದೆ, ತಿರುವಾಂಕೂರು-ಕೊಚ್ಚಿನ್ ಬಹಳ ಚಿಕ್ಕಪ್ರಾಂತ್ಯವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸ್ವಲ್ಪ ಔದಾರ್ಯವನ್ನು ತೋರಿಸಿ ಚಂದ್ರಗಿರಿ ನದಿಯ ದಕ್ಷಿಣಕ್ಕಿರುವ ಕಾಸರಗೋಡಿನ ಭಾಗ ಕೇರಳ ಪ್ರಾಂತ್ಯಕ್ಕೆ ಹೋಗುವುದರಲ್ಲಿ ನಮ್ಮ ಯಾವ ಆಕ್ಷೇಪಣೆಯೂ ಇಲ್ಲ ಎಂದು ಹೇಳುತ್ತೇನೆ. ಅಲ್ಲಿಯ ಜನಗಳೂ ಕೂಡ ಅದೇ ರೀತಿಯ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಚಂದ್ರಗಿರಿಯ ಉತ್ತರಕ್ಕಿರುವ ಭಾಗ ಪ್ರಧಾನವಾಗಿ ಕನ್ನಡ ಪ್ರದೇಶ. ಕನ್ನಡನಾಡಿನ ರಾಷ್ಟ್ರಕವಿಯೆನಿಸಿಕೊಂಡ ಶ್ರೀ ಗೋವಿಂದಪೈಯವರು ಆ ಪ್ರದೇಶಕ್ಕೆ ಸೇರಿದವರು. ಯಾವಾಗಲೂ ಒಂದು ರಾಜ್ಯದ ಎಲ್ಲೆಯನ್ನು ನಿಷ್ಕರ್ಷೆ ಮಾಡುವಾಗ ಪ್ರಾಕೃತಿಕವಾಗಿರುವ ಗಡಿಗಳು ಎಂದರೆ, ನದಿಗಳು, ಸಮುದ್ರಗಳು ಇವುಗಳನ್ನು ಎಲ್ಲೆಯಾಗಿ ಸ್ವೀಕರಿಸುವ ವಾಡಿಕೆ ಇತಿಹಾಸದಲ್ಲಿಯೂ ಮತ್ತು ಶಾಸ್ತ್ರದಲ್ಲಿಯೂ ಇದೆ. ಹೀಗಿರುವಾಗ ಕನ್ನಡನಾಡಿನ ತೆಂಕುಮೂಲೆಯ ಗಡಿ ಚಂದ್ರಗಿರಿ ನದಿಯಾಗಲಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ಕಾರ್ಯದಲ್ಲಿ ನಮ್ಮ ನಾಯಕರು ವಿಶೇಷ ಗಮನವನ್ನು ಕೊಟ್ಟು ಕಾಸರಗೋಡಿನಲ್ಲಿರುವ ಚಂದ್ರಗಿರಿಯ ಉತ್ತರ ಭಾಗವನ್ನು ಕನ್ನಡನಾಡಿನಲ್ಲಿ ಉಳಿಸುವ ಬಗ್ಗೆ ವಿಶೇಷ ಪ್ರಯತ್ನ ಮಾಡಬೇಕು ಎಂದು ಜನತೆಯ ಪರವಾಗಿ ಮತ್ತು ನಿಮ್ಮಗಳ ಪರವಾಗಿ ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಫಜಲಾಲಿ ಕಮಿಷನರವರು ಅನೇಕ ತತ್ವಗಳನ್ನು ತಮ್ಮ ವರದಿಯಲ್ಲಿ ಪ್ರಸ್ತಾಪಮಾಡಿದ್ದಾರೆ. ಅವರು ಭಾಷೆಗೆ ವಿಶೇಷ ಪ್ರಾಧಾನ್ಯತೆ ಕೊಡದೆ ಅನೇಕ ವಿಷಯಗಳನ್ನು ವರದಿಯನ್ನು ತಯಾರುಮಾಡುವಾಗ ಸ್ವೀಕರಿಸಿದ್ದಾರೆ. ಅವು ಒಂದು ರೀತಿಯಲ್ಲಿ ಈ ಕಾಲದಲ್ಲಿ ಅಗತ್ಯವಾಗಿವೆ. ಆದರೆ ಭಾಷೆಯನ್ನು ಕಡೆಗಣಿಸಿ ಕೆಲವರು ವಾದಮಾಡುವುದನ್ನು ನಾವು ಈ ಸಭೆಯಲ್ಲಿ ಕೇಳಿದ್ದೇವೆ. ಅದನ್ನು ಮಾತ್ರ ಈಗ ನಾವು ಸ್ವಲ್ಪ ವಿಸ್ತಾರವಾಗಿ ನೋಡಬೇಕಾಗುತ್ತದೆ. ಯಾವುದೇ ಒಂದು ಭಾಗದ ಜನ ತಮ್ಮ ಯೋಗಕ್ಷೇಮದ ಜವಾಬ್ದಾರಿಯನ್ನು ಹೊತ್ತಿರತಕ್ಕ ಸರ್ಕಾರಕ್ಕೆ ಅಥವಾ ತಮ್ಮನ್ನು ಪ್ರತಿನಿಧಿಸತಕ್ಕ ಪ್ರತಿನಿಧಿಗಳಿಗೆ ಮತ್ತು ನಾಯಕರುಗಳಿಗೆ ಅವರ ವಿಚಾರವನ್ನು ತಾವು ತಿಳಿಯುವುದೆ ಆಗಲಿ ಅಥವಾ ತಮ್ಮ ವಿಚಾರವನ್ನು ಅವರಿಗೆ ತಿಳಿಸುವುದೇ ಆಗಲಿ ಒಂದು ಭಾಷೆಯ ಮುಖಾಂತರ. ಈ ಭಾಷೆ ಒಂದು ಐಕಮತ್ಯವನ್ನೂ ಒಂದು ಸಾಮರಸ್ಯವನ್ನೂ ಉಂಟುಮಾಡುವುದಕ್ಕೆ ಒಳ್ಳೆಯ ಉತ್ತಮವಾದ ಸಾಧನೆ. ಯಾವುದೇ ಆಗಲಿ ಅತಿರೇಕವಾದರೆ ಭಾಷಾಭಿಮಾನ, ಜಾತ್ಯಭಿಮಾನ ಅತಿರೇಕವಾಗಿ ಆದರೆ ಮಾತ್ರ ರಾಷ್ಟ್ರಕ್ಕೆ ಘಾತುಕ ಉಂಟುಮಾಡುತ್ತದೆ ಮತ್ತು ಅನಿಷ್ಟ ಪರಿಣಾಮಗಳಿಗೆ ಕಾರಣವಾಗುತ್ತದೆ. ಒಂದು ಭಾಷೆ, ಒಂದು ಸಂಸ್ಕೃತಿ ಅಭಿವೃದ್ಧಿಯನ್ನು ಹೊಂದಬೇಕಾದರೆ ಆ ಸಂಸ್ಕೃತಿಯ, ಆ ಭಾಷೆಯ ನೆರಳಿನಲ್ಲಿ ಬಾಳತಕ್ಕ ಜನಗಳೆಲ್ಲ ಒಂದು ಆಡಳಿತಕ್ಕೆ ಒಳಪಟ್ಟಿರತಕ್ಕದು ಅತ್ಯಗತ್ಯ ಎಂಬ ವಿಚಾರವನ್ನು ಮೊದಲಿನಿಂದಲೂ, ಅಂದರೆ ಯಾವ ರಾಜಕೀಯ ಆಶೋತ್ತರಗಳು, ಸ್ಥಾನ, ಅಧಿಕಾರ ಅಥವಾ ಕೀರ್ತಿ ಇವುಗಳ ಕನಸೂ ಕೂಡ ಇಲ್ಲದೇ ಇರುವ ಕಾಲದಲ್ಲಿ, ಕೇವಲ ರಾಷ್ಟ್ರಾಭಿಮಾನದಿಂದ ಪ್ರೇರಿತರಾದ ಹಿರಿಯರು ಪ್ರತಿಪಾದಿಸಿಕೊಂಡು ಬಂದಿದ್ದಾರೆ. ಮಾನ್ಯ ಸಚಿವರಾದ ಶ್ರೀ ಎ. ಜಿ. ರಾಮಚಂದ್ರರಾಯರು ಮಹಾತ್ಮಾ ಗಾಂಧಿಯವರು ಏನೋ ಒಂದು ತಾತ್ಕಾಲಿಕವಾದ ಪ್ರಯೋಜನಕ್ಕಾಗಿ ಈ ವಾದವನ್ನು ಹೂಡಿದರು ಎಂಬುದಾಗಿ ಅಪ್ಪಣೆಕೊಡಿಸಿದರು. ನಾನು ಆ ವಾದವನ್ನು ಕೇಳಿ ಬಹಳ ನೊಂದೆ. ಮಹಾತ್ಮಾ ಗಾಂಧಿಯವರು ಯಾವ ವಿಚಾರವನ್ನಾಗಲಿ ಸಮಾಜದಲ್ಲಿ, ದೇಶದಲ್ಲಿ ಪ್ರಸಾರಮಾಡಬೇಕಾದರೆ ಅದು ಸತ್ಯಕ್ಕೆ, ಧರ್ಮಕ್ಕೆ ನ್ಯಾಯವಾಗಿರಬೇಕು ಮತ್ತು ಶಾಶ್ವತವಾಗಿರಬೇಕು ಎಂಬುದನ್ನು ನಿಜವಾಗಿಯೂ ವಿಚಾರಮಾಡಿ ತಿಳಿದುಕೊಂಡು ತತ್ವವನ್ನು ಪ್ರಚಾರ ಮಾಡುತ್ತಿದ್ದರೇ ವಿನಾ ಏನೋ ಒಂದು ತಾತ್ಕಾಲಿಕ ಪ್ರಯೋಜನಕ್ಕಾಗಿ ಒಂದು ಸಿದ್ಧಾಂತವನ್ನು ಜನತೆಯ ಮುಂದೆ ಇಟ್ಟು ಜನತೆಯನ್ನು ಸಂಘಟಿಸಿ ಅದರಲ್ಲಿ ನಂಬಿಕೆ ಉಂಟುಮಾಡಿ ಕೆಲಸವಾದ ತಕ್ಷಣ ಅದನ್ನು ಬಿಡಿ ಎಂದು ಹೇಳುತ್ತಿರಲಿಲ್ಲ. ನಮ್ಮ ನಮ್ಮ ವಾದವನ್ನು ಸಮರ್ಥಿಸುವುದಕ್ಕೆ ಇಷ್ಟಾನುಸಾರ ದೊಡ್ಡವರ ಹೆಸರನ್ನು ಎಳೆಯುವುದು ಒಳ್ಳೆಯದಲ್ಲ ಎಂದು ನನಗನ್ನಿಸುತ್ತದೆ.

ಫಜಲಾಲಿ ಸಮಿತಿಯ ವರದಿಯಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಮುಖ್ಯವಾಗಿ ರಾಜಪ್ರಮುಖ ಪದ್ಧತಿಯನ್ನು ವಜಾಮಾಡಿದ್ದಾರೆ. ಇದು ಪ್ರಗತಿದಾಯಕವಾದ ಹೆಜ್ಜೆ ಎಂದು ತಿಳಿದುಕೊಂಡಿದ್ದೇನೆ. ನಾವು ವರ್ಗರಹಿತ, ಜಾತಿರಹಿತ, ಸಮಾಜ ನಿರ್ಮಾಣದ ಕಾರ್ಯದಲ್ಲಿ ತೊಡಗುವಾಗ, ಇಂತಹ ಕ್ರಮ ಅತ್ಯಗತ್ಯ. ಅದರೆ ಅವರು ಇನ್ನೊಂದು ಶಂಕೆಯನ್ನು ತೋರ್ಪಡಿಸಿದ್ದಾರೆ. ರಾಜಪ್ರಮುಖರುಗಳು ಆಯಾ ಪ್ರಾಂತ್ಯದಲ್ಲಿರುವುದರಿಂದ ಅಲ್ಲಿ ಆಡಳಿತ

(ಶ್ರೀ ಬಿ. ಮಾಧವಾಚಾರ್)

ನಿಷ್ಪಕ್ಷಪಾತವಾಗಿ ನಡೆಯುವುದು ಬಹಳ ಕಷ್ಟ ಎಂದು. ಆದರೆ ನಮ್ಮ ಮೈಸೂರು ಮಹಾರಾಜರ ವಿಷಯದಲ್ಲಿ ಇದು ಅನ್ವಯಿಸದೆ ಇರತಕ್ಕ ಮಾತು. ಏತಕ್ಕೆಂದರೆ ಮೈಸೂರಿನ ಪ್ರಜೆಗಳು ಅಷ್ಟೇ ಅಲ್ಲ, ಮೈಸೂರಿಗೆ ಸೇರಲಿರುವ ವಿಶಾಲ ಕರ್ಣಾಟಕದ ಪ್ರಜೆಗಳೂ ಸಹ ನಮ್ಮ ಮೈಸೂರು ಮಹಾರಾಜರವರ ವಿಚಾರದಲ್ಲಿ ಬಹಳ ಗೌರವದಿಂದ ಇರತಕ್ಕವರು ನಮ್ಮ ರಾಜಪ್ರಮುಖರೂ ಕೂಡ ಸಂಗೀತ, ಸಾಹಿತ್ಯ, ಕಲೆ ಮುಂತಾದ ಸದ್ವಿದ್ಯೆಗಳಿಗೆ ತಕ್ಕಷ್ಟು ಪ್ರೋತ್ಸಾಹಕೊಟ್ಟು ಜನತೆಯ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ಆದ್ದರಿಂದ ನಮ್ಮ ರಾಜಪ್ರಮುಖರೇ Governor ಆಗಿ ಪ್ರಾಂತ್ಯಾಡಳಿತವನ್ನು ನಡೆಸುವ ಒಂದು ಕಾರ್ಯಕ್ಕೆ ಎಲ್ಲರಒಪ್ಪಿಗೆ ಇದೆ. ರಾಜಪ್ರಮುಖರಾಗಿ ಅವರನ್ನು ಇಟ್ಟುಕೊಳ್ಳಬೇಕು ಎಂಬ ಒಂದು ವಾದವನ್ನು ಮಾನ್ಯ ಸದಸ್ಯಹಸ್ಥರೊಬ್ಬರು ಮೈಸೂರಿನಲ್ಲಿ ಹೂಡಿದ್ದಾರೆ. ಅರಸುಮನೆತನದವರು ಅವರು. ಆ ಭಾಷಣದ ಒಂದು ಪ್ರತಿಯನ್ನು ಇವತ್ತು ತಂದುಕೊಟ್ಟರು. ಅದನ್ನು ನಾನು ನೋಡಿದೆ. ಇಂತಹ ಪ್ರಯತ್ನಗಳನ್ನು ಮಾಡುವವರು ನಿಜವಾಗಿಯೂ ನಮ್ಮ ರಾಜಪ್ರಮುಖರಿಗೆ ಶ್ರೇಯಸ್ಸನ್ನು ಬಯಸುವವರಲ್ಲ, ಈ ರೀತಿ ಮಾಡುವುದರಿಂದ ಒಳ್ಳೆಯದಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಉದ್ರೇಕವನ್ನುಂಟುಮಾಡತಕ್ಕ ಭಾಷೆಯನ್ನು ಉಪಯೋಗಿಸಿ ಕೇಂದ್ರ ಸರ್ಕಾರದವರು ಮತ್ತು ಕಾಲಕ್ಕನುಸಾರವಾಗಿ ಕಾಂಗ್ರೆಸ್ ಸಂಸ್ಥೆಯವರು ಕೈಗೊಳ್ಳತಕ್ಕ ನಿರ್ಧಾರಕ್ಕೆ ವಿರೋಧಾಭಿಪ್ರಾಯವನ್ನು ಜನತೆಯ ಮೇಲೆ ಬೀರತಕ್ಕ ಸಾಹಸವನ್ನು ಮಾಡುತ್ತಿದ್ದಾರೆ. ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಆದ್ದರಿಂದ ಇಂತಹ ಪ್ರಯತ್ನಗಳಿಗೆ ಯಾರೂ ಹೋಗಬಾರದು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಎರಡು ಕರ್ಣಾಟಕ ಆಗಬೇಕು ಎನ್ನುವ ವಾದವನ್ನು ಅನೇಕ ಮಿತ್ರರು ಹೂಡುತ್ತಿದ್ದಾರೆ. ಅಷ್ಟೇ ಅಲ್ಲ. ದೇಶದಲ್ಲಿ ಈ ಬಗ್ಗೆ ಒಂದು ಅಭಿಪ್ರಾಯವನ್ನು ಸಂಘಟಿಸುವ ಸಾಹಸದಲ್ಲಿ ತೊಡಗಿದ್ದಾರೆ. ಇದು ನಮ್ಮ ಮನಸ್ಸಿಗೆ ಬಹಳ ನೋವನ್ನುಂಟುಮಾಡತಕ್ಕ ವಿಚಾರ. ನಮ್ಮ ಮಿತ್ರರು ಈ ರಾಜ್ಯ ವಿಸ್ತಾರದಿಂದ ಏನೋ ಒಂದು ಅನರ್ಥ, ಏನೋ ತೊಂದರೆಗಳು ಬರಬಹುದು ಎಂದು ಭಾವಿಸಿರಬಹುದು. ನಿಜವಾಗಿಯೂ ಯೋಚನೆಮಾಡಿ ನೋಡಿದರೆ ಆ ತೊಂದರೆಗಳು ನಮಗೆ ಬರಬೇಕಾಗಿದ್ದರೆ, ಅವರ ಪ್ರಮಾಣ ಬಹಳ ಕಡಮೆ. ಆದ್ದರಿಂದ ಕೊಂಚ ಅನಾನುಕೂಲಗಳು ನಮಗೆ ಸಂಭವಿಸುವುದಾದರೂ ಒಟ್ಟಿನಲ್ಲಿ ನಮಗೆ ಉದಯವಾಗಲಿರುವ ಹೊಸ ಪ್ರಾಂತ್ಯ ಒಳ್ಳೆಯ ಸಂಪತ್ತಿನಿಂದ ಕೂಡಿದೆ, ಭರತಖಂಡಕ್ಕೆ ಅತ್ಯಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಲು ಬೇಕಾದಂಥ ಸಕಲ ಸಂಪತ್ತು ಅಲ್ಲಿ ಅಡಕವಾಗಿದೆ. ನಾವು ಹಾಗೆಯೇ ಒಮ್ಮೆ ನೋಡೋಣ. ಹೊಸದಾಗಿ ಬರತಕ್ಕ ಹೈದರಾಬಾದಿನ ಜಿಲ್ಲೆಗಳು ಬಹಳವಾಗಿ ಕೃಷಿಯಲ್ಲಿ ಮುಂದುವರಿದ ಪ್ರದೇಶ. ಮೈಸೂರು ಸಂಸ್ಥಾನವಾದರೋ ಅನೇಕ ವರ್ಷಗಳಿಂದ ಆಹಾರದ ಕೊರತೆಯನ್ನು ಅನುಭವಿಸಿಕೊಂಡು ಬಂದಿದೆ. ಅಲ್ಲಿನ ಎರಡು ಜಿಲ್ಲೆಗಳೂ ಸೇರಿಬಿಟ್ಟರೆ ನಮ್ಮ ಆಹಾರದ ಕೊರತೆಯು ನೀಗುವುದರಲ್ಲಿ ಯಾವ ಸಂಶಯವೂ ಇಲ್ಲ. ಅಂಕಿ ಅಂಶಗಳನ್ನು ಇನ್ನೂ ಅನೇಕ ಸಾರಿ ಚರ್ಚಿಸಿದ್ದೇವೆ. ಹಾಗೆಯೇ ಅನಿರೀಕ್ಷಿತವಾಗಿ ಬೆಳಗಾಂ ಪಟ್ಟಣ ಬಂದಿದೆ, ಅದು ದೊಡ್ಡಲಾಭ ಎಂದು ಹೇಳಬಹುದು. ಇಡೀ ಹಿಂದೂಸ್ಥಾನದಲ್ಲಿ ದೊಡ್ಡದಾದಂಥ ಮತ್ತು ಭಾರತದಲ್ಲಿ ಎರಡನೆಯದಾದ ಅಲ್ಯೂಮಿನಿಯಂ ಕಾರ್ಖಾನೆಗೆ ಬೇಕಾದ ಅದುರು ಇಲ್ಲಿ ಸಿಕ್ಕುವುದು. ಬೆಳಗಾಂ ಇದುವರೆಗೆ ಅದನ್ನು ಉಪಯೋಗಿಸಿಕೊಂಡಿಲ್ಲ. ಬರತಕ್ಕ ಯುಗದಲ್ಲ ಕಬ್ಬಿಣ ಎಷ್ಟು ಉಪಕಾರಿ ಆಗಿದೆಯೋ ಅಷ್ಟೇ ಮಹತ್ತರವಾದ ಪಾತ್ರವನ್ನು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವಹಿಸುವಷ್ಟು ಮಹತ್ವ ಅಲ್ಯೂಮಿನಿಯಮ್ಮಿಗೆ ಇದೆ. ಅಲ್ಯೂಮಿನಿಯಂ ಕಾರ್ಖಾನೆಗೆ ಬೇಕಾದಂಥ ಸಕಲ ಸೌಕರ್ಯಗಳು ಬೆಳಗಾಂನಲ್ಲವೆ. ಹಾಗೆ ಧಾರವಾಡ ಹೋಬಳಿಯಲ್ಲಿ ಘಟಪ್ರಭಾ ಮತ್ತು ಮಲಪ್ರಭಾ ಜಲಾಶಯಗಳು ನಿರ್ಮಾಣವಾಗುವುದರಿಂದ ಆ ಪ್ರದೇಶ ಅಭಿವೃದ್ಧಿಯಾಗುತ್ತದೆ. ಅಲ್ಲಿ ಸಕ್ಕರೆ ಕಾರ್ಖಾನೆ ಮತ್ತು ಇನ್ನೂ ಎಷ್ಟೋ ಕೈಗಾರಿಕೆಗಳಿಗೆ ಬೇಕಾದಷ್ಟು ಅನುಕೂಲಗಳಿವೆ. ಮೈಸೂರಿನ ವೈಶಿಷ್ಟ್ಯವನ್ನು ನಾನು ಮತ್ತೆ ನಿಧಾನವಾಗಿ ಪ್ರಸ್ತಾಪಮಾಡುತ್ತೇನೆ. ಧಾರವಾಡ ಜಿಲ್ಲೆಯಲ್ಲಿರುವ ನದಿಗೆ ಜಲಾಶಯ ನಿರ್ಮಾಣವಾದಲ್ಲಿ ಶರಾವತಿ ನದಿಯಲ್ಲಿ ಎಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಬಹುದೋ ಅಷ್ಟೇ ಉತ್ಪತ್ತಿಯನ್ನು ಇಲ್ಲಿ ಮಾಡುವ ಅವಕಾಶವಿದೆ. ಅಲ್ಲದೆ 50 ಟನ್ ಪೇಪರ್‌ಮಾಡುವ ಕಾರ್ಖಾನೆಗೆ ಬೊಂಬಾಯಿ ಸರ್ಕಾರದವರು ಮೊನ್ನೆ ತಾನೇ ಲೈಸೆನ್ಸ್ ಕೊಟ್ಟಿದ್ದಾರೆ. ಅಲ್ಲಿ ಹಿಂದೂಸ್ಥಾನದ ಯಾವುದೇ ಭಾಗದಲ್ಲಿ ಇಲ್ಲದೆ ಇರತಕ್ಕ ಅರಣ್ಯ ಸಂಪತ್ತು ಇದೆ. ಹಾಗೆ ಬಂದರೂ 200 ಮೈಲಿಗಳ ವಿಸ್ತಾರದ ಸಮುದ್ರತೀರವೂ ನಮಗೆ ದೊರೆಯುತ್ತದೆ. ಇವನ್ನೆಲ್ಲಾ ನಾವು ದೊಡ್ಡ ದೃಷ್ಟಿಯಿಂದ ವಿಶಾಲಭಾವನೆಯಿಂದ ಕೇವಲ ರಾಷ್ಟ್ರ ನಿರ್ಮಾಣ ತಳಹದಿಯ ಮೇಲೆ ಲೆಕ್ಕಾಚಾರ ಹಾಕಿ ನೋಡಿದರೆ ಆರ್ಥಿಕವಾಗಿಯಾಗಲಿ ಅಥವಾ ಸಾಂಪತ್ತಿಕವಾಗಿಯಾಗಲಿ ನಮಗೆ ಲಾಭ ಹೆಚ್ಚಾಗಿದೆಯೇ ಹೊರತು ಯಾವ ನಷ್ಟವೂ ಇರುವುದಿಲ್ಲ ಎಂಬುದನ್ನು ಖಚಿತವಾಗಿ ಹೇಳಬಹುದು.

1-30 P.M.

ಶ್ರೀ ಟಿ. ಮರಿಯಪ್ಪ (ಮೈಸೂರು ನಗರ-ಉತ್ತರ).—ಸಮುದ್ರ ತೀರದಲ್ಲಿ ಮೀನು ಸಿಕ್ಕುತ್ತದೆ.

ಶ್ರೀ ಬಿ. ಮಾಧವಾಚಾರ್.—ಹೌದು, ಬೇಕಾದಷ್ಟು ಸಿಕ್ಕುತ್ತದೆ. ಮದರಾಸು ಸರ್ಕಾರದವರು ಹತ್ತು ಲಕ್ಷ ರೂಪಾಯಿ ಖರ್ಚುಮಾಡಿ ಸ್ಟೋರೇಜ್ ಪ್ಲಾಂಟ್ ಕಟ್ಟಿದ್ದಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅವರು ಆಹಾರ ಮಂತ್ರಿಗಳಾಗಿದ್ದಾಗ ಆಹಾರ ಧಾನ್ಯಕ್ಕೆ ಬದಲು ಮೀನುಗಳನ್ನು ತರಿಸಿ ಸರಬರಾಯಿ ಮಾಡುತ್ತಿದ್ದರೆ? (ನಗು!)

ಶ್ರೀ ಬಿ. ಮಾಧವಾಚಾರ್.—ಇಷ್ಟೇ ಅಲ್ಲದೆ ಆ ಪ್ರಾಂತಗಳ ಜನ ಇತರ ಸರ್ಕಾರಗಳ ಕೈಗೆ ಸಿಕ್ಕಿ, ತಮ್ಮ ಸಾಮಾಜಿಕ ರಚನೆಯಲ್ಲಿ ಭಿನ್ನ ಭಿನ್ನ ಭಾವನೆಗಳನ್ನು ಬೆಳಸಿಕೊಂಡು ಬಂದುದಲ್ಲದೆ, ಅವರು ಕನ್ನಡ ಪ್ರದೇಶದವರೆಂಬ ಕಾರಣದಿಂದ, ಹೆಚ್ಚಿನ ಮುತುವರ್ಜಿ ವಹಿಸಿ ಅವರ ಬೆಳವಣಿಗೆಗೆ ಅಭಿವೃದ್ಧಿಗೆ ಅಲ್ಲಿನ ಸರ್ಕಾರಗಳು ಪ್ರೋತ್ಸಾಹ ಕೊಟ್ಟಿಲ್ಲ. ಅದರ ಫಲವಾಗಿ, ಅಲ್ಲಿ ಪ್ರಕೃತಿಯ ಗರ್ಭದಲ್ಲಿ ಅಡಗಿರುವ ನಾಗರಿಕ ಜೀವನವನ್ನು ಅಭಿವೃದ್ಧಿಪಡಿಸುವುದಕ್ಕೆ ಸಾಧಕವಾದ ಅನೇಕ ಸಲಕರಣೆಗಳು ಬೆಳಕಿಗೆ ಬಂದಿಲ್ಲ. ಕೆಲವು ದಿನಗಳ ಹಿಂದೆ ಒಬ್ಬರು ಸ್ನೇಹಿತರೊಡನೆ ಮಾತನಾಡುತ್ತಿದ್ದಾಗ ಅವರು, 'ಪಶ್ಚಿಮಘಟ್ಟಗಳ ಪ್ರದೇಶದ ಉದ್ದಕ್ಕೂ ಪ್ರವಾಸಮಾಡಿದೆ, ಅಲ್ಲಿ ಜಲಪಾತಗಳು ಒಂದಲ್ಲ, ಎರಡಲ್ಲ, ಹತ್ತು ಇವೆ. ಅವುಗಳನ್ನೆಲ್ಲಾ ವಿದ್ಯುಚ್ಛಕ್ತಿ ಉತ್ಪತ್ತಿಗೆ ಉಪಯೋಗಿಸಿಕೊಂಡರೆ, ಬೊಂಬಾಯಿ ಮದರಾಸು ಇವರೆಲ್ಲ ಎಷ್ಟು ಕೇಳಿದರೂ ಕೊಡುವಷ್ಟು

ಉತ್ಪತ್ತಿ ಮಾಡಬಹುದು, ಎಂದು ಹೇಳಿದರು. ಅಲ್ಲದೆ ಖನಿಜ ಸಂಪತ್ತು ಅಲ್ಲಿ ಎಷ್ಟು ದೊರಕುತ್ತದೆಂಬುದನ್ನು ಸರ್ವೆಮಾಡಿದ ಸರ್ಕಾರವಿಲ್ಲ. ಅಂದಮಾತ್ರಕ್ಕೇ ಮೈಸೂರು ಸರ್ಕಾರ ಪ್ರಗತಿ ಸಾಧಿಸಿದೆ, ಈ ಮಟ್ಟಕ್ಕೆ ಬೇರೆ ಪ್ರದೇಶ ಬಂದಿಲ್ಲ ಎಂದು ಹೇಳುವುದಕ್ಕೆ ಹೋಗಬಾರದು. ಇಲ್ಲಿ ವೈಜ್ಞಾನಿಕ ವಿಧಾನಗಳನ್ನು ಉಪಯೋಗಿಸಿದ್ದೇವೆ. ಬೇರೆ ಕನ್ನಡ ಪ್ರದೇಶಗಳಲ್ಲಿಯೂ ಹೀಗೆ ಉಪಯೋಗಿಸಿದರೆ ಅಲ್ಲಿಯೂ ಇದೇ ರೀತಿ ಕೆಲಸ ಮಾಡಬಹುದೆಂಬ ವಿಶ್ವಾಸವಿದೆ. ಆ ವಿಶ್ವಾಸ, ವಿಶಾಲ ಭಾವನೆ ಬಂದರೆ, ನಾವು ಈಗ ಏನೊಂದು ಭ್ರಾಂತಿಯಲ್ಲಿ ಸಿಕ್ಕಿದ್ದೇವೋ ಅದರಿಂದ ದೂರವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ದಿವಸ ನಮ್ಮ ಸಭಾನಾಯಕರೂ, ವಿರೋಧಪಕ್ಷದ ನಾಯಕರೂ ದೊಡ್ಡ ರಾಜಕೀಯ ಪಕ್ಷ ಸೂತ್ರ ಹಿಡಿದಿರುವ ಅಧ್ಯಕ್ಷರೂ, ಕೇಂದ್ರ ಸರ್ಕಾರದ ನಾಯಕರೂ ಹಿತನುಡಿಗಳನ್ನು ನುಡಿಯುತ್ತಿರುವಾಗ, ಒಟ್ಟು ರಾಷ್ಟ್ರದ ಹಿತ ಪುನರ್ನಿರ್ಮಾಣದಲ್ಲಿ, ಪುನರ್ವಿಂಗಡಣೆಯಲ್ಲಿ ಅಡಕವಾಗಿದೆ ಎಂದು ಹೇಳುವಾಗ, ಇದರಲ್ಲಿ ಭಿನ್ನಾಭಿಪ್ರಾಯ ಸೂಚಿಸುವುದೇ ಆಗಲಿ ಉದ್ರೇಕಗೊಳ್ಳುವುದೇ ಆಗಲಿ, ದೇಶಪ್ರೇಮವೆನಿಸಿಕೊಳ್ಳಲಾರದು. ನಮಗೆ ಸ್ವಲ್ಪ ಸಣ್ಣಪುಟ್ಟ ತೊಂದರೆಗಳಾಗಬಹುದು. ಆದರೆ ರಾಷ್ಟ್ರದ ದೊಡ್ಡ ದೊಡ್ಡ ಸಮಸ್ಯೆಗಳನ್ನು ನೂರಾರುವರ್ಷಗಳ ಕಾಲ ರಾಷ್ಟ್ರದ ಏಳಿಗೆ ಮತ್ತು ಹಿತಸಾಧನೆಯಾಗತಕ್ಕ ಸಮಸ್ಯೆಗಳನ್ನು ಚರ್ಚೆಮಾಡುವಾಗ ಅಥವಾ ತೀರ್ಮಾನಮಾಡುವಾಗ, ವೈಯುಕ್ತಿಕವಾದ ಅಥವ ನಾಲ್ಕಾರುಮಂದಿಯ ಹಿತಾಹಿತಗಳನ್ನು ಎಣಿಸಬಾರದು ಎಂಬುದು ನಾವು ಕಲಿಯಬೇಕಾದ ಪಾಠ. ಅಲ್ಲಿನ ಜನರನ್ನು ನಾವು ಸರಿಯಾಗಿ ತಿಳಿದುಕೊಂಡಿಲ್ಲವೆಂದು ನಾನು ಹೇಳತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವಾಗಿ ನಾನು ಮಾತಾಡುವುದಿಲ್ಲ. ಏಕೆಂದರೆ, ಇದರ ವಿಷಯವಾಗಿ ಕೆಲವು ಸದಸ್ಯರು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯವರು ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ಕರನಿರಾಕರಣ ಚಳುವಳಿಯಲ್ಲಿ, ಹಿಂದೂಸ್ಥಾನದಲ್ಲಿ ಯಾರೂ ತೋರಿಸದೇಯಿರುವ ತ್ಯಾಗವನ್ನು ತೋರಿಸಿದ್ದಾರೆ. ಈ ಕರನಿರಾಕರಣೆಯ ಚಳುವಳಿಯಲ್ಲಿ ಅಂಕೋಲ, ಸಿರಸಿ, ಸಿದ್ದಾಪುರ ಮುಂತಾದ ಪ್ರದೇಶದ ಜನರೆಲ್ಲರೂ ಭಾಗವಹಿಸಿದ್ದಾರೆ, ಮೈಸೂರಿನವರೂ ಹೋಗಿ ಕೆಲಸಮಾಡಿದ್ದಾರೆ. ಶ್ರೀಗಳಾದ ಎಂ. ಎಚ್. ಜೋಯಿಸರು, ವೆಂಕಟರಾಮಯ್ಯನವರು, ರುಮಾಲೆ ಚನ್ನಬಸವಯ್ಯನವರು ಮುಂತಾದವರೂ ಕೆಲಸಮಾಡಿದ್ದಾರೆ. ಅಂಕೋಲ ಸತ್ಯಾಗ್ರಹ, ಸಿರಸಿ ಸತ್ಯಾಗ್ರಹ, ಬರ್ಡೋಲಿ ಸತ್ಯಾಗ್ರಹ ಇವುಗಳ ವಿಚಾರ ಇಡೀ ಭಾರತದ ಜನತೆಯಲ್ಲಿ ಎಲ್ಲರಿಗೂ ಗೊತ್ತಿದೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಇದೆಲ್ಲವನ್ನೂ ಈ ವರದಿಯಲ್ಲಿ ಹೇಳಿಲ್ಲ. ಇದರಲ್ಲಿರುವ ವಿಚಾರವನ್ನು ಕುರಿತು ಮಾತನಾಡಿ.

ಶ್ರೀ ಬಿ. ಮಾಧವಾಚಾರ್.—ಇದರಲ್ಲಿರುವ ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕೆಂದಿದ್ದೇನೆ. ಕಾಲಾವಕಾಶವಾಗುತ್ತದೆಯೋ ಏನೋ ಗೊತ್ತಿಲ್ಲ.

ಅಂಜಿಕೆಗೆ ಸರಿಯಾದ ಕಾರಣವಿದ್ದರೆ ಒಪ್ಪುತ್ತೇನೆ. ಆದರೆ ನಾವು ಅಂಜಬೇಕಾದ ಕಾರಣವೇ ಇಲ್ಲ. ಮಹಾತ್ಮಾ ಗಾಂಧಿಯವರ ತತ್ವದಲ್ಲಿ ನಿಷ್ಠೆಯಿಂದ ಕೆಲಸ ಮಾಡುವ ಕಾಲದಲ್ಲಿ ಏನಾದರೂ ಸ್ವಲ್ಪ ಅಚಾತುರ್ಯ ಅಥವಾ ಅಡಚಣೆ ಕಂಡುಬಂದರೂ ಸತ್ಯಕ್ಕೆ, ನ್ಯಾಯಕ್ಕೆ ಜಯವಿದೆ ಎನ್ನುವ ಕಾಲದಲ್ಲಿ ನಾವೆಲ್ಲರೂ ಸೇರಿ ಕನ್ನಡ ಜನದ ಐಕಮತ್ಯಕ್ಕೆ ಶ್ರಮಿಸಿದರೆ ನಮಗೂ ದೇಶಕ್ಕೂ ಶ್ರೇಯಸ್ಸಾಗುತ್ತದೆ. ಅಲ್ಲದೆ ಒಟ್ಟು ಭಾರತವನ್ನೂ ಉತ್ತಮಸ್ಥಿತಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಉತ್ತರ ಕನ್ನಡ ನಾಡಿನಲ್ಲಿ ಅನೇಕ ಮೇಧಾವಿಗಳಿದ್ದಾರೆ. ಅನೇಕರಿಗೆ ತಮ್ಮ ಪ್ರದೇಶದಲ್ಲಿ ಸಾಕಷ್ಟು ಪ್ರೋತ್ಸಾಹವಿಲ್ಲ. ಬೆನಗಲ್ ಮನೆತನ ರಾಷ್ಟ್ರದ ಕೀರ್ತಿಯನ್ನೇ ಬೆಳಸಿದೆ. ಪ್ರತಿಯೊಬ್ಬರೂ ತಮ್ಮ ಬುದ್ಧಿಶಕ್ತಿಯನ್ನು ಸರಿಯಾಗಿ ಉಪಯೋಗಿಸಿದರೆ ನಿಜವಾಗಿ ನಾಡಿಗೆ ಸೇವೆ ಸಲ್ಲಿಸಿದಹಾಗಾಗುತ್ತದೆಯಲ್ಲದೆ ನಮ್ಮ ಸ್ಥಾನಮಾನಗಳೂ ಭಾರತದಲ್ಲಿ ಇನ್ನೂ ಮೇಲ್ಮಟ್ಟಕ್ಕೆ ಬರುತ್ತವೆ. ಆದುದರಿಂದ ನಾವು ವಿಶಾಲದೃಷ್ಟಿಯನ್ನು ಬಿಟ್ಟು, ಎರಡು ಕರ್ಣಾಟಕದ ತತ್ವವನ್ನು ಒಪ್ಪಿಕೊಂಡರೆ ಬಹಳ ಕಳವಳಕ್ಕೆ ಗುರಿಯಾಗುತ್ತೇವಲ್ಲದೆ, ಅದರಿಂದ ಯಾವ ಪ್ರಯೋಜನವೂ ಇಲ್ಲ. ಈ ಸಂಬಂಧವಾಗಿ ಈ ಹೊತ್ತು ಇಲ್ಲಿ ಕೆಲವರು ಚಳವಳಿ ಮಾಡುತ್ತಿರಬಹುದು. ಇದೇ ರೀತಿ ಚಳವಳಿಯನ್ನು ಇತರ ಭಾಗದವರೂ ಪ್ರಾರಂಭಮಾಡಿದರೆ ಅಲ್ಲೋಲಕಲ್ಲೋಲವಾಗಬಹುದು. ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದು ರೀತಿ ಚಳವಳಿ ಏಳಬಹುದು, ಪ್ರಚಾರ ಏಳಬಹುದು. ಆದುದರಿಂದ ಯಾವ ವಿಷಯ ಒಂದು ರೀತಿಯಲ್ಲಿ ಇತ್ಯರ್ಥವಾಗುವುದರಲ್ಲಿ ನಮಗೆ ಯಾವ ನಷ್ಟವೂ ಆಗುವುದಿಲ್ಲವೋ, ಯಾವ ತೊಂದರೆಯೂ ಆಗುವುದಿಲ್ಲವೋ, ಒಟ್ಟಿನಲ್ಲಿ ಅನುಕೂಲ ಬರುತ್ತದೆಯೋ ಅಂಥ ವಿಷಯದಲ್ಲಿ ಚಳುವಳಿ ಮಾಡಿದರೆ ಪರಿಣಾಮವೇನಾಗುತ್ತದೆಂಬುದನ್ನು ಯೋಚನೆಮಾಡಬೇಕು. ಒಟ್ಟಿನಲ್ಲಿ ನಮ್ಮ ರಕ್ಷಣೆಯ ಹೊಣೆಯನ್ನು ಕೇಂದ್ರ ಸರ್ಕಾರ ಹೊತ್ತಿದೆ, ನಮ್ಮ ಆಗುಹೋಗುಗಳು ಅವರ ಕೈಯಲ್ಲಿವೆ. ಒಳಾಡಳಿತ ಮತ್ತು ಒಟ್ಟು ರಾಷ್ಟ್ರದ ಸಂರಕ್ಷಣೆಯ ಕಾರ್ಯ ಕೇಂದ್ರ ಸರ್ಕಾರದ ಕೈಯಲ್ಲಿದೆ. ಹೀಗಿರುವಾಗ ಅವರನ್ನೂ ಕೂಡ ವಿರೋಧಿಸಿ ಚಳವಳಿಮಾಡುವುದಕ್ಕೆ ಹೊರಟಿದ್ದಾರೆ. ಇದು ಮೂರ್ಖ ಸಾಹಸ ಎನ್ನುವುದನ್ನು ಇತಿಹಾಸಕಾರರು ಬರೆಯುವುದಿಲ್ಲವೆ ಎಂಬುದನ್ನು ಯೋಚನೆಮಾಡಬೇಕು. ನಾನು ವಿನಯದಿಂದ ನಿವೇದಿಸುತ್ತೇನೆ. ರಾಷ್ಟ್ರ ವಿಸ್ತಾರವಾಗುವುದು ಖಂಡಿತ. ಇದರೊಡನೆ ನಮ್ಮ ಮನಸ್ಸೂ ಹೃದಯವೂ ವಿಸ್ತಾರಗೊಳ್ಳಲಿ, ರಾಷ್ಟ್ರಪ್ರೇಮ ನಮ್ಮ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರಲಿ, ಮಹಾತ್ಮಾ ಗಾಂಧಿಯವರ ಧ್ಯೇಯಗಳೂ, ತತ್ವಗಳೂ ನಮ್ಮ ಕಾರ್ಯಕಲಾಪಗಳಿಗೆ ಮುಂಬೆಳಕಾಗಿ ನಿಂತು ರಾಷ್ಟ್ರ ಪುನರ್ನಿರ್ಮಾಣವಾಗಲಿ. ಈ ವರದಿಯನ್ನು ಸ್ವಾಗತಿಸೋಣ. ಬಳ್ಳಾರಿ, ಚಂದ್ರಗಿರಿ, ಕಾಸರಗೋಡು ಪ್ರದೇಶವನ್ನು ನಮಗೆ ಸೇರಿಸಬೇಕೆಂದು ಕೇಳಿಕೊಳ್ಳೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಎಸ್. ಆರ್. ಸಿ. ವರದಿಯನ್ನು ಸ್ವಾಗತಿಸೋಣ ಎಂದು ಹೇಳಿದರೆ, ಬಳ್ಳಾರಿ ವಿಷಯದಲ್ಲಿಯೂ ಈ ವರದಿಯಲ್ಲಿ ಹೇಳಿರುವುದನ್ನು ಸ್ವಾಗತಿಸೋಣ ಎಂದರ್ಥವಾಗುತ್ತದೆ.

ಅಧ್ಯಕ್ಷರು.—ಅದು ತಮ್ಮ ಅಭಿಪ್ರಾಯ; ಆಮೇಲೆ ಹೇಳಬಹುದು.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ನ).—ಸ್ವಾಮಿ, ಈ ರಾಜ್ಯಗಳ ಪುನರ್ವಿಂಗಡಣೆಯ ಸಮಿತಿಯ ವರದಿಯ ವಿಷಯದಲ್ಲಿ ಈಗಂತೂ ಮಾತನಾಡುವುದು ಬಹಳ ಕಷ್ಟವಾಗಿದೆ. ಏನೇ ಕಷ್ಟವಿದ್ದರೂ ನಾನು ನನ್ನ ಅಭಿಪ್ರಾಯಗಳನ್ನು ತಿಳಿಸುವುದು ಅಗತ್ಯ. ಶ್ರೀಮಾನ್ ಹನುಮಂತಯ್ಯನವರು ನನ್ನ ಕಡೆ ನೋಡಿ ನಗುತ್ತಿದ್ದಾರೆ.

ಶ್ರೀ ಕೆ. ಹನುಮಂತಯ್ಯ.—ಏಕೆಂದರೆ, ನಾನು ಯಾವಾಗಲೂ ನಗುವ ಹಾಗೆ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುವುದಕ್ಕಾಗಿ (ನಗು!)

ಶ್ರೀ ಪಿ. ವೆಂಕಟಪ್ಪ.—ಸ್ವಾಮಿ, ಶ್ರೀಮರ್ಾ ಹನುಮಂತಯ್ಯನವರಿಗೆ ನಾಲ್ಕು ವ್ಯಕ್ತಿತ್ವವಿದೆ. ವೈಯಕ್ತಿಕವಾಗಿ, ಸಭಾನಾಯಕರಾಗಿ, ಪಕ್ಷದ ನಾಯಕರಾಗಿ, ಆಮೇಲೆ ಮುಖ್ಯ ಮಂತ್ರಿಗಳಾಗಿ...

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ನಾಲ್ಕು ನಾಲಗೆಗಳಿವೆ. (ನಗು!)

ಶ್ರೀ ಪಿ. ವೆಂಕಟಪ್ಪ.—ನಾಲ್ಕು ನಾಲಗೆಗಳಿವೆ. ಆದುದರಿಂದ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ನಾಲಗೆಯಿಂದ ಮಾತನಾಡಿದರೋ ನನಗೆ ಗೊತ್ತಿಲ್ಲ. ಆದರೆ ಅವರು ಏನೇನು ಮಾತನಾಡಿದ್ದಾರೆಂಬುದನ್ನು ನಾನೀಗ ಪ್ರಸ್ತಾಪಿಸುವುದು ಅನಗತ್ಯ. ಈ ದಿವಸ ನಮ್ಮ ಮುಂದಿಟ್ಟಿರತಕ್ಕ ವಿಷಯವನ್ನು ಮಾತ್ರ ನಾನು ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಅವರ ಭಾಷಣವನ್ನು ಪರಿಶೀಲಿಸಲು ಪ್ರಯತ್ನಪಡುವುದಿಲ್ಲ. ನಮ್ಮ ಮುಂದಿರತಕ್ಕ ಸಮಿತಿಯ ವರದಿಯ ವಿಚಾರದಲ್ಲಿ ಏನು ವಿಷಯವನ್ನು ತಮ್ಮ ಮುಂದಿಡಬಹುದೆಂಬುದನ್ನು ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ.

ನಮ್ಮ ಪಕ್ಷದ ನಾಯಕರೂ, ಎದುರು ಪಕ್ಷದ ನಾಯಕರೂ ಇಬ್ಬರೂ ಬಹಳ ಮಟ್ಟಿಗೆ ಹಿಂದೆ ನಾವು, ಕಾಂಗ್ರೆಸ್ ಪಕ್ಷದವರು ಏನು ತೀರ್ಮಾನಗಳನ್ನು ಮಾಡಿಕೊಂಡಿದ್ದೆವೋ ಅದನ್ನು ಹೇಳಿದರು. ಅದರಲ್ಲಿಯೂ ಶ್ರೀಮರ್ಾ ಇಮಾಂ ಸಾಹೇಬರು ಎರಡುವೇಳೆಯೂ ಅಂಕಿ ಅಂಶಗಳ ಸಮಿತಿಯ ವರದಿಯ ಮೇಲೆ ಮಾತನಾಡುವಾಗ ಮತ್ತು ಮೊನ್ನೆ S.R.C. ವರದಿಯಮೇಲೆ ಮಾತನಾಡುವಾಗ ಈ ಎರಡು ವೇಳೆಯೂ ಆ ವಿಷಯವನ್ನು ನಮ್ಮ ಗಮನಕ್ಕೆ ಒತ್ತಿ ಒತ್ತಿ ಹೇಳಿದ್ದಾರೆ. ಕಾಂಗ್ರೆಸ್‌ನವರು ಏನು ತೀರ್ಮಾನ ಮಾಡಿದ್ದಾರೋ ಅದನ್ನು ನಾವು ಪರಿಪಾಲಿಸಬೇಕೆ. ಮಹಾತ್ಮ ಗಾಂಧಿಯವರು ಏನೇ ಹೇಳಿದರೂ ಅದನ್ನು ನಾವು ಪರಿಪಾಲಿಸುತ್ತಿದ್ದೇವೆಯೇ ಇಲ್ಲವೇ ಎಂಬ ಬಗ್ಗೆ ಪಾಠವನ್ನು ಶ್ರೀ ಇಮಾಂ ಸಾಹೇಬರು ನಮಗೆ ಹೇಳಿಕೊಡಬೇಕಾದುದು ಅನಗತ್ಯವೆಂದು ನಾನು ಹೇಳದೆ ವಿಧಿಯಿಲ್ಲ. ದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದನೆ ಮಾಡಿಕೊಡಬೇಕೆಂದು ಪ್ರಯತ್ನಪಟ್ಟವರಿಗೆ ಶಿಕ್ಷೆಮಾಡುವುದಕ್ಕೆ ಸಿದ್ಧರಾಗಿದ್ದಂಥವರು ಈ ಹೊತ್ತು ದೇಶವನ್ನು ದೊಡ್ಡದು ಮಾಡುತ್ತೇವೆ, ನೀವು ಏಕೆ ಅಡ್ಡಿಮಾಡುತ್ತೀರಿ ಎಂದು ಹೇಳುತ್ತಾರೆ. ಇದು ವಿಚಿತ್ರವೇ ಸರಿ. ಮಹಾತ್ಮಾ ಗಾಂಧಿಯವರು ಹೇಳಿರತಕ್ಕ ತತ್ವಗಳಲ್ಲಿ ಯಾವುದಾದರೂ ಒಂದನ್ನಾದರೂ ಪಾಲಿಸಿ, ನಾವು ಯಾವುದನ್ನೂ ಪಾಲಿಸುತ್ತಿಲ್ಲವೆಂದು ನಮಗೆ ಅವರು ಹೇಳಿದ್ದರೆ ನಾವು ಸ್ವಲ್ಪಮಟ್ಟಿಗೆ ತಲೆಬಗ್ಗಿಸಬೇಕಾಗಿತ್ತೋ ಏನೋ. ಕೆಲವು ಸಲ ಇಡೀ ದೇಶದ ಹಿತದೃಷ್ಟಿಯಿಂದ ಕಾಂಗ್ರೆಸ್ ನೀತಿಯನ್ನು ಖಂಡನೆ ಮಾಡಬೇಕಾಗುತ್ತದೆ. ಅವರ ಪಕ್ಷದ ನಾಯಕರು ಕಾಂಗ್ರೆಸ್ ಧುರೀಣರಲ್ಲಿ ಒಬ್ಬರಾಗಿದ್ದ ಕೃಪಲಾನಿಯವರು ಕಾಂಗ್ರೆಸ್‌ನೊಡನೆ ಭಿನ್ನಾಭಿಪ್ರಾಯ ಬಂದು ಆ ಸಂಸ್ಥೆಯಿಂದ ಹೊರಗೆ ಬಂದು ಒಂದು ಬೇರೆ ಸಂಸ್ಥೆಯನ್ನು ಕಟ್ಟಿದರು. ಅವರು ತಮ್ಮ ಪಕ್ಷದವರೆಲ್ಲರೂ ಖಾದಿ ಹಾಕಿಕೊಳ್ಳಬೇಕೆಂದು ಹೇಳಿದರೂ ಅದನ್ನು ಹಾಕಿಕೊಳ್ಳಲಿಲ್ಲ. ಆದದರಿಂದ ಅಂಥವರು ನಾವು ನಮ್ಮ ತತ್ವವನ್ನು ಪರಿಪಾಲನೆ ಮಾಡಿದ್ದೇವೋ ಇಲ್ಲವೋ ಎಂದು ನಮಗೆ ಹೇಳುವುದು ಅನಾವಶ್ಯಕವೆಂದು ಹೇಳದೆ ವಿಧಿಯಿಲ್ಲ. ಒಂದುಮಾತು, ಮಹಾತ್ಮಾ ಗಾಂಧಿಯವರ ಹೆಸರನ್ನು ನಾವೆಲ್ಲ ಹೇಳಿ ಹೇಳಿ, ಈಗ ಒಬ್ಬರು ಸದಸ್ಯರು ಹೇಳಿದಹಾಗೆ, ಅಗ್ಗಮಾಡುತ್ತಿದ್ದೇವೆ. ಯಾರು ಯಾರಿಗೆ ಯಾವ ಯಾವ ಸಂದರ್ಭಕ್ಕೆ ಬೇಕಾಗುತ್ತದೋ ಅದಕ್ಕೆ ಮನಸ್ಸು ಉಪಯೋಗಿಸುತ್ತಿದ್ದೇವೆ. ಮಹಾತ್ಮ ಗಾಂಧಿಯವರು ಭಾಷಾ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಹೇಳಿದ್ದರೆಂದು ಹೇಳಿ ವಾದ ನಡೆಯುತ್ತಿದೆ! ನಾನೂ, ಅದನ್ನೇನೂ ಇಲ್ಲವೆಂದು ಹೇಳುವುದಿಲ್ಲ. ಆದರೆ, ಮಹಾತ್ಮಾ ಗಾಂಧಿಯವರು ಎಲ್ಲೇ ಆದರೂ ಯಾವ ಪ್ರಾಂತ್ಯ ಒಪ್ಪುವುದಿಲ್ಲವೋ ಅದನ್ನು ನಿರ್ಬಂಧವಾದರೂ ಮಾಡಿ ಇನ್ನೊಂದು ಪ್ರಾಂತ್ಯದ ಜೊತೆಗೆ ಸೇರಿಸಬೇಕೆಂದು ಎಂದಾದರೂ ಹೇಳಿದ್ದರೆ, ಅವರು ಹೇಳಿದ ವಾದವನ್ನು ನಾನು ಒಪ್ಪುತ್ತೇನೆ. ಮಹಾತ್ಮಾ ಗಾಂಧಿಯವರ ಒಂದು ತತ್ವ, ಎಲ್ಲ ವಿಷಯದಲ್ಲೂ—ದೇಶವನ್ನು ಕಟ್ಟುವ ವಿಷಯದಲ್ಲೇ ಆಗಲಿ, ಇಂಗ್ಲೀಷರನ್ನು ದೇಶದಿಂದ ಹೊರಗೆ ಕಳುಹಿಸುವ ವಿಷಯದಲ್ಲೇ ಆಗಲಿ, ದೇಶದ ಒಗ್ಗಟ್ಟನ್ನು ಸಾಧಿಸುವ ವಿಷಯದಲ್ಲೇ ಆಗಲಿ—ಎಲ್ಲ ವಿಷಯದಲ್ಲೂ ಕೆಲವು ಜನರ ಮನಸ್ಸಿಗೆ ನೋವಾದರೂ ಕೂಡ ಅದನ್ನು ಮಾಡುವುದು ಸರಿಯಲ್ಲವೆಂದು ಹೇಳುವುದನ್ನು ಯಾರೂ ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಯಾರು ಯಾರು ಅವರನ್ನು ವಿರೋಧಿಸುತ್ತಿದ್ದರೋ ಅವರ ವಿಶ್ವಾಸವನ್ನೂ ಗಳಿಸುವುದು ಮುಖ್ಯವೆಂದು ಹೇಳಿ, ಅವರು ಬಹಳಮಟ್ಟಿಗೆ ಅವರ ಜೀವಮಾನದಲ್ಲಿ ತಮ್ಮ ಎದುರಾಳಿಯ ಮನಸ್ಸನ್ನು ಕರಗಿಸಿ ಅವರನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದರೇ ಹೊರತು "ನನಗೆ ದೇಶದ ಎಲ್ಲರ ಸಹಾಯವಿದೆ, ಯಾರೂ ಏನು ಮಾಡಬಲ್ಲರು?" ಎಂದು ಹೇಳಿದ ವ್ಯಕ್ತಿ ಅವರಲ್ಲ. ಆದ್ದರಿಂದ ನಾವು ಅವರ ಹೆಸರನ್ನು ಮನಸ್ಸಿಗೆ ಬಂದಂತೆ ಉಪಯೋಗಿಸಿಕೊಳ್ಳುವುದು ತಪ್ಪಾಗುತ್ತದೋ ಎಂದು ನನಗನ್ನಿಸುತ್ತದೆ.

ಇನ್ನು ಈ ರಿಪೋರ್ಟನ್ನೇ ಪರಿಶೀಲನೆ ಮಾಡುವುದಾದರೆ, ನಮ್ಮ ಸ್ನೇಹಿತರಾದ ಶ್ರೀಮರ್ಾ ಇಮಾಂ ಸಾಹೇಬರು ಇದುವರೆಗೂ ಏನು ವಾದ ಮಾಡಿದ್ದಾರೆಯೋ ಅದೆಲ್ಲಾ ಈ ರಿಪೋರ್ಟಿನಿಂದ ದೂರವಾದುದು. ಬರೀ ಏನು ನಡೆದುಬಂದಿದೆಯೋ ಅದನ್ನೆಲ್ಲಾ ಹೇಳೋಣವೆಂದು ಹೇಳಿದ್ದೇ ಹೊರತು, ವಾಸ್ತವಾಂಶವೇ ನೆಂಬುದರ ಕಡೆಗೆ ಅವರ ಪೂರ್ಣ ಗಮನಕೊಡಲಿಲ್ಲವಲ್ಲ ಎಂದು ನನಗೆ ವ್ಯಸನವಾಗುತ್ತಿದೆ. ಕಾಂಗ್ರೆಸ್ಸಿನವರು ಮಾತನಾಡಿಕೊಂಡ ಯಾವುದೋ ಇಸವಿಯನ್ನು ಹೇಳಿ, ಅದರ ಚರಿತ್ರೆಯನ್ನು ವಿವರಿಸಿ 'ಕಾಂಗ್ರೆಸ್ಸಿನವರು ಈ ರೀತಿ ತೀರ್ಮಾನಗಳನ್ನು ಮಾಡಿಕೊಂಡು ಬಂದರು, ಈಗ ಅದಕ್ಕೇಕೆ ತಪ್ಪಿನಡೆಯುತ್ತೀರಿ, ಕೊಟ್ಟಮಾತಿಗೆ ತಪ್ಪಿ ನಡೆಯುತ್ತಿದ್ದೀರಲ್ಲ?' ಎಂದು ಹೇಳಿದರು. ಅದು ದಿಟವೇ, ಅದು ಎಷ್ಟರಮಟ್ಟಿಗೆ ಸರಿಯೆಂಬುದನ್ನು ವಿಮರ್ಶೆಮಾಡಿ ಕಮಿಟಿಯವರೇ ಹೇಳಿದ್ದಾರೆ. 14ನೆಯ ಪುಟದಲ್ಲಿನ 57ನೆಯ ಪ್ಯಾರಾವನ್ನು ನೋಡಿ, ಅಲ್ಲಿ ಹೇಳಿದ್ದಾರೆ:

> "57. The Congress election manifesto of 1945-46, which assured the people that provinces would be constituted on a linguistic and cultural basis, not in every case but as far as it was possible in the circumstances of each case, would appear to be the first attempt to qualify the linguistic principle."

ಹಾಗೆಯೇ ಧಾರ್ ಸಮಿತಿಯ ವರದಿಯಲ್ಲಿಯೂ ಇದೇ ಸಂದರ್ಭವನ್ನು ಕುರಿತು ಹೇಳಿದ್ದಾರೆ.

> "...It follows from the terms of reference of this Commission that

reconstitution of provinces solely on a linguistic basis was no longer taken for granted."

ಅಲ್ಲದೆ, ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಕಾಂಗ್ರೆಸ್ಸು ಜವಾಬ್ದಾರಿ ವಹಿಸಿರುವ ಕಾಲದಲ್ಲಿ. ಕಾಂಗ್ರೆಸ್ಸಿನವರು ಆಡಳಿತ ವಹಿಸಿಕೊಳ್ಳುವುದಕ್ಕೆ ಮುಂಚಿತವಾಗಿ, ಇಂಥ ವಿಂಗಡಣೆಯಿಂದ ಏನು ಕಷ್ಟವಾಗುತ್ತದೆಂಬುದು ಗೊತ್ತಿಲ್ಲದ ಕಾಲದಲ್ಲಿ ಮಾಡಿದಂಥ ನಿರ್ಧಾರಗಳಿಗೆ, ಆನಂತರ ಏನು ಬದಲಾವಣೆಗಳಾಗಿವೆಯೆಂಬುದನ್ನೂ ಅವರು ಅದರಲ್ಲಿ ತಿಳಿಸಿದ್ದಾರೆ.

"59. The Dhar Commission reported to the Constituent Assembly in December, 1948. It not only expressed itself strongly against any reorganisation being undertaken in the prevailing circumstances but also held that the formation of provinces exclusive or even mainly on linguistic considerations would be inadvisable. The Commission felt that in forming provinces the emphasis should be primarily on administrative convenience..."

ಧಾರ್ ಕಮಿಟಿಯ ವರದಿಯಲ್ಲಿದೆ. ಜೆ. ವಿ. ಪಿ. ವರದಿಯಲ್ಲಿ ಹೇಳಿರತಕ್ಕ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

"(v) a large measure of agreement within its borders and amongst the people speaking the same language in regard to its farmation, care being taken that the new province should not be forced by a majority upon a substantial minority of people speaking the same language".

ಎಂದು ಧಾರ್ ಕಮಿಟಿಯವರು ಹೇಳಿದ್ದಾರೆ. ಜೆ. ವಿ. ಪಿ. ರಿಪೋರ್ಟಿನ 62ನೇ ಪ್ಯಾರಾವನ್ನೂ ಕೂಡ ನೋಡಿ. ನಮ್ಮ ದೇಶದ ಆಗುಹೋಗುಗಳಿಗೆ ಬಹಳ ಮಟ್ಟಿಗೆ ಕಾರಣರಾದ ಜವಹರಲಾಲ್ ನೆಹರೂ ಅವರು ವಲ್ಲಭಭಾಯ್ ಪಟೇಲ್‌ರವರು ಮತ್ತು ಪಟ್ಟಾಭಿ ಸೀತಾರಾಮಯ್ಯನವರು ಇದನ್ನು ಹೇಳಿದ್ದಾರೆ. ಅವರು ಏನೋ ಹೇಳಿದರೆಂದು ಹೇಳುವಹಾಗಿಲ್ಲ. ಅಂಥವರು ಹೇಳುತ್ತಾರೆ :

"......The Committee, known as the J. V. P. Committee which consisted of Shri Jawaharlal Nehru, Sardar Vallabhbhai Patel and Dr. Pattabhi Sitaramayya, was the first Congress body to sound a note of warning against the linguistic principle."

ಈ ರೀತಿ, ಕಾಂಗ್ರೆಸ್ಸಿನವರು ಏರ್ಪಡಿಸಿದ್ದಂಥ ದೇಶದ ಕಾಂಗ್ರೆಸ್ ನಾಯಕರುಗಳನ್ನೊಳಗೊಂಡ ಅತಿ ಮುಖ್ಯವಾದ ಈ ಕಮಿಟಿಯವರು ಏನು ಹೇಳಿದ್ದಾರೆ ಎಂಬುದನ್ನು ನಾನೀಗ ತಿಳಿಸಿದ್ದೇನೆ. ಅವರು ಸ್ಪಷ್ಟವಾಗಿ ಹೇಳಿದ್ದಾರೆ :

"(1) that, at least in the beginning, the principle might be applied only to well-defined areas about which there was mutual agreement."

ಇನ್ನು 1951ನೆಯ ಇಸವಿ ಎಲೆಕ್ಷನ್ ಮ್ಯಾನಿಫೆಸ್ಟೊನಲ್ಲಿ ಏನು ಹೇಳಿದ್ದಾರೆಂದು ನೋಡುವುದಾದರೆ:—

P. 17 Para 64. "The manifesto declared that the decision about the Re-organisation of States would ultimately depend on the wishes of the people concerned but expressed the opinion that, while linguistic reasons were important, there were other factors also, such as economic, administrative and financial considerations, which had to be taken into account. As a practical example, the Congress agreed to the formation of the Andhra State because the Andhra Provincial Congress, the Tamilnad Congress and the Madras Government had agreed to it, but withheld support to the proposal for the formation of a Karnataka State for want of agreement of the great majority of the people including the people of Mysore State."

ಈ ರೀತಿಯೆಲ್ಲಾ ಹೇಳಿದ ಮೇಲೆ ಕಮಿಟಿಯವರು ತಮ್ಮ ರಿಪೋರ್ಟಿನ 322ನೆಯ ಪ್ಯಾರಾದಲ್ಲಿ ಹೇಳಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಅವರು ಹೇಳುತ್ತಾರೆ.

"Para 321. There was no disagreement until recently about the territorial limits of the proposed Karnataka State. It was assumed that as soon as the question of redistribution of State territories was taken in hand seriously, and hurdles such as the special position of the former princely states were removed, the creation of a United Karnataka State would follow as a matter of course.

Para 322. With the reorganisation of States becoming a live political issue, however, some differences of opinion have recently arisen about the territorial set-up of the proposed Karnataka State. These differences relate principally to two matters, namely, the financial prospects of the Karnataka State and the desirability of integrating in the proposed Karnataka

(ಶ್ರೀ ವಿ. ವೆಂಕಟಪ್ಪ)

State, the State of Mysore which claims to have a distinct administrative and cultural tradition."

ಇದು ನನಗಂತೂ ಆಶ್ಚರ್ಯವನ್ನುಂಟುಮಾಡುತ್ತದೆ. ಏಕೆಂದರೆ, ಇವತ್ತಿನ ದಿವಸ ಮೈಸೂರು ಇದ್ದಂತೆ ಇರ ಬೇಕು ಏನ್ನುವವರು ಈಚೆಗೆ ತಾನೆ ಬಂದಿದ್ದಾರೆ ಎನ್ನು ವುದಾದರೆ, ಅಲ್ಲೇಕೆ

"...withheld support to the proposal for the formation of Karnataka State for want of agreement of the great majority of the people including the people of Mysore State"

ಎಂದು ಹೇಳಿದರು ?

ಕರ್ಣಾಟಕ ಪ್ರಾಂತ್ಯವಾಗಬೇಕು ಎಂದು ಹೇಳತಕ್ಕ ಸಂದರ್ಭ ಬಂದಾಗ ಆ ಅವಕಾಶವನ್ನು ಪೂರ್ಣವಾಗಿ ಬಿಟ್ಟು, ಈ ಹೊತ್ತು ಏನೋ ಕೆಲವು ಕಾರಣಗಳಿಂದ ಸ್ವಲ್ಪಮಟ್ಟಿಗೆ ಗಲಾಟೆ ಎದ್ದಿದೆ, ಭಿನ್ನಾಭಿಪ್ರಾಯ ಬಹಳ ಹೆಚ್ಚಿಗೆ ಬಂದಿಲ್ಲ, ಈಗ ತಾನೆ ಈ ಪ್ರಶ್ನೆ ಪ್ರಾಮುಖ್ಯತೆಗೆ ಬಂದಿದೆ ಎಂದು ಮಾಡುವ ವಾದ ಸರಿಯೇ ? ಈ ಕಮಿಟಿಯವರು ಬಹಳ ದೊಡ್ಡವರು; ಇಂಡಿಯಾ ಸರ್ಕಾರದವರು ಅವರ ಯೋಗ್ಯತೆಯನ್ನು ನೋಡಿ ಅವರನ್ನು ಈ ಕೆಲಸಕ್ಕೆ ನೇಮಿಸಿದ್ದಾರೆ. ಅವರ ಯೋಗ್ಯತೆಯ ವಿಷಯದಲ್ಲಿ ನನಗೇನೂ ಅನುಮಾನವಿಲ್ಲ. ಬಹಳ ದೊಡ್ಡವರೇ ಅವರು. ಆದರೆ ಬಹುಶಃ ನಮ್ಮ ದುರದೃಷ್ಟ. ನಮ್ಮ ದೇಶದ ಈ ಪರಿಸ್ಥಿತಿಗೆ ನಾವು ಬಹುಮಟ್ಟಿಗೆ ಕಾರಣರು, ಅದರಲ್ಲೂ ಕಾಂಗ್ರೆಸ್ಸಿನವರು ಕಾರಣರು ಎಂದು ಹೇಳಿದರೆ ನನ್ನನ್ನು ಯಾರೂ ನಿಂದಿಸ ಲಾರರು ಎಂದು ತಿಳಿದಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಕಾಂಗ್ರೆಸ್ಸಿನವರೇ !

ಶ್ರೀ ವಿ. ವೆಂಕಟಪ್ಪ.—ಏಕೆಂದರೆ, ಕಮಿಷನ್ನಿನವರು ಇಲ್ಲಿಗೆ ಬಂದಾಗ, ಅವರ ಮುಂದೆ ಎಷ್ಟರಮಟ್ಟಿಗೆ ಇವೊತ್ತಿನ ದಿವಸ ಏನು ಹೇಳಿಕೊಳ್ಳಬೇಕೆಂದು ಕಾತುರ ರಾಗಿದ್ದೇವೋ ಅದನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ವಿಲ್ಲದಂತೆ, ಅವರ ಮನಸ್ಸಿಗೆ ಜುಗುಪ್ಸೆಯನ್ನುಂಟು ಮಾಡುವಂತೆ ನಡೆದುಕೊಂಡಿದ್ದೇವೆ. ಇಂಡಿಯಾ ಸರ್ಕಾರದವರು ದೊಡ್ಡದೊಡ್ಡ ವ್ಯಕ್ತಿಗಳಿಂದ ಕೂಡಿದ ಸಂಸ್ಥೆಯೊಂದನ್ನು ಕಳುಹಿಸಿ, ವಿಚಾರಮಾಡಿ ಸರಿಯಾದ ನಿರ್ಧಾರಕ್ಕೆ ಬನ್ನಿ ಎಂದು ಹೇಳಿದ್ದರೆ, ಅವರ ಮುಂದೆ ತಾವು ಏನೂ ಸಾಕ್ಷ್ಯವನ್ನು ಹೇಳುವುದಕ್ಕೆ ಬರುವುದಿಲ್ಲ ವೆಂದು ಹೇಳಿ ನಿಜವಾಗಿಯೂ ಅವರ ಗೌರವಕ್ಕೆ ಕುಂದು ಬರುವಂತೆ ಮಾಡಿದ್ದಾರೆಂದು ಹೇಳಿದರೆ ತಪ್ಪಿಲ್ಲ.

ಶ್ರೀ ಜೆ. ಮಹಮದ್ ಇಮಾಂ (ಜಗಳೂರು).—ವೈಕುಂಠಕ್ಕೆ ಹೋಗಿ ಮೌನ ತಾಳಿದಿರಿ !

ಶ್ರೀ ವಿ ವೆಂಕಟಪ್ಪ.—ನಾನು ವೈಕುಂಠಕ್ಕೂ ಹೋಗಲಿಲ್ಲ, ಪಾತಾಳಕ್ಕೂ ಹೋಗಲಿಲ್ಲ. ನೀವು ವೈಕುಂಠಕ್ಕೆ ಹೋಗಿದ್ದುದರಿಂದ ಈಗ ಪಾತಾಳಕ್ಕೆ ಹೋಗಿದ್ದೀರಿ.

2 P.M.

ಸ್ವಾಮಿ ನಾವು ಆರೀತಿಯಾಗಿ ಒಂದು ವರ್ತನೆಮಾಡಿದ್ದರಿಂದ ಈ ದಿವಸ ನಾವುಗಳೆಲ್ಲಾ ಆ ಬಳ್ಳಾರಿ ಮತ್ತು ಈ ಮೈಸೂರು ಎರಡಕ್ಕೂ ಅನ್ಯಾಯಮಾಡಿದ್ದೇವೆ. ಈ ವಿಷಯದಲ್ಲಿ ಯಾರಾರು ಹೆಚ್ಚಿನ ಒಂದು ಪ್ರತಿಭೆಯನ್ನು ಬೀರಿದ್ದರೋ, ಈ ವರದಿಯಲ್ಲಿ ಯಾವ ರೀತಿಯಾಗಿ ಅವರಿಗೆ ಅನುಕೂಲಪಡಿಸಬೇಕು ಎಂದು ಅವರೆಲ್ಲರೂ ಕೇಳಿಕೊಂಡಿದ್ದರೋ, ಅದಕ್ಕನುಗುಣವಾಗಿಯೂ ಮತ್ತು ಆ ಕಮಿಷನ್ನಿನವರ ಮನಸ್ಸಿಗೆ ಇತರ ಪ್ರಾಂತ್ಯಗಳ ವಿಷಯದಲ್ಲಿ ಯಾವ ರೀತಿಯಾಗಿ ತೋರಿಬಂತೋ, ಆ ರೀತಿಯಾಗಿ ಅವರು ಈ ರಿಪೋರ್ಟನ್ನು ಬರೆದಿದ್ದಾರೆ. ಆದುದರಿಂದ ನಾವು ದಿನವೂ ಈ ವರದಿಯು ಸರಿಯಾಗಿಲ್ಲ, 'ಡಿಫಾಲ್ಟಾಗಿದೆ' ಎಂದು ಹೇಳಿದರೆ, ಈ ಡಿಫಾಲ್ಟಿನಲ್ಲಿ ನಮ್ಮ ಭಾಗವೂ ಸೇರಿದೆಯೆಂದೇ ನಾನು ಹೇಳಬೇಕಾಗಿದೆ. ಈ ಕಮಿಷನನ್ನು ನೇಮಕವಾದ ಮೇಲಾದರೂ ಭಾಷಾವಾರು ಪ್ರಾಂತ ನಿರ್ಮಾಣಕ್ಕೆ ಸರಿಯಾದ ವಾತಾವರಣವಿದೆಯೇ ಎಂಬುದನ್ನು ಪರಿಶೀಲಿಸಿ ಹೀಗೆ ಹೇಳಿದ್ದಾರೆ—

Para 81.—

'With the appointment of the Commission, the problem is now again before the country, with opinion divided on the appropriateness of the time for undertaking large scale changes in the existing set-up."

Para 83.—

"The opponents of reorganisation have accordingly suggested the postponement of the whole issue for a period of at least twenty or twenty-five years to allow for the creation of a proper atmosphere in the country so that we might concentrate during the period on other matters of vital national importance."

ಈ ವಿಷಯದಲ್ಲಿ ಕಮಿಷನ್ನಿನವರು ಏನು ಹೇಳಿದ್ದಾರೋ ನೋಡೋಣ.

Para 84.—

"These arguments are not without substance. While internally as well as externally the situation is, no doubt, easier than it was immediately after the attainment of Independence, neither the international scene nor the economic and other problems facing the country would justify a complacent attitude........."

Para 100.—

"In the case of Andhra it was possible, to some extent, to hasten separation. But for various reasons (such as that *interse* seniority was not disturbed, that surplus staff was retained by the residuary State, and that no great changes in the number or the constitution of the districts were involved), Andhra cannot be regarded as a good precedent. Moreover, the Andhra administration has itself

had to face such difficulties as the dispersal of its offices, absence of duplicate records, and lack of experienced staff. It cannot, on the whole, be anticipated that reorganised administrative machinery will start functioning smoothly in the new States within a short period."

Para 101.—

"This must be regarded as the indirect cost of change; to the extent that revision of salaries after reorganisation becomes inevitable (and such a revision, it must be remembered, can only be upwards), there will also be a direct recurring cost. It is not possible or necessary to attempt a forecast of this cost except to indicate broadly the magnitude of the problem. One estimate which has been made on certain assumptions is that the lumpsum provisions which will be needed in order to introduce uniform scales of pay may run into ten or eleven crores per annum. Without necessarily accepting this estimate, it may be assumed that one of the consequences of reorganisation will be the intensification of the existing demands for salary revision to such an extent as to render an increase in State Governments' expenditure unavoidable."

Para 102.—

"Whether there is or there is not a case for salary revision is not a question on which it is necessary for the Commission to express an opinion. In the event of a revision being ultimately decided upon, the State Governments may be able to meet the extra cost involved in the introduction of uniform scales of pay by retrenchment and administrative rationalisation to some extent, but too much realiance cannot be placed on these possibilities in the initial years after re-organisation. In the light of the experience of the working of some of the Part 'B' States, a reduction in the number of districts and other administrative units or large-scale retrenchment, even if justified on administrative grounds, would appear to be a remote possibility. Retrenchment and rationalisation will have to be spread, in all probability, over a number of years, the extra cost of salary revision will therefore, be fairly heavy."

Para 105.—

"The integration of princely States involved administrative changes in an area of about 3,60,000 square miles inhabited by about 59 million people—not counting the major and minor units the boundaries of which were not changed. Impressive as the scale and swiftness of these changes were, it can now be seen in retrospect that the process of rationalising the administrative system in these areas has been spread over seven or eight years and, as has been stated already, it is still not complete. If the reorganisation of States at the present time is to be on a comparable scale, the effects of the change are bound to be considerable."

ಆ ಮೇಲೆ ಈ ರೀ-ಆರ್ಗನೈಜೇಶನ್ ಮಾಡುವುದರಲ್ಲಿ ಬಹಳ ಪ್ರಾಮುಖ್ಯವಾದಂಥ ವಿಚಾರ ಯಾವುದೆಂದರೆ :—

"the welfare of the people of each constituent unit as well as the nation as a whole."

ಭಾಷಾವಾರು ದೃಷ್ಟಿಯಿಂದಲೇ ಈ ಪ್ರಾಂತ್ಯಗಳನ್ನು ಪುನರ್ವಿಂಗಡಣೆ ಮಾಡಬೇಕೇ ಅಥವಾ ಬೇಡವೇ ಅನ್ನುವುದನ್ನು ಅವರು ಪರಿಶೀಲನೆಮಾಡಿ ಅವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅವರು ಮಾಡಿರುವ ತೀರ್ಮಾನದ ಪ್ರಕಾರ ಆ ಅಂಶಗಳನ್ನು ಈ ಕರ್ಣಾಟಕ ಪ್ರಾಂತ್ಯನಿರ್ಮಾಣದ ಬಗ್ಗೆ ಏತಕ್ಕೆ ಆಲೋಚಿಸಲಿಲ್ಲ ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ.

"We now summarise our final views on the role of language as a factor bearing on the re-organisation of States. After a full consideration of the problem in all its aspects, we have come to the conclusion that it is neither possible nor desirable to reorganise States on the basis of the single test of either language or culture, but that a balanced approach to the whole problem is necessary in the interests of our national unity."

(ಶ್ರೀ ವಿ. ವೆಂಕಟಪ್ಪ.)

"Such a balanced approach would appear to be:

(*a*) to recognise linguistic homogeneity as an important factor conducive to administrative convenience and efficiency but not to consider it as an exclusive and binding principle, over-riding all other considerations, administrative, financial or political;

...... ..........

(*c*) where satisfactory conditions exist, and the balance of economic, political and administrative considerations favour composite States, to continue them with the necessary safeguards to ensure that all sections enjoy equal rights and opportunities;

(*d*) to repudiate.

ನಿನ್ನೆಯ ದಿವಸ ಆ ನಮ್ಮ ಮಿತ್ರರು ಹೇಳಿದರಲ್ಲ, 'ಹೋಂಲ್ಯಾಂಡ್ ಥಿಯರಿ' ಅದನ್ನು ಕಮಿಷನ್ನಿನವರು ಎಕ್ಸ್‌ಪ್ಲೋಡ್ ಮಾಡಿದ್ದಾರೆ.

"to repudiate the 'home land' concept, which negates one of the fundamental principles of the Indian Constitution, namely, equal opportunities and equal rights for all citizens, throughout the length and breadth of the Union."

ಆದುದರಿಂದ ಶ್ರೀ ಜೆ. ಮಹಮದ್ ಇಮಾಂರವರು ಹೇಳಿದ ಆ ಹೋಂ ಲ್ಯಾಂಡ್ ಥಿಯರಿಯನ್ನು ಇಲ್ಲಿ explode ಮಾಡಿದ್ದಾರೆ.

"(*d*) finally, to the extent that the realisation of unilinguism at state level would tend to breed a particularist feeling, to counter balance that feeling by positive measures calculated to give a deeper content to Indian nationalism; to promote greater interplay of different regional cultures, and inter-state co-operation and accord; and to reinforce the links between the Centre and the State in order to secure a greater co-ordinated working of national policies and programmes."

ಇನ್ನು ಮೈಸೂರು ಕರ್ಣಾಟಕಕ್ಕೆ ಸೇರುವುದರಿಂದ ನಮಗೆ ಈ ಹಣಕಾಸಿನ ಮುಗ್ಗಟ್ಟು ಅಷ್ಟಾಗಿ ಉಂಟಾಗುವುದಿಲ್ಲ ಎಂದು ಹೇಳುವುದನ್ನು ನಾವು ಅಷ್ಟಾಗಿ ಪರಿಶೀಲನೆ ಮಾಡಬೇಕಾಗಿಲ್ಲ. ಇನ್ನು ಮುಂದೆ ಕೇಂದ್ರ ಸರ್ಕಾರದವರೇ ಈ ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಆಸಕ್ತಿವಹಿಸಿ ಸಹಾಯ ಒದಗಿಸುತ್ತಾರೆ ಎಂದು ನಮ್ಮ ನಾಯಕರೂ ಮತ್ತು ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಆದರೆ ಆ ಸಮಿತಿಯವರು ಈ ವಿಷಯವನ್ನು ವಿಮರ್ಶೆಮಾಡುತ್ತಾ ಹೀಗೆ ಹೇಳಿದ್ದಾರೆ:

"It has been said that in a federation it is not necessary for every unit to be self-sufficient, and that a State may be able to incur the expenditure which is necessary in order to maintain a desirable minimum standard of welfare, even without financial self-sufficiency, the resources for this purpose being made available to it by transfers, if needed, from the wealtheir units. Another view is that to lay down minimum national standards is impracticable, and that such a transfer of resources to units which are responsible for spending, rather than for the provision of the resources required, is bound to lead only to waste of public money."

(*Interruption*)

ಶ್ರೀ ಭೀಮಪ್ಪನಾಯಕರು 'ರಿಪೋರ್ಟನ್ನು ಏಕೆ ಓದುತ್ತೀರಿ? ನಿಮ್ಮ ಮಾತೇನು ಹೇಳಿ" ಎನ್ನುತ್ತಾರೆ. ನನ್ನ ಭಾಷಣವನ್ನು ಶ್ರೀ ಭೀಮಪ್ಪನಾಯಕರು ಕೇಳಿದ್ದಾರೆ. ನಾನೂ ಶ್ರೀ ಭೀಮಪ್ಪನಾಯಕರ ಭಾಷಣವನ್ನು ಕೇಳಿದ್ದೇನೆ. ನಾವು ಇವೊತ್ತಿನ ದಿವಸ ಈ ವರದಿಯನ್ನು ಪರ್ಯಾಲೋಚಿಸುತ್ತಿದ್ದೇವೆ. ಹಿಮಾಚಲ ಸ್ಟೇಟ್ ಇರಬೇಕು ಎನ್ನುವುದಕ್ಕೆ ಶ್ರೀ ಫಜಲಾಲಿಯವರು ಏನು ಕಾರಣಗಳನ್ನು ಕೊಟ್ಟಿದ್ದಾರೆ? ಶ್ರೀ ಫಣಿಕ್ಕರ್‌ರವರು ಉತ್ತರ ಪ್ರದೇಶ ಎರಡಾಗಬೇಕು ಎನ್ನುವುದಕ್ಕೆ ಏನು ಕಾರಣಗಳನ್ನು ಕೊಟ್ಟಿದ್ದಾರೆ? ಅವು ಮೈಸೂರಿಗೆ ಯಾತಕ್ಕೆ ಅನ್ವಯವಾಗುವುದಿಲ್ಲ? ಇಷ್ಟಾದರೂ, ಕರ್ಣಾಟಕದಲ್ಲಿ ಮೈಸೂರು ಸೇರಿಹೋಗಬೇಕು ಎಂದು ಹೇಳುವಾಗ ಅವರು ಏನು ಕಾರಣಗಳನ್ನು ಕೊಟ್ಟಿದ್ದಾರೆ ಎಂಬುದನ್ನು ವಿಮರ್ಶೆ ಮಾಡಬೇಕು. ಮೈಸೂರು ದೇಶ ಕರ್ಣಾಟಕದಲ್ಲಿ ಸೇರುವುದರಿಂದ ಮೈಸೂರು ದೇಶಕ್ಕಾಗಲಿ, ಕರ್ಣಾಟಕಕ್ಕಾಗಲಿ ಯಾವ ತೊಂದರೆಯೂ ಆಗುವುದಿಲ್ಲವೆಂದು ಅವರು ಹೇಳಲಿಲ್ಲ. ಮೈಸೂರು ದೇಶ ಒಂದು ಸ್ಟೇಟ್ ಆಗಿರುವುದಕ್ಕೆ ಸಾಧ್ಯವಿಲ್ಲವೆಂದು ಅವರು ಹೇಳಲಿಲ್ಲ. 14 ಸಾವಿರ ಚದರ ಮೈಲಿಯ 55 ಲಕ್ಷ ಪ್ರಜಾಸಂಖ್ಯೆಯಿರುವ ಹಿಮಾಚಲ ಪ್ರದೇಶವು ಒಂದು ಸ್ಟೇಟ್ ಆಗಬಹುದು. ಕೇರಳವಾಗಬಹುದು. ಹೈದರಾಬಾದು ತೆಲಂಗಾನವಾಗಬಹುದು. ಆದರೆ ಮೈಸೂರು ಒಂದು ಸ್ಟೇಟ್ ಆಗಿ ಉಳಿಯುವುದಕ್ಕೆ ಏನು ಕಷ್ಟ ಬಂತು ಎಂಬುದನ್ನು ಎಲ್ಲಿಯೂ ಹೇಳಲಿಲ್ಲ. ಪ್ರದೇಶಗಳು ದೊಡ್ಡದು ಆಗಿರುವುದು ಒಳ್ಳೆಯದೇ, ಚಿಕ್ಕದು ಆಗಿರುವುದು ಒಳ್ಳೆಯದೇ ಎನ್ನುವ ವಿಷಯವನ್ನು ಕೂಡ ಅವರು ಬಹಳ ಚೆನ್ನಾಗಿ ಪರಿಶೀಲನೆಮಾಡಿ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಅದನ್ನು ಸ್ವಲ್ಪ ಓದಿದರೆ ಒಳ್ಳೆಯದು.

"Both points of view have been placed before the Commission.

Briefly summarised, the arguments in favour of small States are that in such States, the administration will be more accessible to the people; and that there will be a livelier sense of local needs and appreciation of local problems on the part of the Government (para 212)."

ಸಣ್ಣ ಸ್ಟೇಟು ಆದರೆ, ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ ಎಂದು ಕೆಲವರು ವಾದ ಮಾಡಿದ್ದಾರೆ. ಅದಕ್ಕೆ ಶ್ರೀ ಫಜಲಾಲಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ ಅದನ್ನು ನಾವು ಗಮನಿಸಬೇಕು.

"I am convinced that there is a great deal of uneasiness among the people of Himachal Pradesh over the question of its being merged in the Punjab and that this feeling is both genuine and widespread. As I have already mentioned, shortly after the creation of Himachal Pradesh it was sensed by Sardar Patel that the proposal to merge it in the Punjab would be locally unpopular. Further, it appears that early in 1950 there was a proposal that the jurisdiction of the East Punjab High Court should be extended to Himachal, but no action was taken in regard to this suggestion because it seems to have been recognised that "the sentiment of the hill people was opposed to the extension of the authority of any of the administrative organs of the East Punjab to Himachal' * * *

"From this point of view, placing them in a position of subordination which merger will amount to at this stage—would, in my opinion, instead of contributing to their progress, greatly retard it. Obviously, the voice of this hill area in the common legislature would be an extremely feeble voice and the sheer weight of numbers would drown even this voice."

ಈ ವಿಚಾರವಾಗಿ ಶ್ರೀ ರಾಮಚಂದ್ರರಾಯರು ಸ್ವಲ್ಪ ಮಟ್ಟಿಗೆ ಹೇಳಿದ್ದಾರೆ. ನಮ್ಮ ಲೆಜಿಸ್ಲೇಟಿವ್ ಅಸೆಂಬ್ಲಿ ದೊಡ್ಡದು ಆಗುವುದರಿಂದ, Stable Government ಆಗುತ್ತದೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದನ್ನು ಅವರು ಪರಿಶೀಲನೆ ಮಾಡಿ ಅದು ಸರಿಯಲ್ಲ ಎಂದು ಹೇಳಿದ್ದಾರೆ: ಈಗ ಮೈಸೂರನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ, ಇಲ್ಲಿ Stable Government ಇದೆ. ಹೆಚ್ಚು ಜನಸಂಖ್ಯೆ ಇರುವ ದೇಶದಲ್ಲೂ Stable Government ಇಲ್ಲದೆ ಇರಬಹುದು, ಬಹಳ ಹೆಚ್ಚು ಜನಸಂಖ್ಯೆ ಇರುವ ಕಡೆ ಎರಡು ತರಹ ಪರಿಸ್ಥಿತಿ ಇರುವುದೂ ಉಂಟು. ನಮ್ಮ ಮೈಸೂರಿನಲ್ಲಿ 300 ಜನ ಪ್ರತಿನಿಧಿಗಳು ಇದ್ದುದನ್ನು ಅದು ಬಹಳ ಹೆಚ್ಚು, ಅದನ್ನು 100ಕ್ಕೆ ಇಳಿಸಬೇಕೆಂದು ಹೇಳಿ Constituent Assemblyಯನ್ನು ಆ ಪರಿಮಿತಿಗೆ ತಂದರು. ಸ್ವಲ್ಪ ಹೆಚ್ಚು ಕಡಿಮೆ ಅಷ್ಟೇ ಜನ ಪ್ರತಿನಿಧಿಗಳು ಈಗಲೂ ಇದ್ದಾರೆ. ಆಗ ಹೆಚ್ಚಾಗಿದ್ದರೆ ತೊಂದರೆಯಾಗುತ್ತದೆ, ಬಹಳ unwieldy ಆಗುತ್ತದೆ ಎಂದು ಇದ್ದುದು, ಈಗ ಆ ಸಂಖ್ಯೆಯನ್ನು ಹೆಚ್ಚಿಸಿದರೆ ತೊಂದರೆಯಾಗುವುದಿಲ್ಲವೇ? ಸ್ವಾಮಿ, ಇದರಲ್ಲಿ ಕಷ್ಟ ಏನು ಎಂದು ಹೇಳಿದರೆ, ಮೈಸೂರಿನವರು ಮೈಸೂರಿನ ಸ್ಥಿತಿಗತಿಗಳನ್ನು, ತಮ್ಮ ಆಗುಹೋಗುಗಳನ್ನು, ತಮಗೆ ಗೊತ್ತಿರುವ ರೀತಿಯಲ್ಲಿ ಏರ್ಪಾಡು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಈಗ ಕರ್ಣಾಟಕದಲ್ಲಿ ನಾವು ಸೇರುವುದರಿಂದ, ನಮಗಿಂತಲೂ ಅವರ ಜನಸಂಖ್ಯೆ ಹೆಚ್ಚಾಗಿ ಈ ಸಭೆಯಲ್ಲೂ ಕೂಡ ಅವರ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಿ, ನಾವು ಕಡಿಮೆಯಾಗಿ, ಮೈಸೂರಿನವರು ಅವರನ್ನು ಅದು ಇದು ಮಾಡಿಕೊಡಬೇಕು ಎಂದು ಕೇಳಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಮೈಸೂರು ಏತಕ್ಕೆ ಆ ಸ್ಥಿತಿಗೆ ಬರಬೇಕು! ಮೈಸೂರು ಒಂದು unit ಆಗಿ ಇರುವುದಕ್ಕೆ ಯೋಗ್ಯವಾಗಿದೆ. ಶ್ರೀ ಹನುಮಂತಯ್ಯನವರು ಎರಡು ಕೋಟಿ ಪ್ರಜಾಸಂಖ್ಯೆಯಿದ್ದರೆ ಸರಿಹೋಗುತ್ತದೆ ಎಂದು ಹೇಳಿದರು. ಅದು ಅಭಿಪ್ರಾಯದ ಮಾತು. ಸಮಿತಿಯವರು ಇಷ್ಟೇ ಇದ್ದರೆ ಸರಿಹೋಗುತ್ತದೆ ಎಂದು ನಿರ್ಧರಮಾಡಿಲ್ಲ. ಇವೊತ್ತಿನ ದಿವಸ ದೊಡ್ಡ ಸ್ಟೇಟ್‌ಗಳೂ ಇವೆ, ಸಣ್ಣ ಸ್ಟೇಟ್‌ಗಳೂ ಇವೆ. ಆದರೆ ನಮ್ಮ ಅನುಭವದಲ್ಲಿ ಮೈಸೂರು ಪರಿಸ್ಥಿತಿಗೆ ಹೊಂದಿಕೊಂಡು ಅಲ್ಲಿ ಚೆನ್ನಾಗಿ ಕೆಲಸಕಾರ್ಯಗಳು ನಡೆದಿವೆ. ಯಾವ ತೊಂದರೆಗಳೂ ಆಗಿಲ್ಲ. ದೇಶ ಉತ್ತಮಸ್ಥಿತಿಗೆ ಬರುವುದಕ್ಕೆ, ದೇಶ ಪ್ರಗತಿ ಸ್ಥಿತಿಗೆ ಬರುವುದಕ್ಕೆ, ಇಂಡಿಯಾ ದೇಶದಲ್ಲೆಲ್ಲಾ ಮಾದರಿ ಸಂಸ್ಥಾನ ಎಂದೆನಿಸಿಕೊಳ್ಳುವುದಕ್ಕೆ ಅವಕಾಶವಾಗಿದ್ದ ಸ್ಟೇಟಿಗೆ ಇವೊತ್ತಿನ ದಿವಸ ಯಾರೋ ಬಂದು ಸೇರಿದರೆ ಮುಂದಿನ ಸ್ಥಿತಿ ಅನುಕೂಲವಾಗುತ್ತದೆ ಎನ್ನುವ ಪರಿಸ್ಥಿತಿಗೆ ನಾವು ಏತಕ್ಕೆ ಬರಬೇಕೋ ನನಗೆ ಅರ್ಥವಾಗುವುದಿಲ್ಲ. ಶ್ರೀ ಹನುಮಂತಯ್ಯನವರು, 'ನಾವು ಬಹಳ ಉದಾರಿಗಳು, ಹಳ್ಳಿಯವರ ದೃಷ್ಟಿಯಿಂದ ಹೇಳುವುದಾದರೆ, ಯಾರಾದರೂ ಮನೆಗೆ ಬಂದರೆ, ಊಟವಿಲ್ಲ, ನೀರು ಇಲ್ಲ, ನೀವು ಹೋಗಿ ಎಂದು ಹೇಳಿ ಕಳುಹಿಸಿಬಿಡುವುದಿಲ್ಲ' ಎಂದು ಹೇಳಿದರು. ಇದು ವಾಸ್ತವಾಂಶವೇ! ಎಂದು ಕೇಳುತ್ತೇನೆ. ಇವೊತ್ತಿನ ದಿವಸ ನಾಲ್ಕು ಜನ ಒಂದು ಮನೆಗೆ ಹೋದರೆ, ಎಲ್ಲರಿಗೂ ಅಡಿಗೆಮಾಡಿ ಊಟ ಹಾಕುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತಿದ್ದೇನೆ. ಮನೆಯಲ್ಲಿ ಹತ್ತು ಜನ ಇದ್ದರೆ, ಇಬ್ಬರು ಬರಲಿ, ನಾಲ್ಕು ಜನ ಬರಲಿ, ನಾವು ರವಷ್ಟು ಕಡಿಮೆಮಾಡಿಕೊಂಡು ಹಾಕುತ್ತೇವೆ ಎಂದು ಹೇಳಬಹುದು.

ಶ್ರೀ ಜೆ. ಮಹಮದ್ ಇಮಾಂ.—ಇದು ಧಾರಾಳವಾದ ಮಾತಲ್ಲ.

ಶ್ರೀ ವಿ. ವೆಂಕಟಪ್ಪ.—ಎಲ್ಲಾ ಮಾತಿನಲ್ಲೇ ಧಾರಾಳ.

ಶ್ರೀ ಜೆ. ಮಹಮದ್ ಇಮಾಂ.—ದೇವರು ಕೊಡುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗೆಯೇ ಬರುವುದಿಲ್ಲ, ಅಕ್ಕಿ, ಬೇಳೆಯನ್ನು ತರುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಅವರೇ ಮಾಡಿಕೊಂಡು ಊಟ ಮಾಡಲಿ. ದೊಡ್ಡ ಯೂನಿಟ್ಟು ಆದರೆ, administration expenses ಕಡಿಮೆಯಾಗುತ್ತದೆ ಎಂದು ಒಂದು ವಾದ ಇದೆ. ಅದಕ್ಕೆ ಶ್ರೀ ಫಜಲಾಲಿಯವರು ಉತ್ತರ ಹೇಳಿದ್ದಾರೆ. ಕಮಿಷನ್ನಿನ ಮೂರು ಜನರ ಪೈಕಿ ಇಬ್ಬರು ನಮ್ಮಂತೆಯೇ ಇದ್ದಾರೆ. ಶ್ರೀ ಪಣಿಕ್ಕರ್‌ರವರು ದೊಡ್ಡ ಪ್ರದೇಶವನ್ನು ಒಡೆಯಬೇಕು ಎಂದು ಹೇಳಿದ್ದಾರೆ. ಶ್ರೀ ಫಜಲಾಲಿಯವರು ಒಂದು ಸಣ್ಣ ಪ್ರದೇಶ ಇದ್ದಂತೆಯೇ ಇರಬೇಕು ಎಂದು ಹೇಳಿದ್ದಾರೆ. ಅವರು ಇಬ್ಬರೂ ನಮ್ಮಂತೆಯೇ ಇದ್ದಾರೆ. ಆದರೂ ರಿಪೋರ್ಟಿನಲ್ಲಿ ಯಾಕೋ ಬೇರೆ ರೀತಿ ಬರೆದಿದ್ದಾರೆ. ಶ್ರೀ ಫಜಲಾಲಿಯವರು ಈ ರೀತಿ ಹೇಳಿದ್ದಾರೆ.

"But administrative economy by itself will be of little value, if sufficient attention is not paid to the much more important consideration of administrative convenience and efficiency... Now will a common head of the State serve the purpose adequately, because what is needed in the hills is the intimate and personal touch of the head of the State with the common man. Having regard to these disadvantages consequent on merger, the saving that will be effected will not be of much significance. The extra cost that a separate administration under the Central Government might entail will be amply compensated by the advantages of a sympathetic and intensive administration."

ಅದು ಈಗ ನಮ್ಮಲ್ಲಿ ಇದೆ. ಇರುವುದಕ್ಕೆ ಸಾಧ್ಯ, ಆದ್ದರಿಂದ ನಾವು ಇರುವ ರೀತಿಯಲ್ಲೇ ಇರೋಣ ಎಂದು ಹೇಳಿದರೆ, ಅದಕ್ಕೆ ಜಾತಿವಾದವೆಂದು ಆರೋಪಣೆ ಮಾಡಿದ್ದಾರೆ. ಮನಸ್ಸಿನಲ್ಲಿ ಏನು ಕೋಪ ಇತ್ತೋ ಅದನ್ನೆಲ್ಲಾ ಹೇಳಿದ್ದಾರೆ. ಅವರ ವಾದ ವಾದರೂ ನಿಜವೇ ಎಂದು ನೋಡಿದರೆ, ಒಕ್ಕಲಿಗರು ಇವೊತ್ತಿನ ದಿನ ದೇಶದಲ್ಲಿ ಬೇರೆಯವರನ್ನು ತುಳಿಯುತ್ತಾ ಇರತಕ್ಕದ್ದು ನಿಜವೇ? ಯಾವಾಗಲಾದರೂ ಆ ರೀತಿ ಮಾಡಿದ್ದಾರೆಯೇ ಎಂದು ಹೇಳಲಿ, ನ್ಯಾಯವಾಗಿ ಅವರಿಗೆ ಎಷ್ಟರಮಟ್ಟಿಗೆ ಸರ್ಕಾರಿ ಹುದ್ದೆಗಳಲ್ಲಿ ದೊರೆಯಬೇಕೋ ಅಷ್ಟು ಇವೊತ್ತಿನ ದಿವಸ ದೊರಕಿಲ್ಲ. ಇತರರ ಮನಸ್ಸಿಗೆ ವ್ಯಥೆಯನ್ನುಂಟುಮಾಡಬೇಕೆಂದು ನಾನು ಈ ಮಾತನ್ನು ಹೇಳುತ್ತಾ ಇಲ್ಲ. ಎಲ್ಲಾ ಇಲಾಖೆಗಳಲ್ಲಿಯೂ, ಲಿಂಗಾಯಿತರು ಒಕ್ಕಲಿಗರಿಗಿಂತ ಹೆಚ್ಚಾಗಿದ್ದಾರೆ. ಒಕ್ಕಲಿಗರ percentage ಎಷ್ಟು ಎಂಬುದನ್ನು ನಾನು ಇಟ್ಟುಕೊಂಡಿದ್ದೇನೆ. ಒಕ್ಕಲಿಗರು ಬಂದು ಅವರನ್ನು ಏನೋ ಮಾಡಿದರು ಎಂದು ಹೇಳಿದರೆ ಅದು ಒಪ್ಪಬಹುದಾದ ಮಾತಲ್ಲ. ನ್ಯಾಯವಾದ ಮಾತಲ್ಲ.

(*Interruptions*)

Mr. SPEAKER.—May I request the Hon'ble Member to continue his speech and not to heed interruptions? If you want I will effectively stop the interruptions.

2-30 P.M.

ಶ್ರೀ ವಿ. ವೆಂಕಟಪ್ಪ.—ಸ್ವಾಮಿ, ಮತ್ತೊಂದು ವಿಷಯ ಮಿಕ್ಕವುಗಳಲ್ಲಿಯೂ ಇರುವ ಹಾಗೆ ಇದರಲ್ಲಿಯೂ ಭಿನ್ನಾಭಿಪ್ರಾಯವಿದೆ. ರಾಜಪ್ರಮುಖರನ್ನು ರದ್ದುಮಾಡಬೇಕೆಂದು ಸಮಿತಿಯವರು ಸೂಚನೆಮಾಡಿದ್ದಾರೆ. ಅವರು ಸೂಚನೆಮಾಡಿರುವುದು ಸರಿಯೇ ಅಲ್ಲವೇ ಎಂಬುದು ಬೇರೆ ಮಾತು. ನಮ್ಮ ಮುಖ್ಯ ಮಂತ್ರಿಗಳು ಮಾತುಗಳನ್ನಾಡುವಾಗ ಸತ್ಯ ಧರ್ಮ ಇವನ್ನೇ ನಮಗೆ ಬೋಧಿಸುತ್ತಾರೆ. ಆದರೆ ಕಾರ್ಯದಲ್ಲಿ ಇದು ಏನಾಗುತ್ತಿದೆ ಎನ್ನುವುದನ್ನು ನಮ್ಮ ಶ್ರೀ ನಾಗಯ್ಯರೆಡ್ಡಿಯವರು ಹೇಳುತ್ತಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ಅವರೇ ಹೇಳಿದರೆ ಸಾಕು (ನಗು!)

ಶ್ರೀ ವಿ. ವೆಂಕಟಪ್ಪ.—ಸರ್ಕಾರದವರು ಕೊಟ್ಟ ಮಾತಿಗೆ ತಪ್ಪುವುದು ಸರಿಯಲ್ಲ ಎಂಬುದಾಗಿ ಶ್ರೀ ಹನುಮಂತಯ್ಯನವರು ಹೇಳಿದರು. (ಈ ವಿಚಾರದಲ್ಲಿ ನಾನು ಭಿನ್ನಾಭಿಪ್ರಾಯವನ್ನಿಟ್ಟಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು.) ಬಳ್ಳಾರಿಯನ್ನು ನಮ್ಮ ದೇಶಕ್ಕೆ ವಹಿಸಿ ಪುನಃ ಅವರು ತೆಗೆದು ಬೇರೆ ಕಡೆ ಸೇರಿಸುವುದು ಸರಿಯಲ್ಲವೆಂದು ಅವರು ಹೇಳುವ ವಾದವೇನೋ ಸರಿ. ಇದರಲ್ಲಿ ಕೊಟ್ಟಮಾತಿಗೆ ತಪ್ಪಿದರು ಎಂದು ಹೇಳಿದ ಮೇಲೆ, ಇನ್ನು ಬೇರೆ ವಿಷಯದಲ್ಲಿಯೂ ಇದೇ ರೀತಿಯಲ್ಲವೆ? ಶ್ರೀಮನ್ಮಹಾರಾಜರವರು ಇದುವರೆಗೆ ಅವರೇ ರಾಜಪ್ರಮುಖರಾಗಿರುವುದು ಎಂದು ಇಂಡಿಯಾ ಸರ್ಕಾರದವರು—ಈ ಹೊತ್ತು ಯಾರು ಆ ಸರ್ಕಾರವನ್ನು ನಡೆಸುತ್ತಿದ್ದಾರೆಯೋ ಅವರೇ ಒಪ್ಪಿಕೊಂಡು, ಈಗ ಕಾಲಸ್ಥಿತಿ ಬದಲಾವಣೆಯಾಗಿದೆ, ಆದ್ದರಿಂದ ಬದಲಾಯಿಸುತ್ತೇವೆ ಎಂದು ಹೇಳಬಹುದೇ? ಇಂಥ ದೊಡ್ಡ ಸರ್ಕಾರದವರು, ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯರು ಎಂದು ಹೇಳಿಸಿಕೊಂಡಿರುವವರು ಹೀಗೆ ಮಾಡಬಹುದೆ? ಇವರು ವಂಶಪಾರಂಪರ್ಯವಾಗಿರಬೇಕೆಂದೂ ಅಲ್ಲ, ಇರಬಾರದೆಂದರೆ, ಇದಕ್ಕಾಗಿ ಅವರು ವ್ಯಥೆಪಡುವುದಿಲ್ಲ, ನಾವೂ ಪಡುವುದಿಲ್ಲ; ಆದರೆ ಕೊಟ್ಟ ಮಾತನ್ನುಳಿಸಿಕೊಳ್ಳುವುದು ಕರ್ತವ್ಯವಲ್ಲವೆ?

Mr. SPEAKER.—Is there an agreement to the effect that all his life he will be the Rajpramukh?

ಶ್ರೀ ವಿ. ವೆಂಕಟಪ್ಪ.—Yes.

(*Interruptions*)

ಇನ್ನು ವಿದರ್ಭ ಮಹಾರಾಷ್ಟ್ರದೊಡನೆ ಸೇರಿದರೆ ಭೂಮಿ ಷಿಕ್ಮಿಗೆ ಸಂಬಂಧಪಟ್ಟ ಕಾನೂನನ್ನು ಬೊಂಬಾಯಿ ಪ್ರಾಂತದ ಕಾನೂನುಗಳಂತೆ ಬದಲಾಯಿಸಬೇಕಾಗುತ್ತದೆ, ಇದು ಕಷ್ಟದ ಕೆಲಸ ಎಂದು ಹೇಳುತ್ತಾರೆ. ಇದೊಂದಕ್ಕೇ ಕಷ್ಟವಾಗುತ್ತದೆಂದು ಹೇಳುವಾಗ ನಾವು ಹೈದರಾಬಾದು, ಬೊಂಬಾಯಿ, ಕೊಡಗು, ಮದರಾಸು, ಮೈಸೂರು ಇಷ್ಟು ಪ್ರಾಂತಗಳ ಭೂಮಿಗೆ ಸಂಬಂಧಪಟ್ಟ ಷಿಕ್ಮಿಗೆ ಸಂಬಂಧಪಟ್ಟ ಕಾನೂನುಗಳನ್ನೂ ಇತರ ಅನೇಕ ಕಾನೂನುಗಳನ್ನೂ ಬದಲಾವಣೆಮಾಡಿ ಅವುಗಳನ್ನು ಒಂದೇ ಸ್ಥಿತಿಗೆ ತರಬೇಕಾದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಪರಿಶೀಲನೆ ಏಕೆ ಮಾಡಲಿಲ್ಲವೋ ತಿಳಿಯದು.

ಸ್ವಾಮಿ ಫಜಲಾಲಿ ಕಮಿಷನ್ನಿನವರು ಕರ್ನಾಟಕದಲ್ಲಿ ಮೈಸೂರು ಸೇರಬೇಕೆಂದು ಹೇಳುವುದಕ್ಕೆ ಕೊಟ್ಟಿರತಕ್ಕ ಕಾರಣಗಳು_ಕಾರಣವನ್ನೇ ಕೊಟ್ಟಿಲ್ಲ,-ಆದರೂ ಕೊಟ್ಟಿರುವುದೂ ಸರಿಯಾದ ಕಾರಣವಲ್ಲ, ಹಿಂದೆ ಈ ವಿಷಯದಲ್ಲಿ ಏನೂ ಭಿನ್ನಾಭಿಪ್ರಾಯವಿರಲಿಲ್ಲ, ಈಚೆಗೆ ಬಂದಿರುವುದು ಎಂದು ಅವರು ಹೇಳಿರುವುದಂತೂ ಆಶ್ಚರ್ಯದ ಸಂಗತಿ. ಬರಿಯ ಭಾಷಾವಾರು ದೃಷ್ಟಿಯಿಂದ ಸಂಸ್ಥಾನಗಳು ತೀರ್ಮಾನವಾಗುವುದಾದರೆ ಮುಂದೆ ಖಂಡಿತವಾಗಿ ಅಪಘಾತ ಬರುತ್ತದೆ. ಈಗಾಗಲೇ ಕೋಲಾರ, ಚಿತ್ರದುರ್ಗ, ತುಮಕೂರು, ಬೆಂಗಳೂರು ಈ ನಾಲ್ಕು ಆಂಧ್ರಕ್ಕೆ ಸೇರಬೇಕೆಂದು ಕೇಳುತ್ತಿದ್ದಾರೆ. (*Interruption and disturbance in he House*) ಆಂಧ್ರ ಸರ್ಕಾರದವರು ಆ ರೀತಿ ತೀರ್ಮಾನಮಾಡಿ ಕಳುಹಿಸಿರುವುದು ಪತ್ರಿಕೆಗಳಲ್ಲಿ ಬಂದಿದೆ. ಕನ್ನಡದ ದೃಷ್ಟಿಯಿಂದ ಮಾತ್ರವೇ ತೀರ್ಮಾನ ಹೇಳುವುದಾದರೆ, ಈ ಕಷ್ಟ ಮುಂದೆ ನಮಗೆ ಬರುತ್ತದೆ. ಆದರೆ ಮೈಸೂರಿನ ನಾನು ಹೇಳಿದ ಈ ನಾಲ್ಕು ಜಿಲ್ಲೆಗಳ ಜನರು ಯಾರೂ ಆ ವಿಧವಾಗಿ ಬೇರೆ ಕಡೆ ಹೋಗುವುದಕ್ಕೆ ಸಿದ್ಧವಾಗಿಲ್ಲ, ನಾವೂ ಆ ಜಿಲ್ಲೆಗಳನ್ನು ಬಿಡ್ಡುಕೊಡುವುದಕ್ಕೆ ಸಿದ್ಧವಾಗಿಲ್ಲ.........

ಶ್ರೀ ಎ. ಭೀಮಪ್ಪನಾಯಕ್.—ತಾವು ಅವರ ಪ್ರತಿನಿಧಿಯಾಗಿ ಮಾತನಾಡುತ್ತಿದ್ದೀರಾ ?

ಶ್ರೀ ವಿ. ವೆಂಕಟಪ್ಪ.—ನಾನು ನಿಂತಿರುವುದು ಜನರ ಪ್ರತಿನಿಧಿಯಾಗಿ, ಅವರ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ. ಇದನ್ನು ಪ್ರಶ್ನೆ ಮಾಡುವುದಕ್ಕೆ ಶ್ರೀ ಭೀಮಪ್ಪನಾಯಕರಿಗೆ ಅಧಿಕಾರವಿಲ್ಲ.

ಸ್ವಾಮಿ, ಆಗಲೇ ಕಾಲ ಬಹಳವಾಯಿತೆಂದು ಹೇಳಿದ್ದೀರಿ, ಮಿಕ್ಕ ವಿಷಯಗಳನ್ನು ತಿದ್ದುಪಡಿಗಳನ್ನು ಸೂಚಿಸಿದಾಗ ಮಾತನಾಡುತ್ತೇನೆ. ನನ್ನ ತಿದ್ದುಪಡಿಯೂ ಒಂದಿದೆ. ಅದು ಚರ್ಚೆಗೆ ಬಂದ ಸಂದರ್ಭದಲ್ಲಿ ಅವಶ್ಯಕಬಿದ್ದರೆ, ಇನ್ನೂ ಹೆಚ್ಚು ಹೇಳುವುದಿದ್ದರೆ, ಹೇಳುತ್ತೇನೆ. ಈ ಫಜಲಾಲಿ ಕಮಿಷನ್ನಿನವರಿಂದ ದೇಶದಲ್ಲಿ ಅಪಘಾತವಾಗಿ ವೈಷಮ್ಯ ಮನೋಭಾವ ಹುಟ್ಟಿದೆ. ಇದರಿಂದ ಖಂಡಿತವಾಗಿ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಯಾವ ದೇಶವನ್ನೇ ವಿಭಜನೆಮಾಡಿದರೂ ಅದರಿಂದ ದೇಶದಲ್ಲಿ ಒಗ್ಗಟ್ಟುಂಟಾಗುವಂತಿರಬೇಕು. ಹೊರಗಿನಿಂದ ಯಾವ ತೊಂದರೆಯೂ ದೇಶಕ್ಕೆ ಬರಬಾರದು ಎಂಬ ದೃಷ್ಟಿಯಿದೆ. ಆ ದೃಷ್ಟಿಗೇ ತೊಂದರೆಯುಂಟಾಗುವ ಪರಿಸ್ಥಿತಿಯಿದೆ. ಇದಕ್ಕೆ ಇಂಡಿಯಾ ಸರ್ಕಾರದವರು ಬಹುಶಃ ಅವಕಾಶ ಕೊಡಲಾರರೆಂದು ಅಂದುಕೊಂಡಿದ್ದೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಸಭಾಧ್ಯಕ್ಷರೇ, ಭಾರತಸರ್ಕಾರದವರು ಪ್ರಾಂತಗಳ ಪುನರ್ವಿಂಗಡಣಾ ಕಾರ್ಯವನ್ನು ಮಾಡುವುದಕ್ಕೆ ನೇಮಿಸಿದ ಸಮಿತಿಯವರು ಸಲ್ಲಿಸಿರತಕ್ಕ ಒಂದು ವರದಿಯ ವಿಚಾರದಲ್ಲಿ, ಅದರಲ್ಲಿಯೂ ಮೈಸೂರು ಸಂಸ್ಥಾನಕ್ಕೆ ಸಂಬಂಧಪಡತಕ್ಕ ಅಂಶಗಳನ್ನು ಕುರಿತು ನನ್ನ ಅಭಿಪ್ರಾಯವನ್ನು ತಿಳಿಸುವುದಕ್ಕೆ ನಾನು ನಿಂತಿದ್ದೇನೆ. ಈ ವಿಚಾರದಲ್ಲಿ ಈಗಾಗಲೇ ಕೆಲವು ಸದಸ್ಯರು ಮಾತನಾಡಿದ್ದಾರೆ. ಕೇಂದ್ರ ಸರ್ಕಾರದವರು ಈ ಸಮಿತಿಯವರಿಗೆ ಯಾವ ಒಂದು ಆದರ್ಶದಿಂದ ಈ ಕಾರ್ಯವನ್ನು ಮಾಡಬೇಕೆಂದು ವಹಿಸಿದ್ದಾರೋ ಅದಕ್ಕನ್ವಯಿಸುವಂತೆ ಅವರು ಈ ವರದಿಯನ್ನು ಸಲ್ಲಿಸಿದ್ದಾರೆಯೇ ಎಂಬುದನ್ನು ಮೊದಲು ಪ್ರಸ್ತಾಪಮಾಡಬೇಕಾಗಿದೆ. ಸ್ವಾಮಿ, ಯಾವುದೇ ಒಂದು ಪ್ರಾಂತ ಪುನರ್ವಿಂಗಡಣೆಯ ವಿಷಯವಾಗಲಿ ಅದು ಇದೇ ಭಾರತದ ಒಗ್ಗಟ್ಟಿಗೆ ಧಕ್ಕೆ ಬಾರದೇಯಿರುವ ರೀತಿಯಲ್ಲಿರಬೇಕೆಂದು ನಾವೆಲ್ಲರೂ ಒಪ್ಪಿದ್ದೇವೆ. ಇದೇ ಉದ್ದೇಶದಿಂದಲೇ ಕೇಂದ್ರ ಸರ್ಕಾರದವರು ಈ ಪುನರ್ವ್ಯವಸ್ಥೆಯ ಕಾರ್ಯವನ್ನು ಅವರಿಗೆ ವಹಿಸಿರುವುದು. ಈ ಸಮಿತಿಯವರು ಈ ಅಂಶಕ್ಕೆ ಎಷ್ಟು ಮಟ್ಟಿನ ಪ್ರಾಶಸ್ತ್ಯವನ್ನು ಕೊಟ್ಟು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆಂಬುದನ್ನು ನಾವು ಪರಿಶೀಲನೆ ಮಾಡಬೇಕು. ಅವರು ಸಲ್ಲಿಸಿರತಕ್ಕ ವರದಿಯಲ್ಲಿ 75 ಲಕ್ಷ ಪ್ರಜಾಸಂಖ್ಯೆಯಿಂದ ಕೂಡಿದ ಸಂಸ್ಥಾನಗಳಿಂದ ಹಿಡಿದು ಆರು ಕೋಟಿ ಪ್ರಜಾಸಂಖ್ಯೆಯಿರುವ ಸಂಸ್ಥಾನಗಳಿಗೆ ಅವಕಾಶ ಕೊಟ್ಟಿದ್ದಾರೆ. ಸ್ವಾಮಿ, ಸದಾಕಾಲದಲ್ಲಿಯೂ ನಿಲ್ಲುವ ದೃಷ್ಟಿಯಿಂದ ಏರ್ಪಡಿಸಬೇಕೆಂದಿರತಕ್ಕ ಸಂಸ್ಥಾನಗಳು ಎಷ್ಟುಮಟ್ಟಿಗೆ ಉದ್ದೇಶಕ್ಕೆ ಸಹಾಯಕವಾಗಿವೆ ಎಂಬುದನ್ನು ನಾವು ಯೋಚನೆಮಾಡಬೇಕು. ಈಗಾಗಲೇ ಅನೇಕ ದಕ್ಷಿಣ ಭಾರತದ ಸಂಸ್ಥಾನಗಳವರು ಕೇಂದ್ರ ಸರ್ಕಾರದಲ್ಲಿ ನಮ್ಮ ಅಭಿಪ್ರಾಯಗಳಿಗೆ ಸಾಕಷ್ಟು ಮನ್ನಣೆ ಸಿಕ್ಕುತ್ತಿಲ್ಲವೆನ್ನುವ ಕೂಗನ್ನೆತ್ತಿದ್ದಾರೆ. ನಾನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಇದಕ್ಕೆ ಕಾರಣವೇನು ? ಈಗಿನ ಸಂಸ್ಥಾನಗಳ ವ್ಯವಸ್ಥೆ, ಹಾಗೂ ಕೇಂದ್ರದಲ್ಲಿ ಈ ಸಂಸ್ಥಾನಗಳಿಗಿರತಕ್ಕ ಪ್ರಾತಿನಿಧ್ಯ ಇವೇ ಈ ಕೂಗಿಗೆ ಕಾರಣವೆಂದು ಹೇಳುತ್ತೇನೆ. ಈ ಕೂಗನ್ನು ತಪ್ಪಿಸಿದ ಹೊರತು ಮುಂದೆ ಎಷ್ಟು ಮಟ್ಟಿಗೆ ಕೇಂದ್ರ ಸರ್ಕಾರದಲ್ಲಿ ಜನರಿಗೆ ವಿಶ್ವಾಸವಿರುತ್ತದೆ ಎಂಬುದನ್ನು ತೀವ್ರವಾಗಿ ಯೋಚನೆಮಾಡಬೇಕಾಗಿದೆ. ಭಾರತದ ಎಲ್ಲಾ ಪ್ರದೇಶಗಳಲ್ಲಿಯೂ ವಿಶ್ವಾಸವಿರುವ ಬಲಯುತವಾದ ಕೇಂದ್ರನಿರ್ಮಾಣವಾಗಬೇಕಾದರೆ ಪುನರ್ವಿಂಗಡಣೆಯ ಸಮಿತಿಯವರು ಸಲ್ಲಿಸಿರತಕ್ಕ ವರದಿ ಸಾಧಕವಾಗಿದೆಯೆ ಎಂಬುದನ್ನು ಯೋಚನೆ ಮಾಡಬೇಕು. Representation of the People Actನ ಪ್ರಕಾರ ಕೇಂದ್ರ ಪಾರ್ಲಿಮೆಂಟಿಗೆ ಆಗುವ ಚುನಾವಣೆಯಲ್ಲಿ ನಮ್ಮ ಪ್ರತಿನಿಧಿಗಳನ್ನೂ ಚುನಾಯಿಸುತ್ತೇವೆ. ಆರು ಕೋಟಿ ಪ್ರಜಾಸಂಖ್ಯೆಯಿರುವ ಸಂಸ್ಥಾನದ ಪ್ರತಿನಿಧಿಗಳ ಮಾತಿನ ತೂಕವೇನು, ಕೇವಲ 75 ಲಕ್ಷ ಪ್ರಜಾಸಂಖ್ಯೆಯಿರುವ ಸಂಸ್ಥಾನದ ಪ್ರತಿನಿಧಿಗಳ ಮಾತಿಗಿರುವ ತೂಕವೇನು ಎಂಬುದನ್ನು ಯೋಚನೆಮಾಡಿದರೆ, ಈಗ ಯಾವ ಕೂಗಿದೆಯೋ ಅದು ನಿಲ್ಲುವುದಿಲ್ಲ, ಮುಂದೆಯೂ ಇರುತ್ತದೆಂಬುದು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದಲೇ ಆ ಕೇಂದ್ರ ಎಲ್ಲರ ವಿಶ್ವಾಸದಿಂದ ದೂರವಾಗುತ್ತದೆಂದು ಘಂಟಾಘೋಷವಾಗಿ ಹೇಳುತ್ತೇನೆ. ಎಲ್ಲರ ವಿಶ್ವಾಸವನ್ನೂ ಗಳಿಸುವ ಕಾರ್ಯವನ್ನು ಈಡೇರಿಸುವುದಕ್ಕೆ ಏನು ಮಾಡಬೇಕಾಗುತ್ತೆಂಬುದನ್ನು ಸಲಹೆಮಾಡುತ್ತೇನೆ. ಈ ಹೊತ್ತು ಪ್ರಾಂತ ಪುನರ್ವಿಂಗಡಣೆ ವಿಷಯವನ್ನು ಆಡಳಿತದ ಸೌಕರ್ಯದ ದೃಷ್ಟಿಯಿಂದ ಕೇಂದ್ರವನ್ನು ಬಲವಾಗಿರುವಂತೆ ಮಾಡಬೇಕೆಂದು ಮೊದಲೇ ಹೇಳಿದ್ದೇನೆ. ಹಾಗೆಯೇ ಆರ್ಥಿಕ ದೃಷ್ಟಿಯಿಂದಲೂ ಪ್ರಾಂತಗಳು ತಮ್ಮ ಕಾಲಮೇಲೆ ತಾವು ನಿಂತು ತಮ್ಮ ಜವಾಬ್ದಾರಿಯನ್ನು ವಹಿಸುವಂತಿರಬೇಕು. ಆದರೆ ಈ ಹೊತ್ತು ಈ ಉದ್ದೇಶ ನೆರವೇರಿಲ್ಲವೆಂದು ಹೇಳಬೇಕಾಗಿದೆ. ಅದರಲ್ಲಿಯೂ, ಆರು ಕೋಟಿ ಪ್ರಜಾಸಂಖ್ಯೆಯಿರುವ ಸಂಸ್ಥಾನ, 75 ಲಕ್ಷವಿರುವ ಸಂಸ್ಥಾನ, ಇವನ್ನು ಕೇಂದ್ರ ಸರ್ಕಾರ ಒಪ್ಪುವುದಾದರೆ, ಹೀಗೆ ಒಪ್ಪಿದ ದಿನ, ಭದ್ರತೆಯ ದೃಷ್ಟಿಯಿಂದ ಏನುಮಾಡಬೇಕೆಂದು ಹೊರಟಿದ್ದೇವೋ ಅದಕ್ಕೆ ವಿರೋಧವಾಗಿ, ದೇಶದಲ್ಲಿ ವಿಷಬೀಜವನ್ನು ಬಿತ್ತಿದಹಾಗಾಗುತ್ತದೆಂಬ ಅಭಿಪ್ರಾಯವನ್ನು ನಾನು ಕೊಡುತ್ತೇನೆ. ಎಲ್ಲಾ ಪ್ರದೇಶಗಳಿಗೂ ಸಮಾನ ಅವಕಾಶ, ಸಮಾನ ಹಕ್ಕುಬಾಧ್ಯತೆ ಇರತಕ್ಕ ಒಂದು ಕೇಂದ್ರವಾಗಬೇಕು.

(ಶ್ರೀ ಎ. ಪಿ. ನರಸಿಂಹರೆಡ್ಡಿ.)

ಅಲ್ಲದೆ, ಸ್ವಾತಂತ್ರ್ಯ ಬಂದಮೇಲೆ ಜನತೆಯ ಅಶೋತ್ತರ ವಾದರೂ ಏನು ?

ಎಲ್ಲರೂ ಕೂಡ ಆರ್ಥಿಕವಾಗಿ ಮುಂದುವರಿಯ ಬೇಕೆಂಬ ಆಕಾಂಕ್ಷೆಯಿಂದ ಕೂಡಿದ್ದಾರೆ. ಅದನ್ನು ನೆರವೇರಿಸುವ ದೃಷ್ಟಿಯಿಂದ ಈ ಕಮಿಟಿಯ ವರದಿ ಎಷ್ಟರಮಟ್ಟಿಗೆ ಸಹಾಯಕವಾಗಿದೆಯೆಂಬುದನ್ನು ಪರಿಶೀಲನೆಮಾಡೋಣ. ಇಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳನ್ನು ನಾವು ನೋಡುವುದಾದರೆ, ಅವರು ಇಲ್ಲಿ ದೊಡ್ಡ ಪ್ರಾಂತ್ಯವಿರಬೇಕೆಂದು ಏನು ಹೇಳಿದ್ದಾರೋ, ಅದು ಈ ದೃಷ್ಟಿಯನ್ನು ಯೋಚನೆಗೆ ತೆಗೆದುಕೊಳ್ಳದೆ ತೀರ್ಮಾನವಾಡಿದ್ದಾಗಿದೆಯೆಂದು ಹೇಳಬಹುದು. ನಾನಿಲ್ಲಿ ಉತ್ತರಪ್ರದೇಶವನ್ನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ಆರು ಕೋಟಿ ಪ್ರಜಾಸಂಖ್ಯೆಯಿರುವ ಉತ್ತರ ಪ್ರದೇಶ ಎಷ್ಟರಮಟ್ಟಿಗೆ ಆಡಳಿತದ ಸೌಲಭ್ಯದಿಂದ ಜನಗಳ ಅರ್ಥಿಕ ಉನ್ನತಿಗೆ ಸಹಾಯಕವಾಗಿದೆಯೆಂಬುದರ ಬಗ್ಗೆ ಅಂಕಿಅಂಶಗಳನ್ನು ನೋಡುವುದಾದರೆ ಖಂಡಿತವಾಗಿಯೂ ಇಡೀ ಭಾರತ ದೇಶದಲ್ಲಿ ಉತ್ತರ ಪ್ರದೇಶಕ್ಕಿಂತ—ಆಡಳಿತ ಸಡಿಲವಾಗಿರುವುದೆಂದು ಹೇಳುವುದಿಲ್ಲ—ಅಂತು, ಅಲ್ಲಿನ ಜನಗಳ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಅಶಕ್ತವಾಗಿರುವಂಥ ಸರ್ಕಾರ ಬೇರೆ ಯಾವುದೂ ಇಲ್ಲವೆಂದು ಹೇಳಬಲ್ಲೆ. ಆದ್ದರಿಂದ ಮುಖ್ಯವಾಗಿ ಜನಗಳ ಆರ್ಥಿಕ ಪ್ರಗತಿ, ಅವರ ಆಶೋತ್ತರಗಳನ್ನು ನೆರವೇರಿಸಬೇಕಾದರೆ ಎಷ್ಟು ಪ್ರಾಂತ್ಯಗಳನ್ನು ನಿರ್ಮಾಣಮಾಡುವುದು ಅವಶ್ಯಕವೆಂಬುದನ್ನು ಯೋಚನೆಮಾಡಬೇಕು. ಮೈಸೂರು ಯಾವ ಪರಿಸ್ಥಿತಿಯಲ್ಲಿದೆ ಈಗ ? ಕೇವಲ ನಮ್ಮ ತೃಪ್ತಿಗೆ, ನಮ್ಮ ಪ್ರೀತಿಗೆ ಅಥವಾ ನಮ್ಮ ಸ್ನೇಹಕ್ಕಾಗಿ, ಉಪಚಾರಕ್ಕಾಗಿ ಹೇಳುವ ಮಾತಲ್ಲ; ನಿಜವಾಗಿಯೂ ಎಲ್ಲ ಭಾಗದಲ್ಲಿಯೂ ಮುಂದುವರಿದಿದೆ, ಮಾದರಿ ಸಂಸ್ಥಾನವಾಗಿದೆ ನಮ್ಮ ಮೈಸೂರು ಸಂಸ್ಥಾನ. ಆದರೆ, ಮುಖ್ಯ ಮಂತ್ರಿಗಳು ಹೇಳುತ್ತಾ, ಇದೆಲ್ಲಾ ಉಪಚಾರಕ್ಕಾಗಿ ಮೈಸೂರು ದೇಶದ ಹೊರಗಡೆಯಿಂದ ಬಂದ ಜನರು ಹೇಳಿದ ಮಾತು ಎಂದು ಹೇಳಿದರು. ಅವರೇ ಹೇಳಿದ ಹಾಗೆ, ಅದು ಅವರ ವೈಯಕ್ತಿಕ ಅಭಿಪ್ರಾಯವಿರಬಹುದು. ಖಂಡಿತವಾಗಿ ನಾನು ಅವರ ಮಾತಿಗೆ ಪುರಸ್ಕಾರ ಕೊಡುವುದಿಲ್ಲ. ನಿಜವಾಗಿಯೂ ಮೈಸೂರು ದೇಶದ ಜನಜೀವನದ ಯಾವುದೇ ಭಾಗವನ್ನು ತೆಗೆದುಕೊಂಡರೂ, ವಿದ್ಯಾಭ್ಯಾಸದಲ್ಲೇ ಆಗಲಿ, ಆರೋಗ್ಯವನ್ನು ಕಾಪಾಡತಕ್ಕ ವಿಷಯದಲ್ಲಾಗಲಿ ಸರ್ವ ವಿಧದಲ್ಲೂ—ಎಲ್ಲಾ ಪ್ರಾಂತಗಳಿಂದಲೂ ಎಂದು ಹೇಳವೆ ಇದ್ದರೂ—ಇತರ ಅನೇಕ ಪ್ರಾಂತ್ಯಗಳಲ್ಲಿರತಕ್ಕ ಮಟ್ಟಕ್ಕಿಂತಲೂ ಮುಂದೆ ಹೋಗಿದೆಯೆಂದು ನಾನಂತೂ ನಂಬಿದ್ದೇನೆ. ಅಂಕಿ ಅಂಶಗಳನ್ನು ಬೇಕಾದರೂ ಕೊಡಬಲ್ಲೆ. ಆದರೆ ಅದೀಗ ಅನಾವಶ್ಯಕ.

ಅಂದಮೇಲೆ ನಮ್ಮ ಸಂಸ್ಥಾನ ಇಷ್ಟು ಮುಂದುವರಿಯುವುದಕ್ಕೆ ಕಾರಣವೇನು? ಫಜಲಾಲಿ ಕಮಿಷನ್ನಿನವರು ಇಲ್ಲಿಗೆ ಸಾಕ್ಷ್ಯ ತೆಗೆದುಕೊಳ್ಳುವುದಕ್ಕೆ ಬಂದಾಗ, ನಾವು ಅವರ ಮುಂದೆಹೋಗಿ ಸಾಕ್ಷ್ಯ ಕೊಡಕೂಡದೆಂಬು ನಮ್ಮ ಪಕ್ಷದ ನಿರ್ಬಂಧವಿತ್ತು. ಆದರೂ ಕಮಿಷನ್ನಿನವರು ನನಗೊಂದು ವೈಯಕ್ತಿಕವಾಗಿ ಪತ್ರ ಬರೆದು ನಿಮ್ಮ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕೆಂದಿದ್ದೇವೆ, ನಿಮ್ಮ ಮಾತನ್ನು ಕೇಳಬೇಕೆಂದಿದ್ದೇವೆಂದು, ತಿಳಿಸಿದ್ದರು. ಅದರ ಮೇಲೆ ನಾನು ಅಲ್ಲಿಗೆ ಹೋದಾಗ ನಾನು ನನ್ನ ಖಚಿತ ಅಭಿಪ್ರಾಯವನ್ನು ತಿಳಿಸದಿರುವುದು ನ್ಯಾಯಶಃ ಮರ್ಯಾದೆಯಲ್ಲವೆಂದು ತಿಳಿದುಕೊಂಡು ಕಾಂಗ್ರೆಸ್ಸಿನ ಆದೇಶವನ್ನು ಪಡೆದು ನನ್ನ ಅಭಿಪ್ರಾಯವನ್ನು ತಿಳಿಸಿದೆ. ಅವರೂ ನನ್ನ ಅಭಿಪ್ರಾಯವನ್ನು ಮೆಚ್ಚಿದಂತೆ ತೋರಿತು. ಆದರೆ, ಅವರಿಗೆ ನನ್ನ ಮಾತು ಒಪ್ಪಿಗೆಯಾದರೂ, ಮಿಕ್ಕ ಕನ್ನಡ ಪ್ರಾಂತ್ಯಗಳಿಗೆ ಏನುಮಾಡುವುದು ಎಂಬ ಯೋಚನೆ ಬಂತು. ಆದರೆ, ಏನು ಕಾರಣವೋ, ನನಗೆ ಈವರೆಗೂ ಗೊತ್ತಿಲ್ಲ, ಈ ಹೊತ್ತು ಅವರ ವರದಿ ಈ ರೀತಿಯಾಗಿದೆ. ನಾಸಿದಕ್ಕಾಗಿ ಕಮಿಷನ್ನಿನವರ ಮೇಲೆ ಆರೋಪಿಸುತ್ತಿಲ್ಲ ನಮ್ಮ ಸರ್ಕಾರದ ನೀತಿಯನ್ನು ಆರೋಪಿಸುತ್ತೇನೆ. ಇವರ ನೀತಿಯ ಫಲವಾಗಿ ಆ ಕಮಿಷನ್ನಿನವರು ಇಂದು ಮೈಸೂರು ಜನತೆಯ ಮನಸ್ಸಿನ ಮೇಲೆ ವ್ಯಾಕುಲವನ್ನುಂಟುಮಾಡುವ ರೀತಿಯಲ್ಲಿ ಈ ವರದಿಯನ್ನು ಸಲ್ಲಿಸಿದ್ದಾರೆ. ಕೇಂದ್ರ ಸರ್ಕಾರದವರು ಈ ರೀತಿ ಕಮಿಷನ್ ರಚಿಸಿ ಅವರು ದೇಶವನ್ನು ಸಂಚರಿಸುತ್ತಾ ನಮ್ಮ ಪ್ರಾಂತ್ಯಕ್ಕೆ ಬಂದಾಗ ನಾವು ನಮ್ಮ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಅಡ್ಡಿ ಆತಂಕಗಳನ್ನು ಹಾಕಿದ್ದು ನಿಜವಾಗಿಯೂ ಯಾರಿಗಾದರೂ ಮರ್ಯಾದೆಗೆ ಕುಂದು ಬಂದಂತಾಗಿದೆಯೆಂದು ಭಾವಿಸಿದರೆ ತಪ್ಪಲ್ಲ. ಈ ಕಾರಣದಿಂದ ಈ ವಿಷಯ *Ex parte* decree ಯಂತಾಗಿದೆಯೆಂದು ಹೇಳುತ್ತೇನೆ. ಧೇಬರ್‌ರವರು ಬಂದಾಗಲೂ ಕೂಡ ಅವರ ಮುಂದೆ ಇದನ್ನು ಹೇಳಿದ್ದೇನೆ. ಅವರೂ ಸತ್ಯಾಂಶವನ್ನು ತಿಳಿದಿದ್ದಾರೆಂದು ಭಾವಿಸಿದ್ದೇನೆ.

ಇನ್ನು ಇಡೀ ಭಾರತದ ಭದ್ರತೆಯ ದೃಷ್ಟಿಯಿಂದ ಮತ್ತು ಜನತೆಯ ಆರ್ಥಿಕೋನ್ನತಿಯ ದೃಷ್ಟಿಯಿಂದ ಪ್ರಾಂತ್ಯಗಳು ಎಷ್ಟು ದೊಡ್ಡವಾಗಿರಬೇಕು, ಎಷ್ಟು ಪ್ರಜಾಸಂಖ್ಯೆಯಿಂದ ಕೂಡಿರಬೇಕೆಂದು ಪ್ರಸ್ತಾಪ ಮಾಡುತ್ತೇನೆ. ನಾನೀಗ ಪ್ರಸ್ತಾಪಿಸಿದ ಮೈಸೂರು ಮತ್ತು ಉತ್ತರ ಪ್ರದೇಶದ ವಿಷಯವನ್ನು ನೋಡುವುದಾದರೆ, ಇಡೀ ಭಾರತದಲ್ಲಿ ಮೈಸೂರು ಇಷ್ಟು ಪ್ರಗತಿಪರವಾಗಿ ನಡೆದಿರಬೇಕಾದರೆ ಅದರ ಆಡಳಿತಕ್ಕೆ ಅನೇಕ ವಿಧವಾದ ಸೌಲಭ್ಯಗಳಿರುವುದೇ ಕಾರಣವೆಂದು ಹೇಳಿದರೆ ತಪ್ಪಲ್ಲ. ಹಿಂದೆ ನಮ್ಮ ಮೈಸೂರು ಸರ್ಕಾರದವರು ನೇಮಿಸಿದ್ದ ಫ್ಯಾಕ್ಟ್‌ಫೈಂಡಿಗ್ ಕಮಿಟಿಯ ವರದಿಯನ್ನು ಚರ್ಚೆಮಾಡುವ ಕಾಲದಲ್ಲಿ ಅನೇಕ ಮಹನೀಯರು ಇದೇ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಅದನ್ನೇ ನಾನು ಮತ್ತೆ ಹೇಳಲು ಇಷ್ಟಪಡುವುದಿಲ್ಲ. ಏನೇ ಬೇರೆ ಕಾರಣಗಳನ್ನು ಹೇಳಿದರೂ ಕೂಡ ಈ ಸಂಸ್ಥಾನ 32,000 ಚದರಮೈಲಿಗಳ ಬಾಹುಳ್ಯವನ್ನು ಹೊಂದಿ 97 ಲಕ್ಷ ಪ್ರಜಾಸಂಖ್ಯೆಯಿಂದ ಕೂಡಿ ಬಹಳ ಅಚ್ಚುಕಟ್ಟಾದ ಸಂಸ್ಥಾನವಾಗಿರುವುದರಿಂದ ಇಲ್ಲಿ ಇಷ್ಟರಮಟ್ಟಿನ ಆರ್ಥಿಕಪ್ರಗತಿಯನ್ನು ಸಾಧನೆಮಾಡುವುದಕ್ಕೆ ಸಹಾಯಕವಾಗಿದೆಯೆಂದು ಹೇಳಿದರೆ ಎಲ್ಲರೂ ಒಪ್ಪುತ್ತಾರೆ. ಇದನ್ನೇ ನಾನು ಕಮಿಷನ್ನಿನವರ ಮುಂದೆಯೂ ಹೇಳಿದೆ. ಮೈಸೂರು ಸಂಸ್ಥಾನವನ್ನೇ ಮಾದರಿಯಾಗಿಟ್ಟುಕೊಂಡು ಇಡೀ ಭಾರತದಲ್ಲಿನ ಇತರ ಸಂಸ್ಥಾನಗಳನ್ನೂ ನಿರ್ಮಾಣಮಾಡುವುದು ಬಹಳ ಚೆನ್ನಾಗಿದೆ. ಎಲ್ಲರೂ ಒಪ್ಪಬಹುದು ಎಂದು ಹೇಳಿದೆ. ಆ ಮಾತು ಅವರಿಗೂ ಚೆನ್ನಾಗಿ ಹಿಡಿಸಿದಹಾಗೆಯೇ ಕಾಣಿಸಿತು. ಆದರೆ, ಅದೇಕೋ, ಕೇಂದ್ರದವರು ಈ ಕಮಿಷನನ್ನು ನೇಮಿಸುವಾಗ terms of referenceನಲ್ಲಿ ಏನು ಕಾಣಿಸಿದ್ದಾರೋ ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲೇ ಈ ವರದಿಯನ್ನು ಮಾಡಿದ್ದಾರೆ. ಆಡಳಿತಕ್ಕೆ ಸರಿಯಾಗಿಲ್ಲದೆ, ಅನೇಕ ರೀತಿಯಲ್ಲಿ ಏರುಪೇರುಗಳಿಂದೊಡಗೂಡಿದ ಪ್ರಾಂತ್ಯಗಳು ಹೇಗೆ ಭಾರತದ ಭದ್ರತೆಗೆ ಸಹಾಯವಾಗಿದೆಯೆಂಬುದನ್ನು ಹೇಳಿಲ್ಲ. ಅವರೇನೋ ಹೇಳಬಹುದು, ಜನಗಳೇನೋ ಈಗ ಅಲ್ಲಲ್ಲಿ ಹೇಳಿಕೊಳ್ಳುತ್ತಿದ್ದಾರೆ ಅಷ್ಟೆ ಎಂದು. ಆದರೂ ಅವರು ಆಡಳಿತದ ದೂರದೃಷ್ಟಿಯನ್ನಿಟ್ಟುಕೊಂಡಿಲ್ಲ ಕೇವಲ ಕೆಲವು ಜನರು

ಹಾಗೆ ಹೀಗೆ ಹೇಳಿದರು. ಯಾರ್ಯಾರು ಎಷ್ಟರಮಟ್ಟಿಗೆ ಅವರ ಮೇಲೆ ಪ್ರಭಾವ ಬೀರಿದರೋ, ಆ ಪ್ರಭಾವಕ್ಕೊಳಗಾಗಿ ಮಾಡಿದ್ದಾರೆಂದು ಹೇಳಬಹುದು. ಹೀಗೆ ಹೇಳಿದ ಮಾತ್ರಕ್ಕೇ ಆ ಕಮಿಟಿಯವರ ವಿಷಯದಲ್ಲಿ ನನಗೆ ಗೌರವವಿಲ್ಲವೆಂದು ಹೇಳುವುದಿಲ್ಲ; ಅಪಾರ ಗೌರವವಿದೆ. ಅವರು ರಾಷ್ಟ್ರೀಯ ದುರುದ್ದೇಶದಿಂದೇನೂ ಮಾಡಿಲ್ಲ. ಆದರೆ, ಏನಿದ್ದರೂ ಇಂಥ ಬಹಳ ಪ್ರಾಮುಖ್ಯವಾದ ಸಮಸ್ಯೆಯನ್ನು ಎದುರಿಸುವಾಗ ಅವರು ಆಡಳಿತದಲ್ಲಿ ವಸ್ತುತಃ ಇರುವ ವಿಷಯಗಳೇನು ಎಂಬುದನ್ನು ಪರಿಶೀಲನೆಗೆ ತೆಗೆದುಕೊಂಡು ಮಾಡಬೇಕಾಗಿತ್ತು. ಆಡಳಿತದ ಅನುಭವದಮೇಲೆ ಈ ವರದಿಯು ಸಂದಾಯವಾಗಿಲ್ಲವೆಂಬುದು ನನ್ನೊಬ್ಬನ ಅಭಿಪ್ರಾಯವಲ್ಲ, ಅನೇಕರ ಅಭಿಪ್ರಾಯವಾಗಿದೆಯೆಂದು ಹೇಳುತ್ತೇನೆ. ಈ ಹೊತ್ತು ಕೇಂದ್ರ ಸರ್ಕಾರದವರು ಇದನ್ನು ಪರಿಶೀಲನೆ ಮಾಡುವಾಗ ಕೂಡ ಈ ಮೈಸೂರು ಜನತೆಯ ಆಶೋತ್ತರಗಳನ್ನು ಯಾವುದೇ ಕಾರ್ಯಕ್ಕಾಗಿ ಕಡೆಗಣಿಸಲಾಗರೆಂದು ನಾನು ಹೇಳುತ್ತೇನೆ. ಅಲ್ಲದೆ, ನಾನು ಘಂಟಾಘೋಷವಾಗಿ ಹೇಳುತ್ತೇನೆ. ಈ ಶಾಸನ ಸಭೆಯಲ್ಲಿ ಈ ವರದಿಗೆ ಬೆಂಬಲ ಕೊಡುವುದಕ್ಕೆ ಬಹುಮತದ ಸದಸ್ಯರು ಒಪ್ಪುವುದಿಲ್ಲವೆಂದು ಹೇಳುತ್ತೇನೆ. ಹೇಗಿದ್ದರೂ ಈ ಅಧಿವೇಶನದಲ್ಲಿ ಅದು ತೀರ್ಮಾನವಾಗುತ್ತದೆ. ಅದನ್ನು ಬೇಕಾದರೆ ಕಾದು ನೋಡಬಹುದು, ಒಂದುವೇಳೆ ಮುಖ್ಯಮಂತ್ರಿಗಳು ಹೇಳಿದಹಾಗೆ 50 ಜನ ಇತ್ತಕಡೆಯಿದ್ದು ಇನ್ನು 50 ಜನ ಅತ್ತಕಡೆ ವಿರುದ್ಧವಾಗಿದ್ದರೂ, ಈ 50% ಜನರು ವಿರುದ್ಧವಾಗಿಯೇ ಆ ತೀರ್ಮಾನವನ್ನು ಹೊರಿಸುವುದಾದರೆ ಅದರ ಪರಿಣಾಮವೇನೆಂಬುದನ್ನು ನಾನಂತೂ ಊಹಿಸಲಾರೆ.

ಅಲ್ಲದೆ, ಅವರೇ ಈ ವರದಿಯಲ್ಲಿ ಕೂಡ ಹೇಳಿದ್ದಾರೆ ಯಾವುದೇ ಒಂದು ಬಹುಮತದಿಂದ ಕೂಡಿದ ಅಭಿಪ್ರಾಯ ಬಂದರೂ ಕೂಡ ಅದೇ ಭಾಷೆಯನ್ನು ಮಾತನಾಡತಕ್ಕ ಒಂದು substantial minorityಯ ಮೇಲೆ ಈ ಒಂದು ತೀರ್ಮಾನವನ್ನು ಹೊರಿಸುವುದು ಸರಿಯಲ್ಲ, ಅದು ಬುದ್ಧಿವಂತಿಕೆಯಲ್ಲವೆಂದು ಹೇಳಿದ್ದಾರೆ. ಇದನ್ನೂ ಕೂಡ ಕೇವಲವಾಗಿ ಈ ಕಮಿಷನ್ನಿನವರು ಮಾತ್ರ ಹೇಳಿಲ್ಲ. ಧಾರ್ ಕಮಿಟಿಯವರೂ ಕೂಡ ಹೇಳಿದ್ದಾರೆ. ಜೆ. ವಿ. ಪಿ. ಕಮಿಟಿಯವರೂ ಹೇಳಿದ್ದಾರೆ ಹಾಗೆಯೇ ಇನ್ನೂ ಕೆಲವು ಅನೇಕ ಕಮಿಟಿಯವರು ಹೇಳಿದ್ದಾರೆ. It is a note of warning to the people at the helm of affairs while implementing the S. R. C. proposals, ಎಂದು ತಿಳಿಸಿದ್ದಾರೆ. ಇದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಇವೊತ್ತಿನ ಪರಿಸ್ಥಿತಿಯಾದರೋ ಹೀಗೆಯೇ ಇದೆ. ಜವಾಹರಲಾಲ್ ನೆಹರೂಅವರೇ ಆಗಲಿ ಯಾರೇ ಆಗಲಿ ಮೈಸೂರಿನವರಿಗೂ ಇತರ ಕರ್ಣಾಟಕದವರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ತಿಳಿದುಕೊಂಡಿಲ್ಲ. ಆದರೆ, ಕಮಿಷನ್ನಿನವರು ಇಲ್ಲಿನ ಜನರ ಮನೋಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಸಾಕಾದಷ್ಟು ಅವಕಾಶವಿಲ್ಲದಿರುವುದರಿಂದ ಅವರಿಗೆ, ಮೈಸೂರಿನವರಿಗೆ ವಿರೋಧಾಭಿಪ್ರಾಯವಿಲ್ಲವೋ ಏನೋ. ಶ್ರೀಮಾನ್ ವೆಂಕಟಪ್ಪನವರು ತೋರಿಸಿಕೊಟ್ಟ ಹಾಗೆ, ಕೇವಲ ಈಚೀಚೆಗೆ ತಾತ್ಕಾಲಿಕವಾಗಿ ಸ್ವಲ್ಪ ಮಟ್ಟಿಗೆ ಹುಟ್ಟಿತೋ ಎನ್ನುವ ರೀತಿಯಲ್ಲಿ ತಮ್ಮ ಶಿಫಾರಸುಗಳನ್ನು ಮಾಡಿದ್ದಾರೆ. ಶ್ರೀಮಾನ್ ರಾಮಚಂದ್ರರಾಯರು ಬಹಳ ವಿನಯದಿಂದ ಈ ಅಂಶಗಳನ್ನು ತಮ್ಮ ಮುಂದಿಟ್ಟಿದ್ದಾರೆ. ತಾವಿದನ್ನು ದೀರ್ಘವಾಗಿ ಆಲೋಚನೆಮಾಡಬೇಕು. ಹಾಗಲ್ಲದೆ ಜನರ ಮನಸ್ಸಿನಮೇಲೆ ನಿರ್ಬಂಧವಾಗಿ ಮೈಸೂರನ್ನೂ ಇತರ ಕರ್ಣಾಟಕವನ್ನೂ ಸೇರಿಸಬೇಕೆಂದು ವರದಿಯಲ್ಲಿ ಬಂದಿರುವುದೇ ಸರಿಯೆಂದು ಹೊರಿಸದೆ, ಇಲ್ಲಿನ ಇತರ ಸ್ನೇಹಿತರ ಹಿತವನ್ನೂ ಮನಸ್ಸಿನಲ್ಲಿಟ್ಟು ಯೋಚನೆಮಾಡಬೇಕೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ಅಂದಮಾತ್ರಕ್ಕೇ ನಾನೂ ಕೂಡ ಮೈಸೂರಿನ ಗಡಿ ಹೀಗೆಯೇ ಇರಬೇಕೆಂದು ಹೇಳುವುದಿಲ್ಲ. ಆಡಳಿತ ಸೌಕರ್ಯದ ದೃಷ್ಟಿಯಿಂದ ಇದಕ್ಕೆ ಅಕ್ಕಪಕ್ಕದ ಕೆಲವು ಪ್ರದೇಶಗಳು ಸೇರುವುದಾದರೆ, ಅದಕ್ಕೆ ಅವರೂ ಒಪ್ಪಿ ನಾವೂ ಒಪ್ಪುವುದಾದರೆ ಸೇರಿಸಿಕೊಳ್ಳೋಣ. ಅಂಥ ಪ್ರದೇಶಗಳನ್ನು ಸೇರಿಸಿಕೊಳ್ಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದೇ ಕಾಂಗ್ರೆಸ್ಸಿನ ನಿಲುವು. ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿಯ ನಿಲವೂ ಅದೇ. ಅದಕ್ಕೆ ನಾನೂ ಕೂಡ ತಲೆಬಾಗುತ್ತೇನೆ. ಶ್ರೀಮಾನ್ ಹನುಮಂತಯ್ಯನವರೂ ಮತ್ತು ವಿರೋಧಪಕ್ಷದ ನಾಯಕರಾದ ಇಮಾಂರವರೂ ಅದನ್ನೇ ಪ್ರಸ್ತಾಪಿಸಿದ್ದಾರೆ, ಹಾಗೂ ಪುಷ್ಟೀಕರಿಸಿದ್ದಾರೆ. ಆ ಕಾನ್ಸ್ಟಿಟ್ಯೂಯಂಟ್ ಅಸೆಂಬ್ಲಿಯ ನಿರ್ಣಯಕ್ಕೆ ನಾವೆಲ್ಲರೂ ತಲೆಬಾಗೋಣ. ಅದರಲ್ಲಿ ಹೇಳಿರುವುದಾದರೂ ಏನು? ನೆರೆಹೊರೆಯ ಪ್ರಾಂತ್ಯಗಳು ಸೇರುವುದಕ್ಕೆ ಪರಸ್ಪರವಾಗಿ ಒಪ್ಪಿದರೆ, ಅದು ಆಡಳಿತಕ್ಕೆ ಅನುಕೂಲವಾಗಿದ್ದರೆ, ಅಂಥ ಅಕ್ಕಪಕ್ಕದ ಪ್ರಾಂತ್ಯಗಳನ್ನು ಸೇರಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆ ನಿರ್ಣಯವನ್ನು ಶ್ರೀಮಾನ್ ರಾಮಚಂದ್ರರಾಯರು ಓದಿ ಕೂಡ ಹೇಳಿದ್ದಾರೆ. ಅದಕ್ಕೆ ಎಲ್ಲರೂ ಒಪ್ಪೋಣ, ಅದಕ್ಕೆ ವಿರುದ್ಧವಾಗಿ ಹೋಗುವುದು ಸರಿಯಲ್ಲ.

ಅದನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಈ ಹೊತ್ತು ನಮಗೆ ಆಡಳಿತ ಸೌಕರ್ಯದ ದೃಷ್ಟಿಯಿಂದ ಬಹಳ ಚೆನ್ನಾಗಿ ಹೊಂದತಕ್ಕಂಥ ನಮ್ಮ ಪಕ್ಕದಲ್ಲಿರುವ ಪ್ರದೇಶಗಳೆಂದರೆ ಕೊಡಗು, ದಕ್ಷಿಣ ಕನ್ನಡ ಮತ್ತು ಕೊಳ್ಳೆಗಾಲ. ಈಗಿರುವ ಪರಿಸ್ಥಿತಿಯಲ್ಲಿ ಇದನ್ನು ಎಲ್ಲರೂ ಒಪ್ಪಿದ್ದಾರೆ. ನಾನಂತೂ ಒಪ್ಪಿದ್ದೇನೆ. ನನ್ನ ಇತರ ಮಿತ್ರರನ್ನು ಒಪ್ಪಿಸುವ ಭಾರ ನನಗಿರಲಿ. ಇಷ್ಟು ಸಧ್ಯಕ್ಕೆ ಮಾಡಲಿ. ಮಿಕ್ಕ ಕನ್ನಡ ಭಾಗಗಳೇ ಸೇರಿ ಅಚ್ಚುಕಟ್ಟಾದ ಒಂದು ಪ್ರದೇಶವಾಗುತ್ತದೆ. ಕನ್ನಡ ಭಾಷೆ ಬೆಳೆಯಬೇಕು. ಕನ್ನಡ ದೇಶ ಅಭಿವೃದ್ಧಿಯಾಗಬೇಕು. ಕನ್ನಡ ಜನ ಪ್ರವರ್ಧಮಾನಕ್ಕೆ ಬರಬೇಕು, ನಾವೆಲ್ಲರೂ ಸೌಖ್ಯವಾಗಿ ಬಾಳಬೇಕೆಂಬುದೇ ನನ್ನ ಆಸೆಯೂ ಆಗಿದೆ. ಆದರೆ ಈ ಆಶೋತ್ತರ ನೆರವೇರುವುದಕ್ಕೆ ಒಂದು ಕರ್ಣಾಟಕವಾಗುವುದಕ್ಕಿಂತ ಇನ್ನೊಂದು ಕರ್ನಾಟಕವನ್ನು ರಚಿಸುವುದು ಒಳ್ಳೆಯದು. ಅದರಿಂದಲೇ ನಮ್ಮ ಈ ಆಶೋತ್ತರಗಳನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಮೈಸೂರು ಈಗ ಯಾವ ರೀತಿಯಾಗಿ ಅಚ್ಚುಕಟ್ಟಾಗಿ ಆಡಳಿತ ನಡೆಸಿಕೊಂಡು ಹೋಗುತ್ತಿದೆಯೋ, ಅದೇ ರೀತಿಯಲ್ಲಿ ಅವರೂ ನಮ್ಮೊಡನೆ ಸೇರಿಕೊಂಡರೆ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. ಕಾರಣ, ಅಲ್ಲಿನ ಜನರು ಇಲ್ಲಿನ ಜನರಷ್ಟು ಇನ್ನೂ ಜಾಗೃತರಾಗಿಲ್ಲ. ವ್ಯಾಪಾರದ ವಿಷಯದಲ್ಲೆನೋ ಕೆಲವರು ಸ್ವಲ್ಪಮಟ್ಟಿಗೆ ಮುಂದುವರಿದಿರಬಹುದು. ಆದರೆ ಸಾಮಾನ್ಯ ಜನತೆ ಅಲ್ಲಿ ಇನ್ನೂ ಅಷ್ಟು ಜಾಗೃತರಾಗಿಲ್ಲ. ಹೋದವರ್ಷವಿನ್ನೂ ಸೇರಿದ ಬಳ್ಳಾರಿಯ ವಿಷಯವನ್ನೇ ತೆಗೆದುಕೊಂಡರೆ, ಸರ್ಕಾರದವರು ತುಂಗಭದ್ರಾ ಅಣೆಕಟ್ಟಿನಿಂದ ನಾಲೆಯನ್ನು ತೆಗೆದುಕೊಟ್ಟು ಉಚಿತವಾಗಿ ನೀರು ಕೊಡುತ್ತೇವೆಂದು ಹೇಳಿದರೂ ಅಲ್ಲಿನ ಜನ ಭೂಮಿಯನ್ನು ಮಟ್ಟಕ್ಕೆ ತಂದು ನೀರನ್ನು ಜಾಗ್ರತೆ ತೆಗೆದುಕೊಳ್ಳುವಷ್ಟು ಚುರುಕಾಗಿಲ್ಲ. ನಮ್ಮ ಕಡೆಯವರಾದರೋ ಒಂದು ಕೆರೆ ರಿಪೇರಿ ಮಾಡಿಸಿಕೊಳ್ಳುವುದಕ್ಕೆ ಜನರೇ

(ಶ್ರೀ ಎ. ವಿ. ನರಸಿಂಹರೆಡ್ಡಿ.)

ಮುಂದೆ ಬಂದು ಹಣ ಕಟ್ಟಿ ಸರ್ಕಾರದ ಸಹಾಯ ಬೇಕೆಂದು ಒತ್ತಾಯಪಡಿಸುವವರಾಗಿದ್ದಾರೆ. ಪ್ರತಿಫಲ ಯಾವುದನ್ನೂ ನಿರೀಕ್ಷೆಮಾಡದೆ ನೀರು ಕೊಡುತ್ತೇವೆಂದರೂ ಆ ಜನ ಜಾಗೃತರಲ್ಲ. ಸರ್ಕಾರ ಸಹಾಯ ಮಾಡುತ್ತೇವೆಂದರೂ ಅವರು ಮುಂದುವರಿಯುವುದು ನಿಧಾನ. ಇನ್ನೂ ಆ ಜನ ನಿದ್ರೆಯಲ್ಲಿದ್ದಾರೆ. ಅಂಥ ಜನರನ್ನು ನಿದ್ರೆಯಿಂದ ಎಬ್ಬಿಸಬೇಕಾದರೆ ಈ ರೀತಿ ದೊಡ್ಡ ದೊಡ್ಡ ಪ್ರಾಂತ್ಯಗಳನ್ನಿಟ್ಟುಕೊಂಡರೆ ಆಗುವುದಿಲ್ಲ. ಚಿಕ್ಕ ಚಿಕ್ಕ ಸಂಸ್ಥಾನಗಳಿದ್ದರೆ ಉತ್ತಮ. ಆಗಲೇ ಸರ್ಕಾರಕ್ಕೂ ಪ್ರಜೆಗಳಿಗೂ ನಿಕಟವಾದ ನೇರವಾದ ಸಂಪರ್ಕವನ್ನಿಟ್ಟುಕೊಳ್ಳುವುದಕ್ಕೆ ಸಾಧ್ಯವಾದೀತು. ಇವೊತ್ತು ಇಡೀ ಭಾರತ ಮೈಸೂರನ್ನು ಮಾದರಿ ಸಂಸ್ಥಾನ, ಚಿನ್ನದ ನಾಡು ಎಂದು ಕೂಗುತ್ತಿದೆ. ಅಂಥ ಪ್ರಾಂತ್ಯದಂತೆ ಇತರ ಪ್ರಾಂತ್ಯಗಳನ್ನೂ ಮಾಡಬೇಕಾದರೆ ಈ ರೀತಿಯ ಪ್ರಾಂತ್ಯ ಪುನರ್ವಿಂಗಡಣೆಯಿಂದ ಸಾಧ್ಯವಾಗುವುದಿಲ್ಲವೆಂಬುದನ್ನೂ ನಮ್ಮ ಹಿರಿಯನಾಯಕರು ಯೋಚನೆ ಮಾಡಬೇಕು. ಆದುದರಿಂದ ಕೇಂದ್ರದಲ್ಲಿರುವ ನಮ್ಮ ನಾಯಕರಾದ ಶ್ರೀಯುತ ನೆಹರೂ ಅವರೂ ಮತ್ತು ಶ್ರೀ ಗೋವಿಂದ ವಲ್ಲಭ ಪಂತರವರೂ ಸೇರಿ ಅವರೇ ನೇಮಕ ಮಾಡಿರತಕ್ಕಂಥ ಈ ಫಜ್ಲಾಲಿ ಸಮಿತಿಯವರು ಒಪ್ಪಿಸಿರತಕ್ಕ ವರದಿಗನುಸಾರವಾಗಿ ಇದಕ್ಕೇ ಬೆಂಬಲ ಕೊಟ್ಟು ಕಾರ್ಯಕ್ರಮ ಕೈಗೊಳ್ಳುವುದು ಸರಿಯಲ್ಲ. ಅದಕ್ಕಾಗಿ ಅವರು ಜನರ ಆಶೋತ್ತರಗಳು ಈಡೇರತಕ್ಕ ರೀತಿಯಲ್ಲಿ ಈ ರಾಜ್ಯಗಳ ಪುನರ್ವಿಂಗಡಣೆ ಮಾಡತಕ್ಕದ್ದನ್ನು ಪುನಃ ಆಲೋಚನೆಮಾಡತಕ್ಕದ್ದು ಉಚಿತವಾಗಿದೆ. ಹೀಗೆ ಮಾಡದೆ ಕೇವಲ ತಾವು ಕೊಡತಕ್ಕ ನಿರ್ದೇಶ ಅಥವಾ ಬಲವಂತಕ್ಕೆ ಎಲ್ಲರೂ ಒಳಗಾಗಬೇಕೆಂದು ಹೇಳುವುದು ಅಷ್ಟು ಸರಿಯಲ್ಲ ಮತ್ತು ಅದು ಪ್ರಜಾಪ್ರಭುತ್ವ ಆಡಳಿತಕ್ಕೂ ಸಹ ಸರಿಹೋಗುವುದಿಲ್ಲ. ಹಾಗೆ ಮಾಡುವುದರಿಂದ ದೇಶದ ಭದ್ರತೆ ಸರಿಯಾಗಿರುವುದಿಲ್ಲ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**Mr. SPEAKER.**—Now the House will rise for Lunch and meet again at 3-35 P.M.

---

*The House rose for Lunch at Five Minutes past Three of the Clock, and re-assembled at Forty Minutes past Three of the Clock.*

---

[MR. SPEAKER IN THE CHAIR.]

ಶ್ರೀ ಆರ್. ಅನಂತರಾಮರ್ (ಚಾಮರಾಜಪೇಟೆ)—ಮಾನ್ಯ ಸಭಾಧ್ಯಕ್ಷರೇ, ನಾನು ನನ್ನ ಹಿಂದಿನ ಭಾಷಣದಲ್ಲೇ ಅಂದರೆ ಈ ಹಿಂದೆ ಶೇಷಾದ್ರಿವರದಿಯ ಮೇಲೆ ಚರ್ಚೆಯಾಗುತ್ತಿದ್ದಂಥ ಕಾಲದಲ್ಲಿ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ. ನಾನು ಆ ಸಂದರ್ಭದಲ್ಲಿ ಕರ್ಣಾಟಕ ಪ್ರಾಂತ್ಯರಚನೆಯ ವಿಚಾರವಾಗಿ ಮಾತನಾಡಿದ್ದೇನೆ, ಆದುದರಿಂದ ನಾನೀಗ ಆ ವಿಚಾರವನ್ನು ಪ್ರಸ್ತಾಪಿಸುವುದಿಲ್ಲ. ಆದರೆ ಒಂದು ಅಂಶ ಮಾತ್ರ ತಿಳಿಸಿ ನಾನು ನನ್ನ ಮಾತುಗಳನ್ನು ಮುಂದುವರಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ನಾನು ಈ S. R. C. ವರದಿಯನ್ನು ಸ್ವಾಗತಿಸುತ್ತೇನೆ ಮತ್ತು ಒಪ್ಪುತ್ತೇನೆ. ಆದರೆ ಈ ವರದಿಯಲ್ಲಿ ಒಂದು ದೊಡ್ಡ ಅನ್ಯಾಯವಾಗಿದೆ. ಅದು ಯಾವುದೆಂದರೆ, ಆ ಬಳ್ಳಾರಿಯ ಪ್ರಶ್ನೆ. ಇಷ್ಟೊಂದು ದುರ್ದೈವಕ್ಕೆ ತುತ್ತಾದಂಥ ಮತ್ತೊಂದು ಪ್ರದೇಶ ಎಲ್ಲಿಯೂ ಇರಲಾರದೆಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ಮೊಟ್ಟಮೊದಲನೆಯದಾಗಿ ರಾಜ್ಯವು ಟಿಪ್ಪೂಸುಲ್ತಾನನ ಕೈಬಿಟ್ಟಾಗ ಇಂಗ್ಲೀಷರು ಈ ಬಳ್ಳಾರಿ ಜಿಲ್ಲೆಯನ್ನು ಹೈದರಾಬಾದಿನ ನೈಜಾಮರಿಗೆ ಕೊಟ್ಟರು. ಅವರು ಅದು ನಮಗೆ ಬೇಕಿಲ್ಲ ಎಂದು ಹೇಳಿ ಆ ಜಿಲ್ಲೆಯನ್ನು ಮದರಾಸಿಗೆ ಕೊಟ್ಟರು. ತದನಂತರ ಅದನ್ನು ಅವರು ನಮಗೂ ಬೇಡ ಎಂದುಹೇಳಿ ನಮ್ಮ ಮೈಸೂರಿಗೆ ಕೊಟ್ಟರು.ಆದರೆ ಈಗ ಅದರಲ್ಲಿ ಅರ್ಧ ಭಾಗವನ್ನು ನಮ್ಮಿಂದ ಕಿತ್ತು, ಪುನಃ ಆಂಧ್ರಕ್ಕೆ ಕೊಡಬೇಕೆಂದು ಈ ವರದಿ ಒಂದು ಸೂಚನೆ ಮಾಡಿದೆ. ಈ ರೀತಿ ಮಾಡುವುದು ಬಹಳ ಅನ್ಯಾಯ. ಬಹಳ ಅನ್ಯಾಯ ಅಂದರೆ ಕೊರಿಯಾ ದೇಶವನ್ನು ಅರ್ಧ ವಿಭಾಗ ಮಾಡಿದಂತೆಯೂ ಮತ್ತು ಬರ್ಲಿನ್ ನಗರವನ್ನು ಇಭ್ಭಾಗ ಮಾಡಿದ ಹಾಗೆಯೂ ಆಗಿದೆ. ಆ ಜನರಿಗೆ ಇಷ್ಟು ತೊಂದರೆಯನ್ನುಂಟು ಮಾಡುವುದು ಒಳ್ಳೆಯದಲ್ಲ ಈ ವರದಿಯಲ್ಲೇ ಕೆಲವು ವಿಷಯಗಳನ್ನು ಅವರು ಬಹಳವಾಗಿ ಚರ್ಚೆ ಮಾಡಿದ್ದಾರೆ. ಮೊದಲನೆಯದಾಗಿ ಆಂಧ್ರದೊಂದಿಗೆ ವ್ಯವಹಾರವನ್ನು ಈ ಬಳ್ಳಾರಿಯವರು ಬಹಳ ನಿಕಟವಾಗಿ ಇಟ್ಟುಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ ಈ ಅಂಶ ಸರಿಯಾದ್ದಲ್ಲ. ಅದಕ್ಕೆ ನಾನು ಒಂದು ದೃಷ್ಟಾಂತ ಕೊಡುತ್ತೇನೆ. ಈಗ ಆಂಧ್ರಕ್ಕೆ ಸೇರಿರುವ ಬೆಜವಾಡದಿಂದ ಅಕ್ಕಿ ನಮ್ಮ ಮೈಸೂರಿಗೆ ವಿಶೇಷವಾಗಿ ಬರುತ್ತಿದೆ. ಅಂದಮಾತ್ರಕ್ಕೆ ನಮ್ಮ ಮೈಸೂರಿಗೂ ಬೆಜವಾಡಕ್ಕೂ ಬಹಳ ನಿಕಟವಾದ ವ್ಯವಹಾರವಿದೆ ಎಂದು ಹೇಳಿದರೆ ಹೇಗಾಗುತ್ತದೋ ಹಾಗೆಯೇ ಈಗ ಆ ಸಮಿತಿಯವರು ಈಗ ಬಳ್ಳಾರಿಗೂ ಮತ್ತು ಆಂಧ್ರಕ್ಕೂ ಬಹಳ ನಿಕಟವಾದ ವ್ಯವಹಾರ ಸಂಪರ್ಕವಿದೆಯೆಂದು ಹೇಳಿದಂತೆ ಇದೆ. ಆದರೆ ಸಾಮಾನ್ಯವಾಗಿ ಇಂಥ ವ್ಯವಹಾರಗಳಲ್ಲಿ ಒಂದು ಪ್ರಾಂತಕ್ಕೂ ಮತ್ತೊಂದು ಪ್ರಾಂತಕ್ಕೂ ಹೀಗೆಯೇ ಸಾಮಾನುಗಳು ಹೋಗುವುದೂ ಬರುವುದೂ ಇದ್ದೇ ಇರುತ್ತದೆ. ಅದೇ ರೀತಿ ಈಗ ನಮಗೂ ಮದರಾಸಿಗೂ ವ್ಯವಹಾರ ಚೆನ್ನಾಗಿಯೇ ಇದೆ. ಆದರೆ ನಮ್ಮ ಸೀಮೆಯನ್ನು ಅವರಿಗೆ ಸೇರಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಕೊಡಬೇಕೆಂದು ಹೇಳಿರುವುದು ಸರಿಯಾದದ್ದಲ್ಲ.

ಆ ವರದಿಯಲ್ಲಿ ಆ ಸಮಿತಿಯವರು ಮತ್ತೊಂದು ಅಂಶವನ್ನು ಚರ್ಚೆ ಮಾಡಿದ್ದಾರೆ. ಅದೇನೆಂದರೆ ಬಳ್ಳಾರಿ ಆಂಧ್ರದ ರಾಜಧಾನಿಯಾದ ಕರ್ನೂಲಿಗೆ ಬಹಳ ಹತ್ತಿರದಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇದು ನಿಜವಾದ ಅಭಿಪ್ರಾಯವಲ್ಲ. ಇದರ ಜೊತೆಗೆ ಆಂಧ್ರಕ್ಕೆ ಸರಿಯಾದ ಒಂದು ರಾಜಧಾನಿಯಿಲ್ಲ, ಅದಕ್ಕೋಸ್ಕರವಾಗಿ ಈ ಬಳ್ಳಾರಿಯನ್ನು ಆಂಧ್ರಕ್ಕೆ ಬಿಟ್ಟುಕೊಡುವುದು ಉತ್ತಮವಾಗಿದೆ ಎಂದು ಮತ್ತೊಂದು ಕಾರಣ ತಿಳಿಸಿದ್ದಾರೆ. ಆದರೆ ಸಮಿತಿಯವರಿಗೆ ಮುಂದೆ ವಿಶಾಲಾಂಧ್ರ ಆಗುತ್ತದೆಂಬ ಅಭಿಪ್ರಾಯವಿರಲಿಲ್ಲ. ಈಗ ವಿಶಾಲಾಂಧ್ರವಾಗುವುದಕ್ಕೆ ಅವ

ಕಾಶವಾಗಿರುವುದಾಗಿ ಕಂಡುಬರುತ್ತಿರುವುದರಿಂದ ಆಂಧ್ರಕ್ಕೆ ಹೈದರಾಬಾದು ಸೇರಿರುವುದರಿಂದ ಅವರಿಗೆ ಈ ರಾಜಧಾನಿಯ ತೊಂದರೆಯೂ ತಪ್ಪಿಹೋಗುತ್ತದೆ. ಆದರೆ ಬಳ್ಳಾರಿ ಮೈಸೂರು ರಾಜಧಾನಿಗೆ ದೂರ, ಆಂಧ್ರಕ್ಕೆ ಹತ್ತಿರ ಎನ್ನತಕ್ಕಂಥ ಒಂದು ಪ್ರಶ್ನೆಯನ್ನು ಇಂಥ ವಿಮಾನ ಅಟಾಮಿಕ್ ಶಕ್ತಿಗಳಿರುವ ಯುಗದಲ್ಲಿ ಚರ್ಚೆಮಾಡುವುದು ಅಷ್ಟೇನೂ ಪ್ರಾಮುಖ್ಯವಾದಂಥ ವಿಷಯವಲ್ಲ. ಈ ದಿವಸ ಅಷ್ಟುದೂರದ ಪ್ರಾಂತ್ಯದಲ್ಲಿರುವ ದೆಹಲಿಯಲ್ಲಿ ನಮ್ಮ ನಾಯಕರು ಕುಳಿತುಕೊಂಡು ನಮ್ಮೆಲ್ಲರ ಪ್ರಾಂತ್ಯಗಳಮೇಲೂ ಆಡಳಿತವನ್ನು ನಡೆಸುತ್ತಿಲ್ಲವೇನು? ಹೀಗಿರುವಾಗ ಬಳ್ಳಾರಿ ಕರ್ನೂಲಿಗೆ ಬಹಳ ಹತ್ತಿರವಿದೆ ಎಂದು ಹೇಳಿರತಕ್ಕದ್ದು ಖಂಡಿತ ಸರಿಯಾದ ಅಭಿಪ್ರಾಯವಲ್ಲ.

ಇನ್ನು ತುಂಗಭದ್ರಾ ಜಲಾಶಯದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಈ ಜಲಾಶಯ ರಾಯಲ ಸೀಮೆಗೆ ಸೇರಬೇಕೆಂದು ಹೇಳಿದ್ದಾರೆ. ಆದರೆ ಈ ತುಂಗಭದ್ರಾಜಲಾಶಯದ ಹೆಚ್ಚಿನ ಅನುಕೂಲ ಕರ್ಣಾಟಕಕ್ಕಿದೆಯೇ ಹೊರತು ಆಂಧ್ರಕ್ಕಿರುವುದಿಲ್ಲ. ಕರ್ಣಾಟಕದಲ್ಲಿ ಈ ಜಲಾಶಯದಿಂದ ಸುಮಾರು ನಾಲ್ಕೂ ಕಾಲು ಲಕ್ಷ ಎಕರೆ ಜಮೀನು ಸಾಗುವಳಿಗೆ ಬರುತ್ತದೆ. ಈಗಾಗಲೇ ಒಂದೂಕಾಲು ಲಕ್ಷ ಎಕರೆ ಮೈಸೂರಿನಲ್ಲಿ ಸಾಗುವಳಿಯಾಗುತ್ತಿದೆ. ಇದರಿಂದ ಒಟ್ಟು ಕರ್ಣಾಟಕದಲ್ಲಿ $5\frac{1}{4}$ ಲಕ್ಷ ಎಕರೆ ನೀರು ಸಾಕಾಗುತ್ತದೆ. ಆಂಧ್ರಕ್ಕೆಲ್ಲಾ ಅನುಕೂಲವಾಗುವುದಾಗಿದ್ದರೆ ಅದು ಎಷ್ಟೇ ಹೆಚ್ಚೆಂದರೂ ಒಂದೂವರೆ ಲಕ್ಷಕ್ಕಿಂತ ಹೆಚ್ಚಾಗುವುದಿಲ್ಲ. ಈ ಕಾರಣದಿಂದ ನೋಡಿದಾಗ್ಯೂ ಕೂಡ ಈ ತುಂಗಭದ್ರಾಯೋಜನೆಯು ಸಂಪೂರ್ಣವಾಗಿ ಕರ್ಣಾಟಕಕ್ಕೆ ಸೇರಬೇಕಾಗಿರುತ್ತದೆ. ಕರ್ಣಾಟಕಕ್ಕೆ ಇದು ಹೆಚ್ಚು ಅನುಕೂಲ ನೀಡತಕ್ಕದ್ದಾಗಿದೆ. ಹೀಗೆ ಮಾಡಿದರೆ ಇದರಿಂದ ಆಂಧ್ರಕ್ಕೇನೂ ಅನ್ಯಾಯವಾಗಲಾರದು. ಆದಕಾರಣ ಈ ತುಂಗಭದ್ರ ಜಲಾಶಯವು ರಾಯಲ್ ಸೀಮೆಗೆ ಸೇರಬೇಕೆಂದು ಸೂಚಿಸಿರುವುದು ಸರ್ವಥಾ ಸರಿಯಾದದ್ದಲ್ಲ. ಈಗ ಈ ನೀರಿನ ಹಂಚಿಕೆ ವಿಷಯಕ್ಕಾಗಿ ಒಂದು ಬೋರ್ಡನ್ನು ರಚಿಸಿದ್ದಾರೆ. ಬೋರ್ಡಿನಲ್ಲಿ ಕೆಲಸ ಮಾಡತಕ್ಕವರು ಕನ್ನಡಿಗರೂ ಅಲ್ಲ, ಆಂಧ್ರರೂ ಅಲ್ಲ. ಅವರು ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಿಗೆ ಸೇರಿದಂಥ ಅನ್ಯರು. ಅವರು ನಮ್ಮ ಕೈಕೆಳಗಿಲ್ಲ. ಆದಾಗ್ಯೂ ಅವರು ಆಂಧ್ರರಿಗೆ ಪಕ್ಷಪಾತತೋರಿಸುತ್ತಿದ್ದಾರೆಂದು ಹೇಳಿರುವುದು ಸರಿಯಲ್ಲ. ಅದಕ್ಕೆ ಮೈಸೂರಿನವರೂ ಅಲ್ಲ ಕರ್ಣಾಟಕದವರೂಅಲ್ಲ ಆಂಧ್ರರೂ ಅಲ್ಲ, ಹೊರಗಡೆಯವರು ಅಧ್ಯಕ್ಷರಾಗಿದ್ದಾರೆ. ಮೂರು ಸರ್ಕಾರದವರು ತಮ್ಮ ಪ್ರತಿನಿಧಿಗಳನ್ನು ಆ ಬೋರ್ಡಿಗೆ ಕಳುಹಿಸಿದ್ದಾರೆ. ಅವರು ಬೋರ್ಡಿನ ವ್ಯವಹಾರ ನಡೆಸಿಕೊಂಡು ತುಗಭದ್ರಾ ಜಲಾಶಯದ ಆಡಳಿತವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಹೀಗಿರುವಾಗ ಆಂಧ್ರರಿಗೆ ಏನೂ ಅನ್ಯಾಯವಾಗುವ ಸಂದರ್ಭವೇ ಇಲ್ಲ. $5\frac{1}{2}$ಲಕ್ಷ ಎಕರೆ ಜಮೀನು ಕರ್ಣಾಟಕಕ್ಕೆ ಬರುವಾಗ ಇಂತಹ ಬೋರ್ಡ್ ಇರುವಾಗ ಯಾರಿಗೂ ಏನೂ ತೊಂದರೆಯಾಗುವುದಿಲ್ಲ. ಈ ಸಮಿತಿಯವರು ಈ ಕಾರಣದ ಮೇಲೆ ಬಳ್ಳಾರಿಯ ಮೂರು ತಾಲ್ಲೂಕುಗಳನ್ನೂ ಆಂಧ್ರರಿಗೆ ಕೊಟ್ಟಿರುವುದು ಬಹಳ ಅನ್ಯಾಯವಾಗಿದೆ. ಅಲ್ಲಿ ಸುಮಾರು ಶೇಕಡ 90 ಭಾಗ ಕನ್ನಡಿಗರು ಇದ್ದಾರೆ. ಬಳ್ಳಾರಿ ಟೌನಿನಲ್ಲಿ ಮಾತ್ರ ಕೆಲವರು ಆಂಧ್ರರು ಜಾಸ್ತಿ ಇದ್ದಾರೆಯೇ ಹೊರತು ಸುತ್ತಮುತ್ತ ಸಿರುಗುಪ್ಪಾ ಮತ್ತು ಇತರರ ತಾಲ್ಲೂಕುಗಳಲ್ಲಿ ಕನ್ನಡಿಗರು ಜಾಸ್ತಿ ಇದ್ದಾರೆ. ಕನ್ನಡಿಗರ ಸ್ಥಳಗಳನ್ನು ತೆಗೆದುಕೊಂಡು ಹೋಗಿ ಆಂಧ್ರರಿಗೆ ಸೇರಿಸುವುದು ನ್ಯಾಯವಲ್ಲ. ಈ ವಿಚಾರವನ್ನು ಕೇಂದ್ರ ಸರ್ಕಾರದವರು ತಿಳಿದುಕೊಂಡಿದ್ದಾರೆ. 1949ರಲ್ಲಿ Partition Committee ಎಂಬುದನ್ನು ಮದರಾಸಿನಲ್ಲಿ ಮಾಡಿದರು. ಅದಕ್ಕಿಂತಲೂ ಹಿಂದೆ 1921ರಲ್ಲಿ ಕೇಳ್ಕರ್ ಸಮಿತಿ ಆಯಿತು. ಆಗಿನ ಕಲ್ಲಿಲದಲ್ಲಿ ಕಾಂಗ್ರೆಸ್ ಸಮಿತಿಯವರು ಆಡಳಿತಕ್ಕೋಸ್ಕರ ಭಾಷಾವಾರು ಸಂಸ್ಥಾನಗಳನ್ನು ಮಾಡಬೇಕು. ಎಂದು ಸಲಹೆ ಮಾಡಿದರು. ಬಳ್ಳಾರಿಯ ವಿಚಾರದಲ್ಲಿ ಮಾತ್ರ ಸ್ವಲ್ಪ ತೊಡಕು ಬಂತು. ಆಗ ಕೇಳ್ಕರ್ ಸಮಿತಿ ನೇಮಕ ಮಾಡಿದರು. ಆಗ ಆಡೋನಿ, ರಾಯದುರ್ಗ, ಆಲೂರು ಪ್ರದೇಶಗಳು ಆಂಧ್ರಕ್ಕೆ ಸೇರತಕ್ಕದು. ಮತ್ತು ಬಳ್ಳಾರಿಯ 7 ತಾಲ್ಲೂಕುಗಳು ಕರ್ಣಾಟಕಕ್ಕೆ ಸೇರತಕ್ಕದು ಎಂದು ಒಂದು award ಕೊಟ್ಟಿದ್ದಾರೆ. 1949ರಲ್ಲಿ ಒಂದು ಪಾರ್ಟಿಷನ್ ಕಮಿಟಿ ಆಯಿತು. ಆಂಧ್ರವನ್ನು ಮದ್ರಾಸಿನಿಂದ ಬೇರ್ಪಡೆ ಮಾಡುವಾಗ ಮದರಾಸಿನ ಮುಖ್ಯಮಂತ್ರಿಗಳು ಶ್ರೀ ಭಕ್ತವತ್ಸಲಂ ಮತ್ತು ಇನ್ನೊಬ್ಬರು ಮತ್ತು ಆಂಧ್ರರ ಪರವಾಗಿ ಮಂತ್ರಿಗಳಾದ ಶ್ರೀ ಗೋಪಾಲರೆಡ್ಡಿ, ಶ್ರೀ ಸಂಜೀವರೆಡ್ಡಿ ಮತ್ತು ಇನ್ನೊಬ್ಬರು ಹೀಗೆ 6 ಜನರ ಸಮಿತಿಯೊಂದು ರಚನೆಯಾಗಿ ಆ ಸಮಿತಿಯಲ್ಲಿಯೂ ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಬಳ್ಳಾರಿಯ 3 ತಾಲ್ಲೂಕುಗಳು, ಅಂದರೆ ಆಡೋನಿ, ಆಲೂರು ಮತ್ತು ರಾಯದುರ್ಗ ಮಾತ್ರ ಆಂಧ್ರಕ್ಕೆ ಹೋಗತಕ್ಕದು. ಆದರೆ ಏಳು ತಾಲ್ಲೂಕುಗಳು ಕರ್ಣಾಟಕಕ್ಕೆ ಹೋಗತಕ್ಕದು ಎಂದು ಅವರು ತೀರ್ಮಾನ ಕೊಟ್ಟಿದ್ದಾರೆ. ಆಮೇಲೆ ವಾಂಛೂ ಸಮಿತಿಯವರು, ಮಿಶ್ರಾ ಸಮಿತಿಯವರೂ ಇದನ್ನು ಚೆನ್ನಾಗಿ ಚರ್ಚೆಮಾಡಿ ಬಳ್ಳಾರಿ ವಿಚಾರದಲ್ಲಿ ಅವರ ತೀರ್ಪನ್ನು ಕೊಟ್ಟಿದ್ದಾರೆ. ಮಿಶ್ರಾ ಸಮಿತಿಯವರ ರಿಪೋರ್ಟಿನಲ್ಲಿ ಬಳ್ಳಾರಿ ತಾಲ್ಲೂಕನ್ನೂ ಸಹ ಸೇರಿಸಿದರು. ಆಂಧ್ರರು ಬಳ್ಳಾರಿ ಟೌನಿನಲ್ಲಿ ಜಾಸ್ತಿ ಜನ ಇದ್ದಾರೆ. ಇದೇ ರೀತಿ ಬೆಂಗಳೂರಿನಲ್ಲಿಯೂ ತಮಿಳರು ಹೆಚ್ಚಾಗಿದ್ದಾರೆ. ಶೇಕಡ 33 ಭಾಗದಷ್ಟು ತಮಿಳರು, ಶೇಕಡ 20 ಭಾಗ ತೆಲುಗರೂ ಶೇಕಡ 29 ಭಾಗ ಕನ್ನಡಿಗರೂ ಇದ್ದಾರೆ. ಅದೇ ರೀತಿ ಬಳ್ಳಾರಿ ಟೌನಿನಲ್ಲಿ ಆಂಧ್ರರು ಜಾಸ್ತಿ ಇದ್ದಾರೆ. ತುಂಗಭದ್ರಾ ಜಲಾಶಯ ಇರುವುದರಿಂದ ವ್ಯಾಪಾರಕ್ಕಾಗಿ ಅಲ್ಲಿಗೆ ಹೋಗಿ ಸೇರಿಕೊಂಡರು. ಆದರೆ ಅದರ ಸುತ್ತಮುತ್ತಲಿರುವ ಪ್ರದೇಶದಲ್ಲಿ ಕನ್ನಡಿಗರು ಇದ್ದಾರೆ. ಆದ್ದರಿಂದ ಬಳ್ಳಾರಿ ಮತ್ತು ಅದರ ಸುತ್ತುಮುತ್ತಲಿರುವ ಪ್ರದೇಶವನ್ನು ಆಂಧ್ರಕ್ಕೆ ಸೇರಿಸುವುದು ನ್ಯಾಯವಾದುದಲ್ಲ. ಮಿಶ್ರಾ ಅವರು ಆ ರೀತಿ ರಿಪೋರ್ಟ್ ಕೊಟ್ಟಾಗ್ಯೂ ಈ ಸಮಿತಿಯವರು ಈ ಪ್ರದೇಶವನ್ನು ಆಂಧ್ರಕ್ಕೆ ಸೇರಿಸಿರುವುದು. ಬಹಳ ಅನ್ಯಾಯವಾಗಿದೆ. ಈ ವಿಚಾರವಾಗಿ ಪ್ರಧಾನಿಗಳು, ಡಾ॥ ಖಟ್ಜುರವರು ಮತ್ತು ಮೌಲಾನಾ ಆಜಾದರೂ ಸಹ 'ಬಳ್ಳಾರಿ ಪ್ರಶ್ನೆ ಮುಗಿದುಹೋಯಿತು. ಇದನ್ನು ನಾವು ಪುನರ್ವಿಮರ್ಶೆ ಮಾಡುವುದಿಲ್ಲ. ಇದನ್ನು ಮೈಸೂರಿಗೆ ಸೇರಿಸಿಬಿಟ್ಟಿದ್ದೇವೆ.' ಎಂದು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಪ್ರಧಾನಿ ನೆಹರೂ ಅವರ ಆಪ್ತಕಾರ್ಯದರ್ಶಿಗಳು ಶ್ರೀ ಗಾಡಿ ಲಿಂಗಣ್ಣನವರಿಗೆ 'ಅದು closed chapter ಅದರ ಮೇಲೆ ಮಾತನಾಡುವುದಿಲ್ಲ' ಎಂದು ಕಾಗದ ಬರೆದಿದ್ದಾರೆ. ಪ್ರಧಾನ ಮಂತ್ರಿಗಳು ಈ ರೀತಿ ಹೇಳಿದ್ದರೂ ಈ ರೀತಿ ತೀರ್ಪು ಕೊಟ್ಟಿರುವುದು ಅನ್ಯಾಯವಾಗಿದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

(ಶ್ರೀ ಆರ್. ಅನಂತರಾಮ್.)

ಇಷ್ಟು ಕಡೆಗಳಲ್ಲಿ ಹೀಗೆ ತೀರ್ಮಾನ ಕೊಟ್ಟಾಗ್ಯೂ ಈ ತೀರ್ಮಾನಕ್ಕೆ ವಿರೋಧವಾಗಿ ಈ ಸಮಿತಿಯವರು ಒಂದು ಬೇರೆ ತೀರ್ಪು ಕೊಟ್ಟಿರುವುದು ಬಹಳ ಅನ್ಯಾಯ. ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಹೇಳಿದ ವಾಕ್ಯಗಳಿಗೆ ಮತ್ತು ಬರೆದ ಕಾಗದಗಳಿಗೆ ಬೆಲೆ ಇಲ್ಲವೇ ಎಂದು ನನಗನ್ನಿಸುತ್ತದೆ. ಒಂದು ಸಂದರ್ಭದಲ್ಲಿ ಪಾರ್ಲಿಮೆಂಟ್‌ನಲ್ಲಿ ಹೇಳಿದ್ದನ್ನು ಎರಡೇ ವರ್ಷಗಳಲ್ಲಿ ಬದಲಾವಣೆ ಮಾಡಬೇಕಾಗುತ್ತದೆ ಎಂದರೆ, ಅವರು ಹೇಳಿದ ಮಾತಿಗೆ sanctity ಇದೆಯೇ! ಇಂಡಿಯಾ ದೇಶದ ಪ್ರಧಾನ ಮಂತ್ರಿಗಳು ಹೇಳಿದ ಮಾತಿಗೆ ಬೆಲೆ ಇದೆಯೇ? ಅವರು ಹೇಳಿದ ಮಾತಿನ ಬೆಲೆಗೆ ಹೆಚ್ಚಿನ ಗಮನ ಕೊಡಬೇಕಾಗಿದೆಯೇ ಹೊರತು ಸಮಿತಿಯವರು ಬಳ್ಳಾರಿಯ ವಿಚಾರದಲ್ಲಿ ಹೇಳಿದ ಮಾತಿಗೆ ಬೆಲೆ ಕೊಡಬೇಕಾಗಿಲ್ಲ. ಬೇರೆ ಕಾರಣಕ್ಕೋಸ್ಕರ ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸಬೇಕು ಎಂದು ಹೇಳಿದ್ದಾರೆ. ಅದು ಬಹಳ ಅನ್ಯಾಯವಾದುದು ಏತಕ್ಕೆಂದರೆ ಇದರಿಂದ ಬಳ್ಳಾರಿಯ ಮೂರು ತಾಲ್ಲೂಕುಗಳಲ್ಲಿರುವ ಕನ್ನಡಿಗರಿಗೆ ಬಹಳ ವ್ಯಥೆಯುಂಟಾಗಿದೆ. ಮದರಾಸಿನಲ್ಲಿ ಕಷ್ಟಪಡುತ್ತಿದ್ದವರು ತಾತ್ಕಾಲಿಕವಾಗಿ 1½ ವರ್ಷಗಳಿಂದ ಮೈಸೂರಿಗೆ ಸೇರಿದ್ದಾಯಿತು. ಆದ್ದರಿಂದ ಈಗ 1½ ವರ್ಷಗಳಾದಮೇಲೆ ಇದನ್ನು ಕಿತ್ತು ಪುನಃ ಆಂಧ್ರಕ್ಕೆ ಸೇರಿಸುತ್ತಾ ಇರುವುದು ನ್ಯಾಯವಲ್ಲ. ಅವರೆಲ್ಲರೂ ವ್ಯಥೆಪಡುತ್ತಾರೆ. ಸುಖವಾಗಿರುವ ಜನಗಳನ್ನು ಪುನಃ ಕಷ್ಟಕ್ಕೆ ಹಾಕಿದಹಾಗಾಗುತ್ತದೆ ಎಂದು ಜನರು ಎಲ್ಲರೂ ಹೇಳುತ್ತಿದ್ದಾರೆ. ಇದು ನಿಜ ಬಳ್ಳಾರಿ ಮೂರು ತಾಲ್ಲೂಕುಗಳನ್ನು ಪುನಃ ಮೈಸೂರು ಸಂಸ್ಥಾನದಲ್ಲಿಯೇ ಇರುವಂತೆ ಮಾಡಬೇಕು. ಆದೋನಿ, ರಾಯದುರ್ಗ ಮತ್ತು ಆಲೂರಿನಲ್ಲಿ ಅರ್ಧ ಭಾಗದ ಜನ ಕನ್ನಡ ಮಾತನಾಡುವವರು ಇದ್ದಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ, ಗುಡಿಬಂಡೆ).—ಯಾವ statistics ?

ಶ್ರೀ ಆರ್. ಅನಂತರಾಮ್.—ಕನ್ನಡಿಗರು ಎಷ್ಟು ಜನ ಇದ್ದಾರೆ, ತೆಲುಗರು ಎಷ್ಟು ಜನ ಇದ್ದಾರೆ ಎಂಬುದನ್ನು ನೋಡಿದರೆ, ಅಲ್ಲಿಯ ಅರ್ಧ ಭಾಗ ಸುಮಾರು ಮೈಸೂರಿಗೆ ಬರಬೇಕಾದುದು ನ್ಯಾಯವಾದುದು. ಆದಕಾರಣ ಗಡಿಯನ್ನು ನಿರ್ಧರಿಸುವುದಕ್ಕೆ ಸಮಿತಿಯನ್ನು ಏರ್ಪಡಿಸಬೇಕು. ಈ ವರದಿಯಿಂದ ಬೇರೆ ಅನ್ಯಾಯಗಳಾಗಿವೆ. ಕಾಸರಗೋಡನ್ನು ತೆಗೆದುಕೊಂಡುಹೋಗಿ ಕೇರಳಕ್ಕೆ ಸೇರಿಸಿದ್ದಾರೆ. ಮಡಕಸಿರಾ, ಹೊಸೂರು ಬದರೆ, ತಲಕವಾಡಿದುರ್ಗ, ಸೋಲಾಪುರ ಮತ್ತು ಅಕ್ಕಪಕ್ಕದ ಕನ್ನಡ ಪ್ರದೇಶಗಳನ್ನು ಕರ್ಣಾಟಕಕ್ಕೆ ಸೇರಿಸಿಲ್ಲ. 100ಕ್ಕೆ 50 ಜನ ಕನ್ನಡ ಮಾತನಾಡುವವರು ಅಲ್ಲಿ ಇದ್ದಾರೆ. ಅವರನ್ನು ಕರ್ಣಾಟಕಕ್ಕೆ ಸೇರಿಸದೆ ಹೋದದ್ದು ಬಹಳ ಅನ್ಯಾಯವಾಗಿದೆ. ಗಡಿ ನಿರ್ಧಾರಮಾಡುವ ನಾಲ್ಕೋ ಐದೋ ಸಮಿತಿಗಳನ್ನು ಏರ್ಪಡಿಸಿ ಆದಷ್ಟು ಮಟ್ಟಿಗೆ ಈ ಬಗ್ಗೆ ನಿರ್ಧಾರ ತೆಗೆದುಕೊಂಡರೆ ಕನ್ನಡಿಗರಿಗೆ ನ್ಯಾಯ ದೊರಕುತ್ತದೆ ಎಂದು ಹೇಳುತ್ತೇನೆ.

ಇನ್ನು ಕರ್ಣಾಟಕ ಪ್ರಾಂತರಚನೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಇದು ಒಂದು ದೊಡ್ಡ ಇತಿಹಾಸ. ಯಾವರೀತಿ Indian National Congressಗೆ ಒಂದು ದೊಡ್ಡ ಇತಿಹಾಸವಿದೆಯೋ, ಅದು ಹೇಗೆ 60-70 ವರ್ಷಗಳ ಹಿಂದೆ ಹುಟ್ಟಿ ಹೋರಾಡಿ ಸ್ವಾತಂತ್ರ್ಯ ದೊರಕಿಸಿ ಕೊಟ್ಟಿತೋ ಹಾಗೆಯೇ ಕರ್ಣಾಟಕ ಏಕೀಕರಣ ವಿಚಾರದಲ್ಲೂ 1915ನೇ ಇಸವಿಯಿಂದಲೂ ದುಡಿಯುತ್ತಿದ್ದೇವೆ. 1915ನೇ ಇಸವಿಯಲ್ಲಿ ಮೈಸೂರಿನಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು. ಅದಕ್ಕೆ ನಮ್ಮ ಮಹಾರಾಜರು ಪೋಷಕರಾಗಿದ್ದಾರೆ. ಅದಕ್ಕೆ ಮಂತ್ರಿಗಳೂ ಮತ್ತು ಎಲ್ಲರೂ ಸದಸ್ಯರಾಗಿದ್ದಾರೆ. 1915ರಲ್ಲಿ ಇದರ ಉದ್ದೇಶ ಅಕ್ಕಪಕ್ಕದಲ್ಲಿ ಹರಿದು ಹಂಚಿ ಹೋಗಿರುವ ಕನ್ನಡ ದೇಶದ ಸಾಹಿತ್ಯ, ಮತ್ತು ಕಲೆಯ ಕೀರ್ತಿಯನ್ನು ಹೆಚ್ಚಿಸಬೇಕೆಂಬುದು. 1916ನೇ ಇಸವಿಯಲ್ಲಿ ಕರ್ಣಾಟಕ ಸಭೆಯು ಧಾರವಾಡದಲ್ಲಿ ಏಕೀಕರಣಕ್ಕಾಗಿ ಸ್ಥಾಪನೆಯಾಯಿತು. ಅದು ಸುಮಾರು 40 ವರ್ಷಗಳಿಂದ ಕೆಲಸ ಮಾಡುತ್ತಿದೆ. ಇದಕ್ಕೆ ಒಂದು ದೊಡ್ಡ ಇತಿಹಾಸವಿದೆ. 1915ರಿಂದ 1947ರವರೆಗೆ ಮೈಸೂರಿನವರು ಮತ್ತು ಹೊರಗಡೆಯವರು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಅದಕ್ಕೆ ಬೆಂಬಲ ಕೊಡುತ್ತಾ ಬಂದರು ಹಿಂದೆ ನಡೆದಂಥ ಸಮ್ಮೇಳನದಲ್ಲಿ ಮೈಸೂರಿನ ಎಷ್ಟೋ ಜನ ಮುಖಂಡರೂ ಸಹ ಇದಕ್ಕೆ ಪರವಾಗಿ ಮಾತನಾಡಿದ್ದಾರೆ. ಕರ್ಣಾಟಕ ಪ್ರಾಂತವಾಗಬೇಕು, ಹರಿದು ಹಂಚಿ ಹೋದ ಕರ್ಣಾಟಕ ದೇಶದವರು ಒಟ್ಟಿಗೆ ಸೇರಿಕೊಳ್ಳಬೇಕು ಎಂಬುದು ಎಲ್ಲರ ಅಭಿಲಾಷೆ. ಈ ಅಭಿಪ್ರಾಯ 1917ರವರೆಗೆ ಚೆನ್ನಾಗಿ ನಡೆದುಕೊಂಡು ಬಂದು 1947ರ ಮೇಲೆ ಸ್ವಲ್ಪ ಭಿನ್ನಾಭಿಪ್ರಾಯಬಂತು. ಕೊಡಗು ಪ್ರಾಂತವಿದೆ, ಇಲ್ಲಿ 1947ರವರೆಗೂ ಗಣ್ಯ ವ್ಯಕ್ತಿಗಳೂ ಮತ್ತು ಮಂತ್ರಿಗಳೂ ಕರ್ಣಾಟಕಪ್ರಾಂತ ರಚನೆಯಾಗಬೇಕು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳೂ ಠರಾವು move ಮಾಡಿ ಕರ್ಣಾಟಕದಲ್ಲಿ ಸೇರಿಕೊಂಡು ಸುಖವಾಗಿರಬೇಕು ಎಂದು ಹೇಳಿದ್ದಾರೆ. ಆದರೆ 1947ನೇ ಇಸವಿ ಆದಮೇಲೆ ಮನಸ್ಸನ್ನು ಬದಲಾವಣೆ ಮಾಡಿದ್ದಾರೆ. ಅದು ಏನು ಎನ್ನಿಸುತ್ತದೆ ಎಂದರೆ ಅಧಿಕಾರಕ್ಕೆ ಬರುವುದಕ್ಕೆ ಹಿಂದೆ ಮತ್ತು ಸ್ವಾತಂತ್ರ್ಯ ಬರುವುದಕ್ಕೆ ಹಿಂದೆ ಕರ್ಣಾಟಕ ಪ್ರಾಂತವಾಗಬೇಕು ಎಂದು ಹೇಳುತ್ತಿದ್ದವರು ಸ್ವಾತಂತ್ರ್ಯ ಬಂದ ಮೇಲೆ ಮನಸ್ಸನ್ನು ಬದಲಾವಣೆ ಮಾಡಿದ್ದಾರೆ ಎಂದು ಹೇಳುತ್ತೇನೆ. ಹೀಗೆ ಮೈಸೂರಿನಲ್ಲಿಯೂ ಸಹ ಸ್ವಾತಂತ್ರ್ಯ ಬಂದಮೇಲೆ ಸ್ವಲ್ಪ ಮನಸ್ಸು ಬದಲಾವಣೆಯಾಗಿರಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಆಡಳಿತ ಅನುಭವ ಬಂದಮೇಲೆ.

ಶ್ರೀ ಆರ್. ಅನಂತರಾಮ್.—ಜನರಿಗೂ ಮನಸ್ಸು ಸ್ವಲ್ಪ ಬದಲಾವಣೆಯಾಗಿರಬಹುದು. ಕರ್ಣಾಟಕ ಏಕೀಕರಣ ಬೇಕಿಲ್ಲ. ನಮ್ಮಷ್ಟಕ್ಕೆ ನಾವು ಇದ್ದರೆ ಸಾಕು, ಎರಡು ಕರ್ಣಾಟಕವಾಗಲಿ, ಒಂದು ಕರ್ಣಾಟಕಬೇಡ, ಮೈಸೂರು ಮೈಸೂರಾಗಿಯೇ ಇರಲಿ. ಹೊರಗಡೆಯವರು ಬೇರೆ ಪ್ರಾಂತ್ಯಮಾಡಿ ಸುಖವಾಗಿರಲಿ ಎಂದು ಹೇಳುತ್ತಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೆ ಈ ಮಾತನ್ನು ಹೇಳುತ್ತಿದ್ದಾರೆಯೇ ಹೊರತು ಹಿಂದೆ ಈ ಮಾತುಗಳನ್ನು ಯಾರೂ ಹೇಳಲಿಲ್ಲ. 1946ರಲ್ಲಿ ದಾವಣಗೆರೆ ಸಮ್ಮೇಳನ ನಡೆಯಿತು, ದಾವಣಗೆರೆ ಸಮ್ಮೇಳನ ನಡೆದಾಗ ಮಾನ್ಯ ಮುಖಂಡರಾದಂಥ ಶ್ರೀ ದಾಸಪ್ಪನವರು ಮತ್ತು ಅನೇಕ ಕಾಂಗ್ರೆಸ್ ಮುಂದಾಳುಗಳೂ, ನಮ್ಮ ಮುಖ್ಯ ಮಂತ್ರಿಗಳೂ ಎಲ್ಲರೂ ಮಾತನಾಡಿ ಕನ್ನಡ ಪ್ರಾಂತ ರಚನೆಯಾಗುವುದಕ್ಕೆ ಸಹಕಾರ, ಬೆಂಬಲ ಕೊಟ್ಟರು. ಇದಾದ ಮೇಲೆ 1948ರಲ್ಲಿ ಬೆಂಗಳೂರು ನಗರದಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನ ಸುಭಾಷ್ ನಗರದಲ್ಲಿ ನಡೆಯಿತು, ಆಗ ನಾನು ಕಾರ್ಯದರ್ಶಿಯಾಗಿದ್ದೆ. ಮಳೆಯಲ್ಲಿ ನಿಂತುಕೊಂಡು

ಕರ್ಣಾಟಕ ಏಕೀಕರಣವಾಗಬೇಕು ಎಂದು ಠರಾವು ಮಾಡಿದೆವು. ಈಗಲೂ ನನಗೆ ಜ್ಞಾಪಕವಿದೆ. ಆಮೇಲೆ ಬೀರೂರು ಅಧಿವೇಶನಕ್ಕೆ ನಾನೂ ಸಹ ಹೋಗಿದ್ದೆ. ಅನೇಕ ಸ್ನೇಹಿತರು ಹೋಗಿದ್ದರು. ಬೀರೂರು M. P. C. C. ಅಧಿವೇಶನದಲ್ಲಿ ಠರಾವು ಪಾಸ್ ಮಾಡಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚನ್ನಯ್ಯನವರು ಶ್ರೀ ಬಂದೀಗೌಡರು, ಶ್ರೀ ನಾರಾಯಣಗೌಡರು, ಶ್ರೀ ಸಿದ್ದಲಿಂಗಯ್ಯನವರನ್ನು ಒಳಗೊಂಡ ಒಂದು ಸಮಿತಿಯನ್ನು ಏರ್ಪಡಿಸಿ ಕರ್ಣಾಟಕ ಪ್ರಾಂತ ರಚನೆ ಮಾಡುವುದರಿಂದ ಆಗುವ ಸಾಧಕ ಬಾಧಕಗಳೇನೆಂಬುವುದನ್ನು ಪರಿಶೀಲಿಸಿ ಒಂದು comprehensive ರಿಪೋರ್ಟ್ ಕೊಡಿ ಎಂದು ಹೇಳಿದರು. ಅವರು ಕರ್ಣಾಟಕವೆಲ್ಲಾ ಸಂಚಾರ ಮಾಡಿಕೊಂಡು ಬಂದರು.

ಶ್ರೀ ಬಿ. ಎಂ. ಶೀನಪ್ಪ (ಕಬ್ಬೂರ್ಪೇಟೆ).—ಈಗ ಅವರೆಲ್ಲರೂ ವಿರೋಧವಾಗಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ಆರ್. ಅನಂತರಾಮನ್.—ಹೌದು, ಪರವಾಗಿದ್ದವರು ಎರಡು ಮೂರು ವರ್ಷಗಳಲ್ಲಿ ಏಕೆ ವಿರೋಧವಾಗಿದ್ದಾರೋ ಗೊತ್ತಿಲ್ಲ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಆಗ ಬ್ರಿಟಿಷರು ರಾಜ್ಯವಾಳುತ್ತಿದ್ದವರು ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಆರ್. ಅನಂತರಾಮನ್.—ಬೀರೂರು ಅಧಿವೇಶನವಾಗಿ ಏಳು ವರ್ಷಗಳು ಆಗಿಲ್ಲ. ಆರು ಜನ ದೊಡ್ಡ ವ್ಯಕ್ತಿಗಳು ಕರ್ಣಾಟಕದಲ್ಲೆಲ್ಲಾ ಸಂಚಾರಮಾಡಿ ಶ್ರೀ ವಲ್ಲಭಭಾಯಿ ಪಟೇಲ್ ಮೊದಲಾದ ದೊಡ್ಡ ದೊಡ್ಡ ವ್ಯಕ್ತಿಗಳೊಡನೆ ಮಾತುಕತೆ ನಡೆಸಿ ಕರ್ಣಾಟಕ ಪ್ರಾಂತ ರಚನೆಯಾಗಬೇಕು ಎಂದು ರಿಪೋರ್ಟ್ ಕೊಟ್ಟಿದ್ದಾರೆ. ರಿಪೋರ್ಟ್ ಕೊಟ್ಟಮೇಲೆ ಅದರಂತೆ Congress Working Committee ಒಂದು ಠರಾವು pass ಮಾಡಿದರು. ಮೈಸೂರು ಪ್ರದೇಶ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಇದರ ಬಗ್ಗೆ ಒಂದು ಠರಾವನ್ನು ಪಾಸ್ ಮಾಡಿದ್ದಾರೆ. 1947ರಲ್ಲಿ ನಮ್ಮ Constituent Assemblyಯಲ್ಲಿ ಶ್ರೀ ಭೀಮಪ್ಪ ನಾಯಕ್‌ರವರು "ಅಕ್ಕಪಕ್ಕದ ದೇಶಗಳಲ್ಲಿರುವ ಕನ್ನಡಿಗರನ್ನು ಸೇರಿಸಿ ಕರ್ಣಾಟಕ ಪ್ರಾಂತರಚನೆ ಮಾಡಬೇಕು" ಎಂದು ಒಂದು ಠರಾವನ್ನು move ಮಾಡಿದ್ದಾರೆ.

4 P.M.

ಜನರ ಒಪ್ಪಿಗೆಯನ್ನು ತೆಗೆದುಕೊಂಡು ಅವರು ರಾಜ್ಯಾಂಗ ಸಭೆಯಲ್ಲಿ ಠರಾವು ಮಾಡಿದರು. ಆದರೆ ಈಚೆಗೆ ಎರಡು ಮೂರು ವರ್ಷಗಳಿಂದೀಚೆಗೆ ಕೆಲವರು ಮಹನೀಯರು ಎರಡಾಗಬೇಕೆಂದು ಹೇಳುತ್ತಿದ್ದಾರೆ. ಈಗ ಹೀಗೆ ಹೇಳುತ್ತಿರುವ ಮಹನೀಯರು ಆಗ ಏಕೆ ಹೀಗೆ ಹೇಳಲಿಲ್ಲ ? 1915ರಿಂದ ಇದುವರೆಗೆ ನೂರಾರು ಸಮ್ಮೇಳನಗಳಾಗಿವೆ. ಇದಕ್ಕೆ ವಿರೋಧವಾಗಿ ಈ ಮಹನೀಯರು ಒಂದು ಸಮ್ಮೇಳನವನ್ನು ನಡೆಸಿದ್ದರೂ ಒಪ್ಪಬಹುದಾಗಿತ್ತು. ಆದರೆ ಒಂದು ಕೂಡ ಇಲ್ಲ. ಕರ್ಣಾಟಕ ಪ್ರಾಂತ ರಚನೆ ಬೇಕಾಗಿಲ್ಲವೆಂದು ಒಂದು ಸಮ್ಮೇಳನವನ್ನೂ ಮಾಡಿಲ್ಲ.

*(Interruption)*

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾವ ಒಂದು ಸಮ್ಮೇಳನದಲ್ಲಾದರೂ unconditional ಆಗಿ ಕರ್ಣಾಟಕವಾಗಬೇಕೆಂದು ನಿರ್ಣಯ ಮಾಡಿರುವುದನ್ನು ತೋರಿಸಿದರೆ ಒಪ್ಪುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—1949ರಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಕ್ಯಾಬಿನೆಟ್‌ನಲ್ಲಿ ನಿರ್ಣಯವಾಗಿದೆ.

ಶ್ರೀ ಶಿವನಂಜೇಗೌಡ.—ಇಮಾಂ ಸಾಹೇಬರಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಎನ್ನುವಂತೆ ಕರ್ಣಾಟಕದ ವಿಷಯ ಅವರಿಗೇಕೆ ? (ನಗು !)

ಶ್ರೀ ಆರ್. ಅನಂತರಾಮನ್.—ಯಾವ ಚಳುವಳಿಗೇ ಆಗಲಿ ಅದಕ್ಕೆ ಪ್ರಾಮುಖ್ಯತೆ ಬರಬೇಕಾದರೆ, 40-50 ವರ್ಷ ದಾಟಿದಿರಬೇಕು. ಹೀಗೆ ಒಂದು ಇತಿಹಾಸ ವಿರತಕ್ಕ ಈ ಚಳುವಳಿ ಎಷ್ಟುಮಟ್ಟಿಗೆ ಮುಂದುವರಿದುಕೊಂಡು ಬಂದಿದೆಯೆಂದು ನೋಡಬೇಕು. ಕರ್ಣಾಟಕ ಪ್ರಾಂತವಾಗಬೇಕೆಂಬುದು ಬಹುಕಾಲದ ಚಳುವಳಿ. ನಮ್ಮ ಕಾಂಗ್ರೆಸ್ ಮುಖಂಡರೂ, ಸ್ನೇಹಿತರೂ ಆಗ ಏಕೆ ಇದನ್ನು ವಿರೋಧ ಮಾಡಲಿಲ್ಲ ? ಕರ್ಣಾಟಕ ವಿರೋಧ ಸಮ್ಮೇಳನ ಎಂದು ಮಾಡಿ, ಠರಾವು ಮಾಡಿ, ನಾವು ಮೈಸೂರಿನವರಾಗಿದ್ದೇವೆ. ಮುಂದೆಯೂ ಹೀಗೆಯೇ ಇರುತ್ತೇವೆ, ನಾವು ಬೇರೆ ಪ್ರಾಂತದೊಡನೆ ಸೇರುವುದಿಲ್ಲ ಎಂದು ಏಕೆ ಮಾಡಲಿಲ್ಲ ? ಈ ದಿವಸ ಈ ಚಳುವಳಿ ಹೂಡಿದ್ದಾರೆ. ಇದಕ್ಕೆ ಪ್ರತಿಫಲ ಬರಬೇಕಾದರೆ ಇನ್ನೂ 40-50 ವರ್ಷ ಬೇಕು. ಯಾವುದಕ್ಕೂ ಫಲ ಬರಬೇಕಾದರೆ ಕಾಲ ಅಥವಾ ವೇಳೆ ಬೇಕು. 40-50 ವರ್ಷಗಳಿಂದ ಬೆಳೆದು ನಡೆದುಕೊಂಡು ಬಂದ ಚಳುವಳಿಗೆ ಯಾವ ವಿರೋಧವೂ ಬಂದಿಲ್ಲ. ಇಷ್ಟು ವರ್ಷ ಕಾಲ ನಡೆದ ಚಳುವಳಿಯಲ್ಲಿ ಈ ಯಾವ ಸ್ನೇಹಿತರೂ ವಿರೋಧವಾಗಿ ಮಾತನಾಡಲಿಲ್ಲ. ಈಗ ಇದು ಆಗುವುದಿಲ್ಲ, ಮೈಸೂರಿನವರು ಇದ್ದ ಹಾಗೆಯೇ ಇರುತ್ತೇವೆ. ಎಂದು ಹೇಳಿದರೆ ಹೇಗೆ ? ರಾಜ್ಯಗಳ ಪುನರ್ವಿಂಗಡಣೆಯ ಸಮಿತಿಯನ್ನು ನೇಮಕ ಮಾಡಿದಾಗ ಯಾರೂ ಹಾಗೆ ಹೇಳಲಿಲ್ಲ. ಆಮೇಲೆ ಅವರು ಬೆಂಗಳೂರಿಗೆ ಬಂದು ಸಾಕ್ಷ್ಯಗಳನ್ನು ತೆಗೆದುಕೊಳ್ಳುವಾಗ ಹೆಚ್ಚು ಜನರು ಹೇಳಲಿಲ್ಲ. ಅವರು ಬಂದಿದ್ದಾಗ ಇಷ್ಟು ಚಳುವಳಿ ಮಾಡಿ ಮೈಸೂರು ಮೈಸೂರಾಗಿಯೇ ಉಳಿಯಲಿ ಎಂದು ತೋರಿಸಿದ್ದಿದ್ದರೆ ಒಪ್ಪಿಕೊಳ್ಳುತ್ತಿದ್ದರೋ ಏನೋ ? ಆದರೆ ಹಾಗೆ ಮಾಡಲಿಲ್ಲ. ಆದರೆ ಈ ವರದಿ ಪ್ರಕಟವಾದ ಮೇಲೆ ಹೀಗೆ ಹೇಳುವುದು ಸರಿಯಲ್ಲ. ಹಿಂದೆ ಒಂದಲ್ಲ ಒಂದು ರೀತಿಯಲ್ಲಿ ಇದನ್ನು ಒಪ್ಪಿದ್ದಾರೆ. ಶ್ರೀಮಾನ್ ಇಮಾಂರವರು ಹೇಳಿದ ಹಾಗೆ 11-11-1949ರಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಮಂತ್ರಿ ಮಂಡಲದ ನಿರ್ಣಯ ಮಾಡಿದ್ದಾರೆ. ಮಾನ್ಯ ವಲ್ಲಭಭಾಯ್ ಪಟೇಲ್‌ರವರು ನಿಮ್ಮ ಅಭಿಪ್ರಾಯವೇನೆಂದು ಕೇಳಿದಾಗ ಒಮ್ಮತದಿಂದ ಅಭಿಪ್ರಾಯ ಕೊಟ್ಟಿದ್ದಾರೆ. ಆಗ ಜನರ ಅಭಿಪ್ರಾಯ ತಿಳಿದೇ ಕಳುಹಿಸಿದರು. ಹೀಗೆ 40-50 ವರ್ಷಗಳಿಂದ ಈ ಚಳುವಳಿ ಪ್ರವಾಹದಂತೆ ನಡೆದಿದೆ. ಇದಕ್ಕೆ ಈಗ ವಿರೋಧ ಮಾಡುವುದು ಸರಿಯಲ್ಲ. ಈ ವಿರೋಧ ತಾತ್ಕಾಲಿಕವಾದುದೆಂದು ನಾನು ತಿಳಿದುಕೊಂಡಿದ್ದೇನೆ. ದೊಡ್ಡ ಪ್ರವಾಹವನ್ನು ತಡೆಯುವುದಕ್ಕೆ ಹೋದರೆ, ಕೊಚ್ಚಿಕೊಂಡು ಹೋಗುತ್ತೇವೆ. 1946ನೆಯ ಇಸವಿಯಲ್ಲಿ ದಾವಣಗೆರೆ ಸಮ್ಮೇಳನದಲ್ಲಿ, ಬೆಂಗಳೂರಿನ ಅಧಿವೇಶನದಲ್ಲಿ, 1948ರಲ್ಲಿ ಬೀರೂರಿನ ಅಧಿವೇಶನದಲ್ಲಿ, 1949ರಲ್ಲಿ ರಾಜ್ಯಾಂಗ ರಚನಾ ಸಭೆಯಲ್ಲಿ ಠರಾವಾಗಿದೆ. 1949ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಠರಾವು ಮಾಡಿದ್ದಾರೆ. ಇಷ್ಟೂ ಆದಾಗ ಈಗ ವಿರೋಧಿಸುವ ಸ್ನೇಹಿತರು ಪ್ರತಿಭಟನೆ ತೋರಿಸಬೇಕಾಗಿತ್ತು. ಆಗೆಲ್ಲಾ ಸುಮ್ಮನಿದ್ದರು. ಒಪ್ಪಿಕೊಂಡರು ಎಂದು ತಿಳಿದು ಠರಾವು ಅಂಗೀಕೃತವಾಯಿತು. ಮುಂದಿನ

(ಶ್ರೀ ಆರ್. ಅನಂತರಾಮನ್.)

ಕಾರ್ಯಕ್ರಮ ನಡೆಸಿಕೊಂಡು ಬಂದರು. ಈಗ ಅವರು ವಿರೋಧ ಮಾಡುವುದು ಚೆನ್ನಾಗಿಲ್ಲವೆಂದು ನನ್ನ ಅಭಿಪ್ರಾಯ. ಈಗ ಕೆಲವರು ಸ್ನೇಹಿತರು ಎರಡು ಕರ್ಣಾಟಕವಾಗಲೆಂದು ಹೇಳುತ್ತಾರೆ. ಕೆಲವರು ದಕ್ಷಿಣ ಕನ್ನಡ, ಕೊಡಗು, ಮಡಕಶಿರ, ಕೊಳ್ಳೇಗಾಲ ಮುಂತಾದ ಆರು ಜಿಲ್ಲೆಗಳನ್ನು ಮೈಸೂರಿಗೆ ಸೇರಿಸಿ ಒಂದು ಸಂಸ್ಥಾನ ಮಾಡಿ, ಇನ್ನಾರು ಜಿಲ್ಲೆಗಳು ನಮಗೆ ಬೇಡ ಎಂದು ಹೇಳುವುದು ನ್ಯಾಯವಲ್ಲ. ಹೀಗೆ ಮಾಡಿದರೆ ಬೇರೆ ರಾಜಧಾನಿಯನ್ನು ಕಟ್ಟುವುದಕ್ಕಾಗುವುದಿಲ್ಲ. ಕಟ್ಟಬೇಕೆಂದರೆ ಹತ್ತಾರು ಲಕ್ಷ ರೂಪಾಯಿ ಖರ್ಚಾಗುತ್ತದೆ. ಐದಾರು ಜಿಲ್ಲೆಗಳು viable unit ಆಗುತ್ತದೆಯೇ ? ಇಲ್ಲ. ಬೇರೆ ಆಡಳಿತ ಯಂತ್ರವನ್ನು ಕಟ್ಟಬೇಕಾದರೆ ಕಷ್ಟವಾಗುತ್ತದೆ. ಮದರಾಸಿನಲ್ಲಿ ಒಟ್ಟಿಗೆ ಇದ್ದು ಆಂಧ್ರ ಪ್ರಾಂತ ಮಾಡಿದಾಗ ಎಷ್ಟೋ ಕಷ್ಟವಾಯಿತು. ಬೆಂಗಳೂರಿನಲ್ಲಿ ಹೈಕೋರ್ಟಿದೆ, ಕೇಂದ್ರ ಕಚೇರಿ ಇದೆ. ಬೇರೆ ಅನುಕೂಲಗಳಿವೆ. ಹೀಗಿರುವಾಗ ಆ ಆರು ಜಿಲ್ಲೆಗಳನ್ನೂ ಒಟ್ಟಿಗೆ ಸೇರಿಸುವುದು ಬಹಳ ಸುಲಭ. ಇದು ಬಿಟ್ಟು ಚಿಕ್ಕ ಆರು ಜಿಲ್ಲೆಗಳಿಗೆ ಒಂದು ರಾಜಧಾನಿ ಹೈಕೋರ್ಟು ಮುಂತಾದುವನ್ನು ಏರ್ಪಾಡು ಮಾಡಬೇಕಾದರೆ, ಜನರ ಕಂದಾಯವೆಲ್ಲಾ ಅದಕ್ಕೆ ಖರ್ಚಾಗುತ್ತದೆ. ಪ್ರತ್ಯೇಕವಾಗಿ ಒಂದು ಹೈಕೋರ್ಟು, ಮಂತ್ರಿಮಂಡಲ, ಚೀಫ್ ಸೆಕ್ರೆಟರಿ, ಇತರ ಸೆಕ್ರೆಟರಿಗಳು ಇವುಗಳಿಗೆಲ್ಲಾ ರೈತರು ಕೊಡತಕ್ಕ ಕಂದಾಯ ಖರ್ಚಾಗುತ್ತದೆ. ಅವರಿಗೆ ಆವಶ್ಯಕವಾದ ಕಾರುಗಳು, ಪ್ರಯಾಣಭತ್ಯ ಇದಕ್ಕೆಲ್ಲಾ ಹಣ ವ್ಯಯವಾಗತ್ತದೆ. ಆದುದರಿಂದ ಆರು ಜಿಲ್ಲೆಗಳಿಗಾಗಿ ಒಂದು ರಾಜ್ಯವನ್ನು ಮಾಡುವುದು ಕಷ್ಟ. ಈಗ ಮೈಸೂರಿನ ಆರು ಜಿಲ್ಲೆಗಳನ್ನೇ ಬೇರೆ ತೆಗೆದು ಒಂದು ಸಂಸ್ಥಾನ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಎಲ್ಲವನ್ನೂ ಒಟ್ಟು ಸೇರಿಸಿ ಒಂದು ರಾಜ್ಯ ಮಾಡುವುದು ಒಳ್ಳೆಯದು. ಅವರು ಹಿಂದುಳಿದಿದ್ದಾರೆಂದು ಕಲವರು ಹೇಳುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಒಂದು ವೇಳೆ ಹೀಗಿದ್ದರೂ ನಮ್ಮ ಪ್ರಧಾನಿಗಳಾದ ಪಂಡಿತ ನೆಹರೂ ಅವರಿಗೆ ತಿಳಿಸಿ ಕೇಳಿದರೆ, ಅವರು ಸಹಾಯ ಮಾಡುತ್ತಾರೆ. ನಾಲ್ಕೈದು ಕೋಟಿ ರೂಪಾಯಿ ಕೊಡಿ, ಅವರಿಗಾಗಿ ಖರ್ಚು ಮಾಡುತ್ತೇವೆ, ಅವರೂ ಮುಂದುವರಿಯಲಿ ಎಂದು ಕೇಳುವುದು ನ್ಯಾಯ. ಅದನ್ನು ಬಿಟ್ಟು ಆರು ಡಿಸ್ಟ್ರಿಕ್ಟುಗಳಿಗೇ ಪ್ರತ್ಯೇಕ ಪ್ರಾಂತ ಮಾಡಿ ಎಂದು ಕೇಳುವುದು ಸರಿಯಲ್ಲ. ಮಹಾರಾಷ್ಟ್ರ ಪ್ರಾಂತ ಮಾಡಿ, ವಿಶಾಲಾಂಧ್ರ ಮಾಡಿ ಎಂದು ಆ ಪ್ರಾಂತದವರು ಕೇಳುತ್ತಿರುವಾಗ ನಾವು ವಿಶಾಲ ಕರ್ಣಾಟಕ ಬೇಡವೆಂದು ಹೇಳುವುದು ಸರಿಯಲ್ಲ. ಮುಖ್ಯಮಂತ್ರಿಗಳು ಹೇಳಿದಹಾಗೆ ಹೆಸರು, ರಾಜಧಾನಿ ಇವುಗಳನ್ನು ನಿರ್ಧರಿಸುವುದು ನಮ್ಮ ಕೈಯಲ್ಲಿದೆ. ಅದನ್ನು ನಾವು ಯೋಚನೆ ಮಾಡಬಹುದು. ನಮ್ಮ ಮಹಾರಾಜರನ್ನೇ ಗವರ್ನರ್ ಆಗಿ ಮಾಡುವುದು ಮುಂತಾದ ಇನ್ನೂ ಕೆಲವು ವಿಚಾರಗಳು ನಾವು ಕುಳಿತು ಯೋಚನೆ ಮಾಡಬೇಕಾದ ವಿಚಾರಗಳು. ನಾವೇನೂ ಏನು ಒಮ್ಮತಕ್ಕೆ ಬರುತ್ತೇವೊ ಅದಕ್ಕೆ ಒಪ್ಪಿಗೆ ಬರುತ್ತದೆ. ಆದರೆ ಬೇರೆ ಬೇರೆ ಕರ್ಣಾಟಕ ಪ್ರಾಂತಗಳನ್ನು ಮಾಡುವುದು ಬೇಡ, ಇದರಿಂದ ಹೆಚ್ಚು ಖರ್ಚಾಗುತ್ತದೆ. ಎಲ್ಲವನ್ನೂ ಸೇರಿಸಿ ಒಂದು ಮಾಡಬೇಕು. ಹಿಂದೆ ನಮ್ಮ ರಾಜ್ಯದಲ್ಲೇ ಇದ್ದವರು ಕಾರಣಾಂತರಗಳಿಂದ ಹೊರಗೆ ಹೋಗಿದ್ದಾರೆ. ಬೇರೆ ರಾಜ್ಯಗಳಲ್ಲಿ ಸೇರಿ ಬಹಳ ಕಷ್ಟದಲ್ಲಿದ್ದಾರೆ. ಅವರನ್ನು ನೋಡುವವರು ಕೇಳುವವರೇ ಇಲ್ಲ. ಅಲ್ಲಿ ನೈಸರ್ಗಿಕ ಸಂಪತ್ತಿದೆ. ಖನಿಜಗಳಿವೆ, ನದಿಗಳಿವೆ, ಅರಣ್ಯಸಂಪತ್ತಿದೆ ; ಅವರು ನಮ್ಮ ಅಣ್ಣತಮ್ಮಂದಿರೊಡನೆ ಸೇರುತ್ತವೆ. ಸೇರಿಸಿಕೊಳ್ಳಿ ಎಂದರೆ, ಯಾವ ಮನುಷ್ಯನೇ ಆಗಲಿ ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಮೈಸೂರಿನವರಾದ ನಾವು ಅತಿಥಿ ಸತ್ಕಾರದಲ್ಲಿ ಹೆಸರಾದವರು, ಅಣ್ಣ ತಮ್ಮಂದಿರು ಬಂದರೆ, ಸೇರಿಸುವುದಿಲ್ಲವೆನ್ನುವುದು ಸರಿಯೆ ? ಅವರು ಬಂದರೂ ನಮ್ಮ ಮನೆಮಠಗಳನ್ನೇನೂ ಹೊತ್ತುಕೊಂಡು ಹೋಗುವುದಿಲ್ಲ. ಆಸ್ತಿಪಾಸ್ತಿಗಳನ್ನೇನೂ ಹೊತ್ತುಕೊಂಡು ಹೋಗುವುದಿಲ್ಲ. ನೂರಾರು ವರ್ಷದಿಂದ ಒಂದು ಚಿಕ್ಕ ಮನೆಯಲ್ಲಿದ್ದರೆ, ಒಂದು ರೀತಿಯ attachment ಬರುತ್ತದೆ, ನಿಜ. ಶ್ರೀ ಇಮಾಂಸಾಹೇಬರು ಹೇಳುತ್ತಿದ್ದರು, ದೊಡ್ಡಮನೆ ಕಟ್ಟಿಸಿ ಹೋಗು ಎಂದರೂ ಹೋಗುವುದಿಲ್ಲ, ಎಂದು.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ಹೋಗಿದ್ದೇನೆ, ಹೊರಗೆ ಬರುವುದಕ್ಕೆ ಮನಸ್ಸು ಬರುವುದಿಲ್ಲ. (ನಗು !)

ಶ್ರೀ ಆರ್. ಅನಂತರಾಮನ್.—ಹಾಗೆಯೇ ನಮಗೂ ಆಗುತ್ತದೆ. ಈಗ ಏನೋ ಹೆದರಿಕೆ. ಏನೂ ಹೆದರಬೇಕಾಗಿಲ್ಲ. ದೊಡ್ಡ ಮನೆಗೆ ಹೋಗೋಣ, ಅಣ್ಣ ತಮ್ಮಂದಿರನ್ನು ಸ್ವಾಗತಿಸೋಣ. ಅವರೊಡನೆ ಸೇರೋಣ.

**Sri B. V. NARAYANA REDDY.**—I would like to have the following confirmed by the Hon'ble Minister. The Hon'ble Member alleged that the previous Cabinet unanimously agreed for a Karnataka. I want confirmation from the Minister.

**Sri A. BHEEMAPPA NAIK.**—There was a Cabinet decision.

**Sri B. V. NARAYANA REDDY.**—I want confirmation from the Minister.

**Sri H. M. CHANNABASAPPA** (Minister for Industries).—There was a resolution on 11-11-1949. (*Interruption*)

Not a resolution, but Cabinet decision.

**Sri H. SIDDAVEERAPPA** (Minister for Home).—Sir, I rise to speak a few words on this all important subject which is engaging the attention of the whole State. Naturally, when a question like this which does not always afford itself for a decision or a discussion has been presented to us, many in this State honestly and sincerely hold two different views. As a lawyer, Sir, I know, when I argue a case, there are always two sides that could be presented. Every coin has two faces. Likewise it is natural to have two views on any issue. In fact, there ought to be two views when an important problem like this is taken up for consideration. The S. R. C. also have argued the pros and

cons of all issues involved and taking a cumulative effect they have arrived at certain decisions. Therefore, if in this House any Hon'ble member expresses an opinion which does not fit in with the opinion of some other member, there is no reason to think amiss; there is no reason to think that my opinion alone is superior to the opinion of others.

I feel, Sir, today we are living in a disturbed atmosphere. I hope it will be temporary and a passing phase. This, I am prompted to say for two reasons; after all we have to realise that the formation of a new State is the sovereign right of the Parliament: we, under the Constitution, have a right to express our opinion. There is no doubt about it. Under article 3 of the Constitution, when the question came up before the Constituent Assembly, it was suggested that for the word "consultation", "consent" may be introduced. I have the Proceedings of the Constituent Assembly before me. I was privileged to be present in that House when article 3 was discussed. After a careful examination, the elders who framed the Constitution came to the conclusion that, in the larger interests of this country, it would be better that Parliament, which is the only sovereign authority representing all parts of India from Cape Comorin to Himalayas should have that sovereign right. I would like to implore that there should be no room for conside ation that only two major communities in the State are vitally interested in this problem.

Sir, it pains me to see that there is so much of avoidable heat, presumably because a reference to the two major communities is made in the S R. C. Report. After all, both these communities, not only after the present Mysore State was formed but even earlier, have lived like brothers, have worked like brothers. They have identity of interests and there was at no time any violent difference of opinion. Tomorrow, in the new shape of things to come, no community—whether Mysore remains as it is or whether it is enlarged into a different area—would, if I may say so, ever think of dominating because of its numerical strength. I feel on the other hand, greater emphasis will be on the economic aspect and class interest and not on communal interest. So far as these two communities are concerned, majority of them, if I may say so, more than 80 per cent of them are agriculturists, whether here or in the other part of Karnataka which is proposed to be added on. So far as the agriculturist is concerned, he has to improve his economic condition. The rural economy has to be improved if he has to play a larger and more important part in the history of this country. That is a problem on which there is no difference of outlook between these two major communities. After all, if we adopt that test as the standard, I believe, there is no room to think there is any conflict of interests between these two major communities. I therefore feel, Sir, we should examine it objectively; let us find out whether the recommendation of the S.R.C. requires to be accepted. But I want to make one point very clear? whether in the all India set up if the Parliament gives a decision one way or the other, it would be necessary that each one of us has to work in amity and in collaboration. I personally feel, Sir, taking that as the test we have to examine this report.

Before I proceed further, I would like to make a reference to the Chief Minister and the Leader of the House. I know what a lot of mental agony he had to undergo during this period. I believe the speech that he has made is a historic speech. If the future Karnataka State is formed, the part played by him will have to be written in letters of gold. A very difficult and complicated question has been dexterously handled by him. There could possibly be no room for anybody to think that he has overdone his part. The Leader of the Opposition also has made a very valuable contribution to this discussion. He deserves our warmest congratulations.

The next point I would like to urge is this: here is a proposal before us for the expansion of Mysore State, or for adding some more territories to Mysore

(SRI H. SIDDAVEERAPPA.)

State, as far as I am concerned, I am not enamoured of the name. I quite agree that the name "Mysore" is more soothing to my ear rather than the name "Karnataka" and if the name "Mysore" is adopted, I feel there could possibly be no objection.

Regarding the institution of Rajpramukh, I feel that the present Rajpramukh enjoys the highest confidence and the respect of everyone in Mysore State. Whether the institution of Rajapramukh is to be continued or not is certainly not in our hands. That is a matter which would have to be settled on an all-India level. But I personally feel that the services of a person of his culture, learning and training, should not be allowed to go unutilised in the larger interests of the country. In what shape or form, I am not in a position to say. But, I am sure, he will be able to render greater service to the country as a whole and his services will be still with us. I therefore feel that so far as the Rajpramukh is concerned, it is the unanimous opinion of everybody in the State that his interests within the limits possible should not be allowed to be jeopardised in any way.

I next refer to some of the points raised by my esteemed colleague Sri A. G. Ramachandra Rao and others. The one important point Sri A. G. Ramachandra Rao raised was : when did Mysore or Karnataka have all the Kannada speaking areas under one administration? He even doubted whether it was historically correct. I would invite the attention of Hon'ble Members to a very useful book written by Lewis Rice, Mysore, Vol. 1. In that he has given a map showing the territories of Mysore that existed in 1617 at the death of Raja Wadeyar, in 1704 at the death of Chikkadevaraja Wadeyar, in 1782 at the death of Hyder Ali Khan, and in 1799 after the fall of Tippu Sultan and after the Treaty of Srirangapatna. Any Hon'ble Member may look into this map. It would be very interesting to note that in the year 1782 at the death of Hyder Ali Khan, all the area that is now proposed to be brought under the administrative unit and even more was under one administration.

Sri Mulka GOVINDA REDDY.—The British Empire has vanished; why do you think of Hyder Ali Khan?

Sri H. SIDDAVEERAPPA.—I am only putting forth a historical fact just to show whether at any time all Kannada-speaking areas were brought under one Government.

Now, if we take that as the basis, in the year 1617 it will be seen that Mysore consisted of very small blocks—Mysore, Srirangapatna and Nanjangud Taluks. Regarding that part of the State from where I come, there is an interesting story. I am stating all this for one purpose, namely, to show that Mysore, as it is geographically, is in existence only from 1799. In the history of a nation one century is not a very long period. Take the case of Hyderabad State. The present area of Hyderabad is in existence for the last 600 years. In the larger interests of India, it is now proposed to disintegrate that area.

Coming to what I stated earlier namely, so far as Nagar Division is concerned, which consisted of Chitaldrug, Shimoga and Chikmagalur Districts, it has had a very interesting history, Up to 1799 that portion never formed part of Mysore. It is still more interesting to hear that after the fall of Tippu, Chitaldrug District—my district—was added on to Hyderabad and continued to remain in Hyderabad State for three years. after which it was brought back. The present Mysore State is therefore a historical accident.

I have an interesting book entitled "Selections from Parliamentary Blue Books relating to the Transfer of the Province of Mysore to Native Rule" which I would like to pass on to Hon'ble Members if they want to read. It contains correspondence in full between Mummadi Krishnaraja Wadiyar and the British Government. What happened was, after the year 1799 the present Mysore State was handed over to him. On grounds of misrule, rendition took place in the year 1833. The State was taken away by the Britishers. From that period

onwards, the period of rendition continued for 50 years. The Britishers did not yield. As a matter of fact they, more particularly Lord Dalhousie, as all students of history know, wanted to follow a policy of Escheat known as Doctrine of Lapse. Lord Dalhousie's policy was to see that the entire map of India was written in red colour. According to him, there was no safety for India until all the native dynasties were liquidated. Subsequently the British policy changed. I am saying this just to show what would have happened if, after the death of Krishnaraja Wadiyar III, Mysore State had been annexed to the other adjoining areas. During that period there is a very interesting correspondence. At the time of William Bentinck there is a proposal : "for military and strategic purposes let us take away Bangalore ; let us give to that ex-ruler Ashtagram and Mysore Division and part of Hassan District;" and then they say "let us take away the rest for the purposes of strategy." But that proposal was not given effect to as the British felt that in the larger interests of the welfare of the people it would not be right to give back some territories to the ex-ruler's dynasty. Supposing that proposal had been carried out. What would have been the size of Mysore ? Hence it is clear that the present geographical boundary of Mysore State is purely a result of historical accident and nothing else. It was not based on any other consideration.

Sri D. DEVARAJ URS (Hunsur).—Everybody's birth on earth is also an accident.

Sri H. SIDDAVEERAPPA.—I am glad 'A Daniel has come to judgment.'

So far as Nagar Division is concerned there is a very interesting paragraph which I would like to read for purposes of showing how according to historical accident many other areas of Mysore State were brought in. At page 17 of the book "Selections from Parliamentary Blue Books relating to the Transfer of the Province of Mysore to Native Rule," Mummdi Krishnaraja Wadiyar in one of his letters to British Government has stated as follows:

"Lord Canning has laid great stress on the fact that my people broke out in rebellion......" Probably rebellion as a result of the agitation started in that area. The basis of the agitation was: "ದೇವೇಂದ್ರ ಮಳೆ ಕರೆಯುತ್ತಾನೆ. ಬಸವಣ್ಣ ಉಳುತ್ತಾನೆ. ಭೂಮಿ ತಾಯಿ ಬೆಳೆ ಕೊಡುತ್ತಾಳೆ. ನಾವೇಕೆ ಕಂದಾಯ ಕೊಡಬೇಕು ?"

"...... and that they had to be quelled by British troops. But is there anything extraordinary in the fact that soldiers were called upon to restore the internal tranquillity of a territory in which they had been living at free quarters for three and thirty years? and has insurrection, if insurrection it may be called, been unheard of elsewhere? On the contrary, may it not be described as the chronic state of India, or may it not be compared with the cholera as an epidemic from which the best governed States, as well as the best ordered constitutions, are never safe? In the present instance, it arose in the Nagar Division, to which I had no hereditary claims, and where I may be supposed to have had no personal influence. The people of one portion of Nagar are of the same race as the people of Canara, and the inhabitants of the other are closely allied with the inhabitants of the Southern Mahratta country. It is a curious fact that both these territories have more than once been in open rebellion of a most serious character subsequent to the assumption of my government......"

All this shows that only after 1799 we find the present Mysore.

Sri T. MARIAPPA.—Is it said that the people of Nagar belonged to a different race altogether ?

Sri H. SIDDAVEERAPPA.—I read it just to show that even from the year 1799 when it was brought into one territory, people in that area had not reconciled to the administration.

Now let me take another point that has been raised. My friend Sri Ramachandra Rao stated that in his opinion we must have 35 States and

(SRI H. SIDDAVEERAPPA.)

he took America is an example. So far as America as concerned, my friend missed to note another very important point, namely, in America, apart from the area, every State, whatever its population, has equal representation in the Senate. The Senate is an important body. In fact, the Senate has more powers than the other House. The area of each State and various other things do not count for the simple reason that the Senate as the supreme legislative body in that country provides equal representation for all States, but conditions in India are quite different.

Another point that was raised was: Mysore is developing quite well; where is the need for Mysore now to think of joining with other parts? Facts will have to be faced. Even in the S. R. C. report it is very clearly stated that there will be a period of transition. In a period of transition there will be a certain amount of dislocation. But taking the sum and substance of the whole problem, taking the cumulative effect of the *pros* and *cons* and the advantages and the disadvantages, the Commission came to the conclusion that the likely disadvantages in the period of transition are more than compensated, adequately compensated by the other advantages that accrue afterwards. According to me, the period of transition may not be more than 5—10 years. After 1947 we had a period of transition so far as financial integration is concerned. Have we found any difficulty about it? Are there not adequate safeguards to see that the administration does not suffer? The most important thing is: whether we are going to suffer in the developmental activities in our State or whether those that want to come are poor relations who come here just to depend upon us or whether they come here not as a barren part of India but with sufficient resources. It cannot be gainsaid that we have developed to a certain extent. We in Mysore are proud of our achievements. But at the same time are other parts of Karnataka really so backward, are they financially so miserable as to make us say "no we do not want to have them"? The financial and economic aspects have been thoroughly examined. The financial viability of Karnataka State or rather Mysore State—I would like to call it as Mysore State or expanded Mysore—after a period of ten years as opined by the Commission is going to be one of the finest States in India both materially and otherwise. This State is going to be one of the surplus States; this State is going to occupy a proud place in the comity of States.

I may state one other point regarding the various States that have been proposed by the S. R. Commission. Out of sixteen States they want to have, we find that in area and population Karnataka State will be the eighth. Therefore, nobody can say that this State is going to become unduly unwieldy or unduly large. As a matter of fact, if you take the potential power for development in both the parts more particularly in agriculture and industry, and hydro-electric power possibilities, Karnataka will be an important State. Perhaps the real reason why some of my friends feel that we should remain as we are appears to be that our developmental activities may be hampered. It has been made abundantly clear that that Planning Commission have examined this question. They have come to the conclusion that, under no circumstance, by this re-distribution of territories into various States in India, developmental activities will be hampered. In fact, if it were so, the Commission would have been the first to recommend that we should not have Karnataka State. In fact in the terms of reference to the Commission it has been very clearly laid down that they must keep this point also in view. *Vide* Appendix B, page 266 of S. R. C. Report wherein it is stated "Changes which interfere with the successful prosecution of such a National plan would be harmful to the national interest." Both the Planning Commission and the financial experts at the Centre have, after examination, come to the conclusion that if the States are re-organised, developmental activities will not be hampered. If so, there is no reason why we should say that Mysore should remain as it is.

There is one another point which was laid stress upon and the Chief Minister in his lucid speech has very clearly stated about the financirl position of Mysore. I do not think I will be able to improve upon it. If anybody wants figures, I have got figures just to show that out of the developmental expenditure in Mysore State during the last five years most of the money comes from Central aid either by way of grant or by way of loan. Even for the starting of new schools we have to depend upon the Centre. This is not the fate of Mysore alone. It is the fate of every State, barring perhaps one or two States which may be financially very sound. We find that but for the Central aid, progress under our Five-Year Plan would be a mere dream. In areas other than Mysore certain developmental activities have been included in the Second Five-Year Plan. For instance in Coorg, Barapole Project has been included in the Second Five-Year Plan. The benefit of that huge scheme is going to accrue to us. Take for instance Tungabhadra where we are likely to get seven lakhs acres of irrigable land. One Kannambadi alone has brought so much prosperity to our State. Its irrigating capacity is nearly one lakh of acres. They have got various other schemes. These are not mere schemes. These schemes are actually under progress. These are schemes which are likely to be completed during the First Five-Year period or during the Second Five-Year period. Even today Raichur and Gulbarga Districts are the granaries of Hyderabad State. Some of us know, my friend Sri Mariappa also knows that at the time when there was scarcity of food at any rate I was getting substantial foodgrains from these two districts; they are always surplus districts. I am saying this just to show that these people who are coming from that area are really not so poor as some of us imagine. They have also got mineral potential. My friend Sri Madhavachar has stated about it. We are thinking of starting an aluminium factory in Mysore. Bauxite, raw material, is available in Belgaum District to start a factory. Since we are deficit in copper, manufacture of aluminium plays a large part in the industrial development of our country. The only drawback or check at the moment is that we have not got adequate power. When Honnemaradu and various other schemes are completed, there will be no other place in India for having an aluminium factory than Karnatak or expanded Mysore. It has been examined technically. Therefore, I personally feel that taking all these facts into consideration, there is no reason to think that we are going to suffer and that we are going to suffer permanently.

**Mr. SPEAKER.**— May I point out to the Hon'ble Member that his time is coming to a close?

**Sri H. SIDDAVEERAPPA.**—I am closing my speech within one minute.

**Sri T. MARIAPPA.**—Suppose it had no resources whatever.

**Sri H. SIDDAVEERAPPA.**—Even then it would be very difficult to reject the recommendation of the Commission. Other parts of Karnatak Districts without Mysore may not become a viable unit. That is one other reason why we have to agree for the formation of Karnatak.

Sir, I will abide by your ruling although I had very many points to bring to your kind consideration. I would like to close by renewing my appeal to the two major Communities: "let us try to live like brothers whatever may be the outcome of the recommendations."

ಶ್ರೀ ಡಿ. ದೇವರಾಜ ಅರಸ್.—ಎರಡು ಮೇಜರ್ ಕಮ್ಯೂನಿಟಿಗಳನ್ನು ಬಿಟ್ಟರೆ, ಬಾಕಿಯುವರು ಕಣ್ಣಿಗೆ ಕಾಣಾಪ್ಪದೇ ಇಲ್ಲ.

**Sri J. MOHAMED IMAM.**—The other communities are between two slices of bread so that the entire thing forms a sandwich.

**Sri K. HANUMANTHAIYA** (Chief Minister).—Sir, the correct position is that every community has attained majority (*Laughter*).

**Sri H. SIDDAVEERAPPA.**—I therefore appeal, whatever may be the outcome, that we should abide by the decision that will be ultimately taken by the Parliament and let us try to live together like brothers without having

(SRI H. SIDDAVEERAPPA.)

any kind of feeling which is not conducive to good living.

One word regarding Bellary: It has been referred to already by various friends. I think it would be unnecessary for me to repeat those arguments. I am glad to hear that there is no difference of opinion on this issue. I therefore feel that so far as Ballary is concerned, justice will be done. Of course, there were some other points. particularly the cultural aspect referred to by Sri A.G. Ramachandra Rao.

Sir, with these few words I conclude.

ಶ್ರೀ ಡಿ ಆರ್. ಕರಿಗೌಡ (ಹಾಸನ).—ಸ್ವಾಮಿ, ಈ ರಾಜ್ಯಪುನರ್ವಿಂಗಡನಾ ಸಲಹಾಸಮಿತಿಯವರುಮಾಡಿರುವ ಸಲಹೆಗಳು ಇಡೀ ಇಂಡಿಯಾ ದೇಶವನ್ನು ಹಾಳು ಮಾಡುವುದಕ್ಕೆ ಅವರು ಮೂರು ಜನ ಸೇರಿ ಆ ರೀತಿ ಸಲಹೆಮಾಡಿದ್ದಾರೆಂದು ನನ್ನ ಮನಸ್ಸಿಗೆ ತೋರುತ್ತದೆ. ಏತಕ್ಕೆಂದರೆ, ಭಾಷಾವಾರು ಪ್ರಾಂತ್ಯರಚನೆ ಮಾಡಬೇಕಾದರೆ, ಆಡಳಿತಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕಾಗಿದೆ. ದೇಶವನ್ನು ಮುಂದೆ ತರುವುದಕ್ಕೆ ಮಾಡಬೇಕಾಗಿದೆ ಎನ್ನುವುದನ್ನು ಯಾವುದಾದರೂ ಯೋಚನೆಮಾಡಿ ಮಾಡಿದ್ದಾರೆಯೇ ಎಂದು ನೋಡಿದರೆ ಅಲ್ಲಲ್ಲಿ ಅಂತಃಕಲಹ ತಂದಿಟ್ಟು ಮುಂದುವರಿಯಬೇಕಾಗಿರುವ ದೇಶವನ್ನು ಹಿಂದೆ ತಳ್ಳುವುದಕ್ಕೂ, ತಮಗೆ ಬೇಕಾಗಿರುವ ರಾಜ್ಯಗಳನ್ನು ಸ್ಥಾಪನೆಮಾಡುವುದಕ್ಕೂ ಈ ಸಮಿತಿ ಏರ್ಪಾಡಾಗಿ, ಅವರು ಆ ರೀತಿ ಸಲಹೆ ಮಾಡಿದ್ದಾರೋ ಎಂದು ಅನುಮಾನವಾಗುತ್ತದೆ. ಈ ಸಲಹೆಗಳಿಗೆ ಚಾಚೂ ಎನ್ನದೆ ಎಲ್ಲರೂ ಒಪ್ಪಿಕೊಳ್ಳಿ ಎಂದು ನಮ್ಮ ಸಂಸ್ಥೆಯ ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದನ್ನು ನೋಡಿ ಇದು ಪ್ರಜಾಪ್ರಭುತ್ವದ ಕಾಲವೋ, ಅಥವಾ ಸರ್ವಾಧಿಕಾರಿಯ ಕಾಲವೋ ಎಂದು ಹೊರಗಡೆ ಹೇಳಿ ಮಾತನಾಡುವುದನ್ನು ನೋಡಿದರೆ, ನನಗಂತೂ ನಾಚಿಕೆಯಾಗುತ್ತದೆ. ಈಗ ತಾನೇ ಒಂದು ವಾರದ ಹಿಂದೆ ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಗೆ ಹೋಗಿದ್ದೆ. ಮೈಸೂರು ದೇಶವನ್ನು ನೋಡದೆ ಇದ್ದಂಥ ಫಜಲಾಲಿ ಸಮಿತಿಯ ಮೂರು ಜನ ಸದಸ್ಯರೂ, ಮೈಸೂರು ದೇಶದ ಪ್ರತಿನಿಧಿ ಇಲ್ಲದೆ ಇರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಬರೀ ಉತ್ತರ ದೇಶದವರು ತುಂಬಿಕೊಂಡು, ದಕ್ಷಿಣ ಇಂಡಿಯಾವನ್ನು ಚೂರು ಚೂರುಮಾಡಿ, ಪ್ರೇಮ ಸೌಹಾರ್ದವಿರುವ ಕಡೆ, ವಿಷ ಬೀಜವನ್ನು ಇಟ್ಟು ಇಂಡಿಯಾ ದೇಶದ ರಾಜ್ಯವನ್ನು ಆಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಅಲ್ಲಿ ಹೇಳಿದರು (ಸಭೆಯಲ್ಲಿ ಗಲಭೆ) ಇಲ್ಲಿ ನೋಡಿದರೆ ಗೊತ್ತಾಗುತ್ತದೆ. ಆ ವಿಷ ಬೀಜದ ಪರಿಣಾಮದಿಂದ ಮನೆಮನೆಗೇ ಹತ್ತಿಕೊಂಡಿದೆ ಅಣ್ಣತಮ್ಮಂದಿರಿಗೇ ಹತ್ತಿಕೊಂಡಿದೆ, ಮಂತ್ರಿಮಂಡಲದಲ್ಲೇ ಹತ್ತಿಕೊಂಡಿದೆ. ಎಲ್ಲಾ ಚೆನ್ನಾಗಿದೆ ಎಂದು ಹೇಳಿದರೆ ಪ್ರಪಂಚವೇ ನಗುವ ಸಮಾಚಾರ. ಮುಖ್ಯ ಮಂತ್ರಿಗಳು ಒಂದು ಹೇಳಿದರೆ, ಅದಕ್ಕೆ ವಿರುದ್ಧವಾಗಿ ಅವರ ಸಹೋದ್ಯೋಗಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಹೇಳಿದ್ದಾರೆ. ಅದನ್ನು ಬಿಟ್ಟು ಅದಕ್ಕೆ ವಿರುದ್ಧವಾಗಿ ಶ್ರೀ ಸಿದ್ಧವೀರಪ್ಪನವರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಪ್ರತಿಯೊಂದು ಅಂಶದಲ್ಲಿಯೂ ಭಿನ್ನಾಭಿಪ್ರಾಯ ಇದ್ದೇ ಇರುತ್ತದೆ.

ಶ್ರೀ ಡಿ ಆರ್. ಕರಿಗೌಡ.—ಈ ಭಿನ್ನಾಭಿಪ್ರಾಯ ಇಲ್ಲ ಎಂದು ಹೇಳಿದರೆ, ಈ ವಿಷ ಬೀಜ S.R. ವರದಿಯಿಂದ ಹುಟ್ಟಿಲ್ಲವೆಂದು ಹೇಳಿದರೆ, ಅದು ಸತ್ಯಕ್ಕೆ ದೂರವಾದ ಮಾತು ಎಂದು, ನಮ್ಮೆಲ್ಲರಿಗೇ ಏತಕ್ಕೆ, ಇಡೀ ಇಂಡಿಯಾ ದೇಶಕ್ಕೇ ಗೊತ್ತಿದೆ. ಶ್ರೀ ಸಿದ್ಧವೀರಪ್ಪನವರು, ಡಿಫಿಸಿಟ್ ಏರಿಯಾ ಆಗುವುದಿಲ್ಲ, ಇಂಡಿಯಾದಲ್ಲೆಲ್ಲಾ ಅಭಿವೃದ್ಧಿಕಾರ್ಯಗಳು, ಪ್ಲಾನಿಂಗ್ ಕಮಿಷನರವರು ಹೇಳಿರುವಂತೆ, ತಡೆಯಿಲ್ಲದಂತೆ ನಡೆಯುತ್ತವೆ ಎಂದು ಹೇಳಿದರು. ಶ್ರೀ ಲಾಲ್ ಬಹದೂರ್ ಶಾಸ್ತ್ರಿಗಳು ಪ್ಲಾನಿಂಗ್ ಕಮಿಷನ್ನಿನ ಸದಸ್ಯರು. ಅವರು ಕೆಲವು ದಿನಗಳ ಹಿಂದೆ ಪುತ್ತೂರಿನಲ್ಲಿ ನಡೆದ ಮಂಗಳೂರು ಜಿಲ್ಲಾ ರಾಜಕೀಯ ಸಮ್ಮೇಳನವನ್ನು ಉದ್ಘಾಟನೆಮಾಡುತ್ತಾ S.R.C. ರಿಪೋರ್ಟನ್ನು ಚರ್ಚೆಗೆ ತರಬಾರದು, ಇದನ್ನು 10 ವರ್ಷಗಳ ಕಾಲ ಹಿಂದೂಡುವುದು ಒಳ್ಳೆಯದು ' ಎಂಬುದು ತಮ್ಮ ಖಚಿತ ಅಭಿಪ್ರಾಯವೆಂದು ಮಾನ್ಯ ಮುಖ್ಯ ಮಂತ್ರಿಗಳು ಅವರ ಎದುರಿನಲ್ಲಿದ್ದಾಗಲೇ ಹೇಳಿದರು.

ಶ್ರೀ ಕೆ. ಹನುಮಂತಯ್ಯ.—ಅವರು ಏನು ಹೇಳಿದರೋ ಅದನ್ನು ಒಪ್ಪಿಕೊಳ್ಳೋಣ.

ಶ್ರೀ ಡಿ. ಆರ್. ಕರಿಗೌಡ.—ನಿಮ್ಮ ಮನಸ್ಸಿನಲ್ಲಿ ಯಾವು ಯಾವುದನ್ನೋ ಇಟ್ಟುಕೊಂಡು ಅದನ್ನು ಒಪ್ಪಿಕೊಳ್ಳೋಣ ಎಂದು ಹೇಳುತ್ತೀರಿ. ನಾವು ಪೂಜ್ಯ ಗಾಂಧೀಜಿಯವರ ಶಿಷ್ಯರು. ಅವರನ್ನು ನಮ್ಮ ದೇಶದ ತಂದೆಯೆಂದು ಒಪ್ಪಿಕೊಂಡಿದ್ದೇವೆ. ಅವರು ' ಯಾರ ವಿಶ್ವಾಸವನ್ನೂ ಕೆಡಿಸದೆ ಯಾರ ಮನಸ್ಸನ್ನೂ ನೋಯಿಸದೆ, ನೀವು ಅವರ ಸ್ನೇಹವನ್ನು ಮಾಡಿಕೊಂಡು ನೀವು ಅವರ ಜೊತೆಗೆ ಸೇರಿಕೊಂಡು ರಾಜ್ಯಪುನರ್ವಿಂಗಡಣೆ ಮಾಡಿ ' ಎಂದು ಹೇಳಿದರು. S.R.C. ವರದಿಯಲ್ಲೇ ಪರಸ್ಪರ ಒಪ್ಪಿಗೆಯಿಂದ, ಪರಸ್ಪರ ಸೌಹಾರ್ದದಿಂದ ಯಾವ ರಾಜ್ಯವನ್ನು ಬೇಕಾದರೂ ಬದಲಾವಣೆಮಾಡಿಕೊಳ್ಳಬಹುದು ಅಥವಾ ಸೇರಿಸಬಹುದೆಂದು ಹೇಳಿದ್ದಾರೆ ಈ ಒಂದು ಮುಖ್ಯ ತತ್ವ ಏನಿದೆಯೋ ಆ ತತ್ವಕ್ಕೆ ವಿರುದ್ಧವಾಗಿ ನಮಗೆ ಅವರು ಸೇರುವುದು ಬೇಡ ಎಂದು ಹೇಳಿದರೂ ಅವರನ್ನು ತಂದು ನಮ್ಮ ತಲೆಯ ಮೇಲೆ ಹೇರುವುದೂ ಇಲ್ಲಿಯವರನ್ನು ಅವರ ತಲೆಯಮೇಲೆ ಹೇರುವುದೂ ಮತ್ತು ಈ ರೀತಿ ಪ್ರಾಂತ್ಯಗಳನ್ನು ಮಾಡುತ್ತಾ ಇರುವುದೂ ಗಾಂಧೀಜಿಯವರ ಶಿಷ್ಯರಾದ ನಮಗೆ ಸರಿಯಾದುದಲ್ಲ ಎಂದು ನಾನು ಹೇಳುತ್ತೇನೆ. ಇದು ಹೇಗಾಗುತ್ತದೆ ಎಂದರೆ, ಮನಸ್ಸು ಇಲ್ಲದೇ ಇರುವ 16 ವರ್ಷದ ವಧುವನ್ನು ಒಬ್ಬ ಮುದುಕನಿಗೆ ಕಟ್ಟಿದರೆ ಆ ವಧು ವರನನ್ನು ಬಿಟ್ಟುಬಿಟ್ಟು ಹೋಗುವ ಹಾಗಾಗುತ್ತದೆ. ನಾನು ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ವಿಶಾಲ ಮದ್ರಾಸ್ ಪ್ರಾಂತ್ಯದಲ್ಲಿ ಆಂಧ್ರ ರಾಜ್ಯವಾಗಬೇಕಾದ ಕಾರಣವೇನಿತ್ತೆಂದರೆ ಆಂಧ್ರ ಪ್ರದೇಶವು ದೂರವಿದ್ದು ಸರಿಯಾದ ವ್ಯವಸ್ಥೆಮಾಡುವುದಕ್ಕಾಗದೆ ಅವರೇ ಚಿಕ್ಕ ರಾಜ್ಯವನ್ನು ಮಾಡಿಕೊಂಡರೆ ಅವರ ದೇಶವನ್ನು ಅವರ ಅಭಿಪ್ರಾಯದಂತೆ ಅಭಿವೃದ್ಧಿಮಾಡಿಕೊಳ್ಳಬಹುದು ಎಂಬುದು. ಇದೇ ಉದ್ದೇಶದಿಂದಲೇ ಅವರು ಪ್ರಯತ್ನಪಟ್ಟು ಬೇರೆಯಾದರು. ಅದೇ ರೀತಿ ಈಗಲೂ ಕೂಡ ಬಲವಂತದಿಂದ ಒಂದು ರಾಜ್ಯವನ್ನಾಗಿ ಮಾಡಿದರೆ ಇನ್ನು ಹತ್ತು ವರ್ಷಗಳೊಳಗಾಗಿ ಇಲ್ಲಿಯವರು ಕಿರುಕುಳವನ್ನು ಸಹಿಸಲಾರದೆ ಹಿಂದೆ ಬೀಳುವುದನ್ನು ತಡೆಯಲಾರದೆ ಬೇರೆ ಆಗುವ ಸಂದರ್ಭ ಬರುತ್ತದೆ.

ಶ್ರೀ ಕೆ. ಹನುಮಂತಯ್ಯ.—ಅವರು ಏನೂ ಕಿರುಕುಳವನ್ನು ಕೊಡದೇ ಇದ್ದರೆ ?

ಶ್ರೀ ಡಿ. ಆರ್. ಕರಿಗೌಡ.—ಇನ್ನು 10 ವರ್ಷಗಳಿಗೆ ನಾನು ಹೇಳಿದ್ದು ನಿಜವಾಗುತ್ತದೆ. ಈಗ ಸಣ್ಣ ಗಿಡವಾಗಿರುವುದು 10 ವರ್ಷಗಳಲ್ಲಿ ದೊಡ್ಡ ಮರವಾಗುತ್ತದೆ. ಆಗ ಅದು ಪ್ರಪಂಚಕ್ಕೆ ಕಾಣುತ್ತದೆ.

ಮುಖ್ಯಮಂತ್ರಿಗಳು ಕಳೆದ ಎರಡು ವರ್ಷಗಳಿಂದ ಆಡಳಿತ ಸೌಕರ್ಯ ದೃಷ್ಟಿಯನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಆಡಳಿತ ಸೌಕರ್ಯದ ದೃಷ್ಟಿಯಿಂದ ಒಂದು ದೇಶ ಚಿಕ್ಕದಾದಷ್ಟೂ ಚೆನ್ನಾಗಿರುತ್ತದೆ ಎಂಬುವುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಬೆಂಗಳೂರು ನಮ್ಮ ದೇಶದ ರಾಜಧಾನಿ. ಮೈಸೂರಿನಲ್ಲಿ ಶ್ರೀಮನ್ಮಹಾರಾಜರು ಇರುತ್ತಾರೆ. ಅಲ್ಲಿಂದ ಇಲ್ಲಿಗೆ ಹೋಗುವ ದಾರಿಯಲ್ಲಿ ಸರ್ ಮಿರ್ಜಾ ಸಾಹೇಬರು ರಸ್ತೆಯನ್ನು ಚೆನ್ನಾಗಿ ಮಾಡಿಸಿದರು. ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯನ್ನು ಏರ್ಪಾಡುಮಾಡಿದರು. ಬೆಂಗಳೂರು ರಾಜಧಾನಿಗೆ ಕೋಲಾರ ಜಿಲ್ಲೆ ಹತ್ತಿರವಿರುವುದರಿಂದ ಅದು ಹಾಗೆಯೇ ಮುಂದಕ್ಕೆ ಬಂದಿದೆ. ಹತ್ತಿರವಿರುವ ತುಮಕೂರು ಜಿಲ್ಲೆಗೆ ಟಾರ್ ರಸ್ತೆಯಾಗಿದೆ. ಆದರೆ ಚಿಕ್ಕಮಗಳೂರು ಡಿಸ್ಟ್ರಿಕ್ಟಿಗೆ ಈ ರೀತಿ ಏನೂ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಆಡಳಿತ ವರ್ಗದವರು ಈ ಜಿಲ್ಲೆಗೆ ಹೆಚ್ಚು ನಿಗಾ ಕೊಡುವುದಕ್ಕೆ ಆಗದೇ ಇರುವುದು ಇದಕ್ಕೆ ಕಾರಣ ನಾನು ಇನ್ನೊಂದು ಮಾತು ಹೇಳುತ್ತೇನೆ. ಅದಕ್ಕೆ ಯಾರೂ ಆಕ್ಷೇಪಣೆಮಾಡಕೂಡದು ಮತ್ತು ಮನಸ್ಸಿನಲ್ಲಿ ಬೇಜಾರುಮಾಡಿ ಕೋಪಮಾಡಬಾರದು. ದೇಶ ಇಷ್ಟು ವಿಷಮ ಪರಿಸ್ಥಿತಿಗೆ ಬರುವುದಕ್ಕೆ ಕಾರಣವನ್ನು ಹಿಂದೆಯೇ ಹೇಳಿದ್ದಾರೆ. ಶ್ರೀ ಸಿದ್ದವೀರಪ್ಪನವರು ಯಾವ ಪುಸ್ತಕವನ್ನು quote ಮಾಡಿ ಹೇಳಿದ್ದಾರೋ ಅದರಲ್ಲೇ ಆ ಕಾರಣವೂ ಇವೆ. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ Law and Orderನ್ನು ಬ್ರಿಟಿಷರು ತೆಗೆದುಕೊಂಡಾಗ ಲಾರ್ಡ್ ರಿಪ್ಪನ್‌ರವರು 'ನಿಮ್ಮ ಮೈಸೂರಿನಲ್ಲಿ Law ಇಲ್ಲ'ವೆಂದು ಹೇಳಿದ್ದಾರೆ. ಅದಕ್ಕೆ ಮಹಾರಾಜರು "ಎಲ್ಲಾ ಪ್ರಜೆಗಳೂ ನನ್ನ ಪ್ರೇಮದ ಪ್ರಜೆಗಳು. ಆದರೆ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳವರು ಯಾವಾಗಲೂ ವಿಧೇಯರಾಗಿರಲಿಲ್ಲ. ಈಗಲೂ ಇಲ್ಲ" ಎಂದು ಬರೆದಿದ್ದಾರೆ. ಈಗಲೂ ಕೂಡ ಮೈಸೂರಿನಲ್ಲಿ ವಿಷಮ ಪರಿಸ್ಥಿತಿ ಏರ್ಪಾಡು ಆಗಿರಬೇಕಾಗಿದ್ದರೆ ಶಿವಮೊಗ್ಗಾ ಜಿಲ್ಲೆಯ ಮೆಂಬರುಗಳು ಮತ್ತು ಪ್ರಜೆಗಳಿಂದಲೇ ಮತ್ತು ಚಿತ್ರದುರ್ಗ ಜಿಲ್ಲೆಯ ಮೆಂಬರುಗಳು ಮತ್ತು ಪ್ರಜೆಗಳಿಂದಲೇ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಅವರು ಸುಮ್ಮನೆ ಹೇಳುತ್ತಿದ್ದಾರೆ, Let him quote.

**Mr. SPEAKER.**—I do not think it is a discredit. You can take it as a credit.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಶ್ರೀ ಕಡಿದಾಳ್ ಮಂಜಪ್ಪನವರೊಬ್ಬರನ್ನು ಬಿಟ್ಟು ಬಿಟ್ಟು ಎಂದು ಹೇಳಿ.

ಶ್ರೀ ಡಿ. ಆರ್. ಕರಿಗೌಡ.—ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ದ್ವೇಷದಿಂದಲ್ಲ, ಪ್ರೀತಿಯಿಂದ ಒಮ್ಮನಸ್ಸಿನಿಂದ ಈ ಕಾರ್ಯವನ್ನು ಮಾಡಬೇಕೆಂದು ಆಗಾಗ್ಗೆ ಮುಖ್ಯ ಮಂತ್ರಿಗಳೂ ಹೇಳುತ್ತಿದ್ದಾರೆ. ಎಲ್ಲರಿಗೂ ವಿಶ್ವಾಸ ಮತ್ತು ಪ್ರೇಮ ಇರುವ ಕಾಲ ಬರುವವರೆಗೆ ಸ್ವಲ್ಪ ತಡೆಯಿರಿ ಕೇಂದ್ರದಿಂದ ಬೇಕಾದಷ್ಟು ಹಣವನ್ನು ತೆಗೆದುಕೊಳ್ಳಲಿ, ಇನ್ನೊಂದು ಕರ್ಣಾಟಕವನ್ನು ಮಾಡಲಿ. ನಮ್ಮ ಮಟ್ಟಕ್ಕೆ ಅವರು ಅಥವಾ ಅವರ ಮಟ್ಟಕ್ಕೆ ನಾವು ಬಂದಾಗ ಇಬ್ಬರೂ ಸ್ನೇಹದಿಂದ ಒಟ್ಟುಗೂಡೋಣ. ಸ್ವಾಮಿ, ಮಾನ್ಯ ನೆಹರೂ ಅವರಂತಹ ನಾಯಕರು ನಾಳೆಯಿಂದ ಮೈಸೂರಿಗೆ ಬಂದರೆ ನಮ್ಮ ಮುಖ್ಯ ಮಂತ್ರಿಗಳು ಮೈಸೂರಿನ ಪೇಟವನ್ನು ಹೇಗೆ ಸುತ್ತಿಕೊಳ್ಳುತ್ತಾರೆ? ಆ ಪೇಟವನ್ನು ಅವರು ಕಳೆದುಕೊಂಡರು, ಧಾರವಾಡ ಪೇಟವನ್ನು ಸುತ್ತಬೇಕಾಗುತ್ತದೆ ಮೈಸೂರು ಪೇಟಕ್ಕೆ ಬೆಲೆಯೇ ಇಲ್ಲ. ನಮ್ಮ ಮೈಸೂರು ದೇಶದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚನ್ನಯ್ಯನವರು ಮೈಸೂರಿನ ಒಂದು ಸಭೆಯಲ್ಲಿ ಮಾತನಾಡುತ್ತಾ S.R.C. ವರದಿಯಲ್ಲಿ ಮೈಸೂರಿನ ಹೆಸರು ಇಲ್ಲದೇ ಇರುವುದನ್ನು ನೋಡಿದರೆ ನಮ್ಮ ಮನೆಯಲ್ಲಿ ಯಾರೋ ಸತ್ತುಹೋದಷ್ಟು ದುಃಖವಾಗುತ್ತದೆ ಎಂದು ಹೇಳಿದರು. ಮೈಸೂರಿನ ಹೆಸರು ಉಳಿಸಿ ಎಂದು ಮೈಸೂರಜನ ಕೇಳುತ್ತಿದ್ದಾರೆ. ಅದನ್ನು ಉಳಿಸಬೇಕು ಎಂದು ಕೇಳೋಣ ಎಂದು ಮುಖ್ಯ ಮಂತ್ರಿಗಳು ಹೇಳಿದರು, ಬರಿಯ ಶವದ ಅಲಂಕಾರ ಬೇಡ. . . .

ಶ್ರೀ ಎಚ್. ಸಿದ್ದವೀರಪ್ಪ.—ಆತ್ಮವಿಕಾಸವಾಗಬೇಕು.

ಶ್ರೀ ಡಿ. ಆರ್. ಕರಿಗೌಡ.—ಆತ್ಮವಿಕಾಸವಾಗುವವರೆಗೂ ಹಾಗೆಯೇ ಇರೋಣ. ನಮ್ಮ ವಿಕಾಸಕ್ಕೆ ನಾವು ಬರುವುದಕ್ಕೆ ನಮಗೆ ಬಿಡಿ. ನಿಮ್ಮ ಮಟ್ಟಕ್ಕೆ ನಾವು ಬಂದಾಗ, ನಮ್ಮ ಮಟ್ಟಕ್ಕೆ ನೀವು ಬಂದಾಗ ಇಬ್ಬರೂ ಸೇರಿ ಅನುಸರಿಸಿಕೊಂಡು ಹೋಗೋಣ...

Sri Mulka **GOVINDA REDDY**,—(Chitaldrug).—He may continue tomorrow, Sir.

**Mr. SPEAKER.**—I have already said that Members who are willing may sit and continue the debate. Because otherwise most of the Hon'ble Members may go without a chance.

ಶ್ರೀ ಡಿ. ಆರ್. ಕರಿಗೌಡ.—ಆಡಳಿತ ದೃಷ್ಟಿಯಿಂದ ರಾಜ್ಯ ಎಷ್ಟು ಚಿಕ್ಕದಾದರೆ ಅಷ್ಟೂ ಒಳ್ಳೆಯದು. ಅಷ್ಟು ಜಾಗ್ರತೆ ಅಭಿವೃದ್ಧಿಗೆ ಬರುತ್ತದೆ. ನಮ್ಮ ಮೈಸೂರು ದೇಶ, ತಿರುವಾಂಕೂರು-ಕೊಚ್ಚಿ, ಕೊಡಗು ಎಷ್ಟು ಮುಂದುವರಿದಿದೆ ಎಂಬುದನ್ನು ನೋಡುತ್ತಿದ್ದೇವೆ. ಇನ್ನು ಐದು ವರ್ಷಕಾಲ ಈ ರಾಜ್ಯಗಳ ಪುನರ್ವಿಂಗಡಣಾ ಸಮಿತಿಯ ಸಲಹೆಗಳನ್ನು ಜಾರಿಗೆ ತರದೇಹೋದರೆ ನಮ್ಮ ದೇಶದ ಹಳ್ಳಿಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನೊದಗಿಸುತ್ತೇವೆ. ರಸ್ತೆಗಳಿಗೆಲ್ಲಾ ತಾರು ಹಾಕುವುದಕ್ಕವಕಾಶವಾಗುತ್ತದೆ, ಮುಂತಾಗಿ ಕೊಡಗಿನವರು ಹೇಳಿದರು. ನಾನೂ ಶ್ರೀ ಎಚ್. ಸಿ. ದಾಸಪ್ಪನವರೂ ಕೊಡಗಿಗೆ ಹೋಗಿದ್ದೆವು. ಅಲ್ಲಿ ಒಂದು ಸಭೆ ನಡೆಯುತ್ತಿತ್ತು. ಕಲವು ಜನರು ಅಲ್ಲಿನ ವಿದ್ಯಾಮಂತ್ರಿಗಳಾದ ಮಾನ್ಯ ಮಲ್ಲಪ್ಪನವರಿಗೆ, ತಮ್ಮ ಗ್ರಾಮಕ್ಕೆ ಸ್ಕೂಲು ಬೇಕೆಂದು ಹೇಳಿ ಅರ್ಜಿಕೊಟ್ಟರು, ಅದನ್ನು ತೆಗೆದುಕೊಂಡು ಹರಿದುಹಾಕಿ, ಈ ಅರ್ಜಿ ಏಕೆ, ಡಿ.ಇ.ಓಗೆ ಹೇಳಿದರೆ ಅವರೇ ನಾಳೆ ಏರ್ಪಾಡು ಮಾಡುತ್ತಾರೆ ಎಂದು ಹೇಳಿದರು.

*(Interruption)*

ಇಲ್ಲಿ ನಮ್ಮಲ್ಲಿ ಮೂರು ಪ್ರೈಮರಿ ಸ್ಕೂಲುಗಳನ್ನೂ ಐದು ಮಿಡ್ಲ್ ಸ್ಕೂಲುಗಳನ್ನೂ ಕೊಡುವುದಕ್ಕೆ ಯೋಗ್ಯತೆಯಿಲ್ಲದಿರುವಾಗ, ಇಡೀ ಕರ್ಣಾಟಕಕ್ಕೆ ವಿದ್ಯಾ ಸೌಕರ್ಯಗಳನ್ನೂ, ರಸ್ತೆ ಮುಂತಾದ ಸಂಚಾರ ಸೌಕರ್ಯಗಳನ್ನೂ, ವೈದ್ಯ ಸಹಾಯವನ್ನೂ ಒದಗಿಸು

(ಶ್ರೀ ಡಿ. ಆರ್. ಕರೀಗೌಡ.)

ವುದಕ್ಕೆ ಶಕ್ತಿ ಇದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕು.

ಸ್ವಾಮಿ, ನಾನು ನಿನ್ನೆಯದಿನ ಮುಖ್ಯ ಮಂತ್ರಿಗಳೊಡನೆ ಮಾತನಾಡುತ್ತಾ ಅಣ್ಣತಮ್ಮಂದಿರು ಏಕೆ ಬೇರೆ ಇರಬಾರದೆಂದು ಕೇಳಿದೆ, ಹೆಂಡತಿ ಒಪ್ಪುವುದಿಲ್ಲ, ಅಥವಾ ಬೇರೆ ಕಾರಣದಿಂದ ಬೇರೆ ಬೇರೆ ಮನೆ ಮಾಡುತ್ತೇವೆ. ಆದರೂ ಅಣ್ಣತಮ್ಮಂದಿರಲ್ಲಿ ಪ್ರೀತಿಯೇನೂ ಕಡಮೆಯಾಗುವುದಿಲ್ಲ. ನಾವು ಒಂದು ಮನೆ ಹತ್ತು ಮನೆಯಾಗಲೆಂದು ಹೇಳುತ್ತೇವೆ. ಒಂದೇ ಮನೆ ಮಾಡಿಕೊಂಡು, ಪರಸ್ಪರ ಪ್ರೀತಿ ವಿಶ್ವಾಸಗಳಿಲ್ಲದೆ ಸದಾ ಕಚ್ಚಾಡುವುದಕ್ಕೆ ಬದಲು ಬೇರೆ ಬೇರೆ ಮನೆಮಾಡಿ, ಒಬ್ಬರನ್ನು ನೋಡಿ ಇನ್ನೊಬ್ಬರು ಮುಂದಕ್ಕೆ ಬಂದು ಪರಸ್ಪರ ಪ್ರೀತಿಯಿಂದ ನಡೆದುಕೊಂಡು ಹೋಗುವುದೊಳ್ಳೆಯದಲ್ಲವೆ? ಬಲವಂತದಿಂದ ಸೇರಿಸುವುದು ಒಳ್ಳೆಯದೆ? ಮೈಸೂರು ದೇಶ ಪೂರ್ತಿಯಾಗಿ ಅಭಿವೃದ್ಧಿ ಸ್ಥಿತಿಗೆ ಬಂದಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಮಂತ್ರಿಗಳ ಊರು, ಅಕ್ಕಪಕ್ಕದಲ್ಲಿ ಉತ್ತಮವಾಗಿದೆ. ಈ ಸಭೆಯ ಸದಸ್ಯರು ಎಲ್ಲಿಯಾದ್ದರೋ ಅವರ ಪ್ರದೇಶ ಕೂಡ ಪೂರ್ತಿ ಅಭಿವೃದ್ಧಿಯಾಗಿಲ್ಲ. ಶ್ರೀ ಸಿದ್ದಯ್ಯನವರಿದ್ದಾಗ ಶಿವಮೊಗ್ಗ ದವಂಗೆ ಹೋಗುವುದಕ್ಕೆ ಸಿಮೆಂಟ್ ಕಾಂಕ್ರೀಟ್ ರಸ್ತೆಮಾಡಿದರು, ನಮಗೆ ಯಾಕೆ ಟಾರ್ ರಸ್ತೆಯನ್ನಾದರೂ ಮಾಡಿಸಬಾರದೆಂದು ಕೇಳಿದ್ದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ತಮ್ಮ ಊರಿಗೆ ಹೋಗುವ ರಸ್ತೆ ಸರಿಮಾಡಿಸಿಕೊಳ್ಳುತ್ತಿದ್ದಾರೆ. ಶ್ರೀಮಾನ್ ರಾಮಚಂದ್ರರಾಯರು ಬೇಕಾದರೆ ತಮ್ಮೂರಿಗೊಂದು ಸ್ಕೂಲು ಕೊಡಬಹುದು. ಅವರವರ ಹತ್ತಿರವಿರುವ ಪ್ರದೇಶದಲ್ಲಿ ಏನಾದರೂ ಅನುಕೂಲಮಾಡಿಕೊಡಬಹುದು. ತಮ್ಮೂರೆಂಬ ಪ್ರೇಮದಿಂದ ಏನಾದರೂ ಕೆಲಸ ಮಾಡಿಕೊಡಬಹುದು. ಎಲ್ಲ ಕಡೆಯೂ ಆದ ಹಾಗಾಯಿತೆ ! ಇನ್ನೊಂದು ಉದಾಹರಣೆ ಹೇಳುತ್ತೇನೆ. ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿಕೊಂಡ ಮೇಲೆ ಅಲ್ಲಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಮೈಸೂರು ದೇಶಕ್ಕೆ ಕೊಡಬೇಕಾದುದನ್ನು ಅಲ್ಲಿಗೆ ಕೊಟ್ಟರು. ಶ್ರೀಮಾನ್ ಬೈರೇಗೌಡರು ಕೆಲವು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಕೇಳಿದುದಕ್ಕೆ, ಸಾಮಾನಿಲ್ಲ, ವಿದ್ಯುಚ್ಛಕ್ತಿ ಕೊಡುವುದಕ್ಕಾಗುವುದಿಲ್ಲ ಎಂದು ಮಂತ್ರಿಗಳು ಹೇಳಿದರು. ಹೀಗೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಬೇರೆ ಕಡೆಗಳಿಗೆಲ್ಲ ವಿದ್ಯುಚ್ಛಕ್ತಿ ಒದಗಿಸಲು ಸಾಧ್ಯವಾಗುವುದಿಲ್ಲ. ನಮ್ಮ ಮನೆಯವರಿಗೇ ತಿನ್ನುವುದಕ್ಕೆ ಅನ್ನವಿಲ್ಲದೇಯಿರುವಾಗ ಇನ್ನೊಬ್ಬರಿಗೆ ಹಾಕುವುದು ಹೇಗೆ? ಅವರು ನಿಜವಾಗಿ ಮಹಾತ್ಮಾ ಗಾಂಧಿಯವರ ಅನುಯಾಯಿಗಳಾಗಿದ್ದಲ್ಲಿ ಪ್ರಜಾಪ್ರಭುತ್ವಕ್ಕೆ ಮನ್ನಣೆಯಿದ್ದರೆ, ಈ ಸಭೆಯ ಮೂಲಕ ನಾನು ಕಾಂಗ್ರೆಸ್ ಹೈ ಕಮ್ಯಾಂಡಿನಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇಂಡಿಯಾ ದೇಶಕ್ಕೆ ಪ್ರಜಾಪ್ರಭುತ್ವವನ್ನು ತರಿಸುತ್ತೇವೆಂದು ಹೇಳುತ್ತಿದ್ದವರು, ಅದೇ ನೀತಿಯನ್ನನುಸರಿಸಿ, ಈ ವಿಷಯದಲ್ಲಿ ಯಾರಾದರೂಬೇಡವೆಂದರೆ ಆ ಕೆಲಸ ಮಾಡಬಾರದು. ಮೈಸೂರು ದೇಶದ ಹೆಸರನ್ನಳಿಸಿ ಇನ್ನೊಂದು ಕಡೆಗೆ ಇದನ್ನು ಸೇರಿಸುತ್ತಿರುವಾಗ ಮೈಸೂರಿನ ಪ್ರಜೆಗಳ ಅಭಿಮತ ಮುಖ್ಯವೇ ಹೊರತು, ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಲಿ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರ ಅಭಿಪ್ರಾಯವಾಗಲಿ ಮುಖ್ಯವಲ್ಲ. ಬೇಡವೆಂದು ಹೇಳುವವರು 50 ಲಕ್ಷ ಜನರು, ಬೇಕೆಂದು ಹೇಳುವವರು 150 ಲಕ್ಷ ಜನ ಎಂದು ಹೇಳಿದರು. ನಮ್ಮವರು 50 ಲಕ್ಷ ಜನವಾದರೂ, ನಮ್ಮ ಮನೆಗೆ ಹೊರಗಿನಿಂದ ದರೋಡೆಕೋರರು ಬಂದು......

ಒಬ್ಬ ಸದಸ್ಯರು.—ದರೋಡೆಕೋರರು ಎಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ಒಂದು ಉಪಮಾನಕೊಟ್ಟರೂ ಅದೂ ಬೇರೆ ರೀತಿ ಅರ್ಥವಾಗಬಹುದು. ಆದಕಾರಣ ಅದನ್ನು ಬಿಟ್ಟು ಬೇರೆ ಇನ್ನೊಂದು ರೀತಿಯಲ್ಲಿ ಹೇಳಿ.

ಶ್ರೀ ಡಿ. ಆರ್. ಕರೀಗೌಡ.—ಬಲವಂತದಿಂದ ಇರುವ ಮನೆಯನ್ನು, ಕಿತ್ತುಕೊಂಡು ಹೋಗುವುದಕ್ಕೆ ಸರ್ಕಾರ ಅವಕಾಶಕೊಟ್ಟರೆ ಆ ಸರ್ಕಾರ, ಆ ನೀತಿ ಬಹಳ ಕಾಲ ಅಥವಾ ಶಾಶ್ವತವಾಗಿ ಉಳಿಯುತ್ತದೆಯೇ ಎಂದು ಕೇಳುತ್ತೇನೆ. ಕಾಂಗ್ರೆಸ್ ನೆಚ್ಚಿನ ನಾಯಕರಾದ ಜವಹರಲಾಲ್ ನೆಹರೂ ಅವರೆ ಈ ವಿಷಯವನ್ನು ಪರಿಶೀಲನೆಮಾಡಲಿ. ಮಹಾತ್ಮರೆಂದು ಯಾರ ಸಮಾಧಿಯ ಮೇಲೆ ಹೂವನ್ನು ಹಾಕುತ್ತಿದ್ದೇವೆಯೋ ಅವರ ಆತ್ಮಕ್ಕೆ ತೃಪ್ತಿಯಾಗಬೇಕಾದರೆ ಅವರ ವಚನವನ್ನು ಪಾಲಿಸಬೇಕು. ನಮ್ಮ ಮೈಸೂರನ್ನು ಅವರು ರಾಮರಾಜ್ಯವೆಂದು ಹೇಳಿದರು. ಸರ್ದಾರ್ ಪಟೇಲರು ನಮ್ಮ ಮಹಾರಾಜರಿಗೆ ಶ್ರೀಮಾನ್ ಗುಂಡಪ್ಪಗೌಡರ ಎದುರಿಗೇ 'ರಾಜರನ್ನು ಇಡುತ್ತೇವೆ, ನೀವಿರುವವರೆಗೂ ನೀವೇ ರಾಜರಾಗಿರಿ' ಎಂದು ಹೇಳಿದರು ಆ ಮಾತನ್ನುಳಿಸಬೇಡವೇ? ಈ ವಿಷಯ ನಿಜವೇಅಲ್ಲವೇ ಎಂಬುದನ್ನು ಬೇಕಾದರೆ ನೆಹರೂ ಅವರನ್ನೇ ಕೇಳಿ ತಿಳಿದುಕೊಳ್ಳಿ. ಗತಿಸಿದ ಮಹಾತ್ಮ ಗಾಂಧಿಯವರು ಹೇಳಿದ ಮಾತನ್ನೂ, ಪಟೇಲರ ಮಾತನ್ನೂ ಉಳಿಸಿಕೊಳ್ಳಬೇಕಾದರೆ ಆ ಪೂಜ್ಯರು ಹೇಗೆ ಹೇಳುತ್ತಿದ್ದರೋ ಹಾಗೆ ಮಾಡಬೇಕು. ಮೈಸೂರನ್ನು ಉಳಿಸಿಕೊಳ್ಳಬೇಕಾದುದು ನಿಮ್ಮ ಕರ್ತವ್ಯವೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ, ನಮ್ಮನ್ನು ಹಿಂಸೆಮಾಡಿ ಏಕೆ ಸೇರಿಸುತ್ತೀರಿ?

ನಾವೆಲ್ಲರೂ ಇದಕ್ಕೆ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧರಾಗಿದ್ದೇವೆ. ನನ್ನ ಈಗತಾನೆ ಕೆಲವು ದಿವಸಗಳ ಹಿಂದೆ ಗತಿಸಿದ ಪತ್ನಿಯ ಜ್ಞಾಪಕಾರ್ಥವಾಗಿಯೇ ಈ ನನ್ನ ಜೀವಿತವನ್ನು ಅರ್ಪಿಸಿದೆನೆಂದು ತಿಳಿಯಿರಿ. ನನ್ನ ಆ ಪತ್ನಿಯು ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ಅಂದು ಬುಧವಾರ ದಿವಸ ತಾನೆ ಸೇರಿದ್ದಳು ಈ ವರದಿಯು ಬಂದಿದ್ದನ್ನು ಕೇಳಿ ತಕ್ಷಣವೇ ಅವಳ ಅಪ್ಪಣೆಪಡೆದು, ಶ್ರೀಮಾನ್ ವೀರಣ್ಣಗೌಡರವರ ಮುಂದೆ ಬಂದು, ಆ ಏಳು ಮಕ್ಕಳನ್ನೂ ಬಿಟ್ಟು ಸತ್ತ ನನ್ನ ಪತ್ನಿಯ ಆತ್ಮಕ್ಕೆ ನನ್ನ ಪ್ರಾಣವನ್ನೂ ಸಮರ್ಪಣೆ ಮಾಡುತ್ತೇನೆಂದು ತಿಳಿಯಿರೆಂದು ಹೇಳಿ ನಾನು ಅಂದಿನಿಂದ ಈ ಮೈಸೂರು ದೇಶವನ್ನು ಉಳಿಸಿಕೊಳ್ಳುವುದಕ್ಕೆ ನೆರವಾಗಿದ್ದೇನೆಂದು ಹೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ನನ್ನ ಮನಬಿಚ್ಚಿ ಮನಸ್ಸಿನಲ್ಲಿರುವುದನ್ನು ಹೇಳಿದರೆ ದಯವಿಟ್ಟು ಯಾರೂ ಬೇಜಾರಪಟ್ಟುಕೊಳ್ಳಬಾರದು. ಇಂಗ್ಲೀಷರು ನಮ್ಮ ದೇಶಕ್ಕೆ ಬಂದು ರಾಜ್ಯವಿಸ್ತರಣೆಮಾಡಿದ್ದು ತಮ್ಮ ಮತವಿಸ್ತರಣೆಗಾಗಿ ಮುಸ್ಲಿಮರು ರಾಜ್ಯವಿಸ್ತರಣೆಮಾಡಿ ತಮ್ಮ ಮತ ಪ್ರಚಾರಕ್ಕೆ ಅನುಕೂಲ ಮಾಡಿಕೊಳ್ಳಲಿಲ್ಲವೇ? ಅಂತೆಯೇ ಈ ಘಟನೆ ನನಗನ್ನಿಸುತ್ತದೆ, ನಮ್ಮ ಮೇಲೆ ಹಿಂಸೆಯಿಂದ ಈ ರಾಜ್ಯ ವಿಸ್ತರಣೆಯನ್ನೊಪ್ಪಿರೆಂದು ಹೇಳಿ ಹೊರಿಸಿ ವೀರಶೈವ ರಾಜ್ಯವನ್ನು ಸ್ಥಾಪನೆ ಮಾಡಿ ಆ ಮತದ ವಿಸ್ತರಣೆಗೆ ಪ್ರಯತ್ನ ನಡೆಸಿದ್ದಾರೆಂದು ಹೇಳಿದರೆ ತಪ್ಪಲ್ಲ. ಮಹಾತ್ಮಾಗಾಂಧಿಯವರು ಜಾತ್ಯಾತೀತವಾದ ದೇಶವಿರಬೇಕೆಂದು ಹೇಳಿರುವಾಗ ಜಾತಿಗೇ ಆಜ್ಯಾಹುತಿಯನ್ನೀವ ಈ ಎಸ್. ಆರ್. ಸಿ. ವರದಿಯನ್ನು ಸ್ವಾಗತಿಸಬೇಕೇ ನಾವು! ಮಹಾತ್ಮಾಗಾಂಧಿಯವರ ಆತ್ಮಕ್ಕೆ ನಿಜವಾಗಿದ್ದರೆ ಯಾರೂ ಇಂಥ ವರದಿಯನ್ನು ಒಪ್ಪುವುದಿಲ್ಲ. ಈ ಎಸ್. ಆರ್. ಸಿ. ವರದಿ ಇಂಡಿಯಾದೇಶದಲ್ಲಿ ಕಮ್ಯೂನಿಸಂ ತರುವುದಕ್ಕೆ ಪ್ರಯತ್ನಮಾಡಿದೆಯೆಂದು ನಾನು ಬಹಳ

ವಿಷಾದದಿಂದ ಹೇಳುತ್ತೇನೆ. ನನ್ನನ್ನು ಕಾಂಗ್ರೆಸ್ಸಿನಿಂದ ಓಡಿಸಿದರೂ ಚಿಂತೆಯಿಲ್ಲ, ನಾನು ಘಂಟಾಘೋಷವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ತಮಗೆಲ್ಲಾ ಗೊತ್ತಿರುವಹಾಗೆ ನಮ್ಮ ಹಳ್ಳಿಗಾಡಿನ ಒಕ್ಕಲಿಗರು ದಿನಕ್ಕೆ 15 ಗಂಟೆ ಕೆಲಸಮಾಡಿ ಕಷ್ಟಜೀವನ ನಡೆಸುತ್ತಿದ್ದಾರೆ. ಇಷ್ಟಾದರೂ ಇಂದು ಅವರ ಮಕ್ಕಳಿಗೆ ಓದಲಿಕ್ಕೆ ಒಂದು ಸ್ಕೂಲಿಲ್ಲ; ಉಡಲಿಕ್ಕೆ ಸರಿಯಾದ ಬಟ್ಟೆಯಿಲ್ಲ. ಊಟಕ್ಕೆ ಬೆಣ್ಣೆ ತುಪ್ಪ ಇಲ್ಲ. ಅಂಥವರಿಗೀಗ ಇನ್ನಷ್ಟು ಕಷ್ಟ ತಂದೊಡ್ಡಿದ್ದರೆ ಅವರಿಗಿನ್ನೇನು ಕಮ್ಯುನಿಸಮ್ಮೇ ಶರಣುವೆಂದು ಕಾಣುತ್ತದೆ. ಕಮ್ಯುನಿಸಂ ಒಂದೇ ಅವರಿಗೆ ಸಾಕಷ್ಟು ಕೆಲಸ ಕೊಡಬಲ್ಲದು. ಜೀವನ ಅವಶ್ಯಕತೆಗಳನ್ನು ಕೊಡಬಲ್ಲದು. ಅವರಂತೂ ಯಾವತ್ತೂ ಕೆಲಸಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಆದ್ದರಿಂದ ತಾವು ಡೆಲ್ಲಿಯ ಹೈಕಮ್ಯಾಂಡ್‌ನಿಂದ ಬಂದಿತೆಂದು ಹೇಳಿ ಯಾವ ರೀತಿ ಕೇರಳದ ರಚನೆಯಾಗಿ ಅದು ಇಂದು ಕಮ್ಯುನಿಸಂಗೆ ಒಳಗಾಗುವಂತೆ ಮಾಡಿತೋ, ಅದೇ ಹೈಕಮ್ಯಾಂಡಿನ ಮಾತು ಕೇಳಿ ಈ ಎಸ್. ಆರ್. ಸಿ. ವರದಿಯನ್ನೊಪ್ಪಿದರೆ ಯಾವ ಕಮ್ಯುನಿಸಮ್ಮನ್ನು ಇಂಡಿಯಾ ದೇಶಕ್ಕೆ ಬರಬಾರದೆಂದು ಹೇಳುತ್ತಿದ್ದೇವೋ ಅದನ್ನೇ ಇನ್ನೂ ಬೇಗ ಬರುವಂತೆ ಮಾಡುತ್ತಿದ್ದೇವೆ ಅಷ್ಟೆ. ಆದ್ದರಿಂದ ಜಾತಿ—ಜಾತಿ ಎಂಬುದನ್ನೇ ಎತ್ತಿತೋರಿಸಿಕೊಡುತ್ತಿರುವ ಈ ಎಸ್. ಆರ್. ಸಿ. ವರದಿಯನ್ನು ಸುಟ್ಟು ಗಾಂಧಿಯವರ ತತ್ವಕ್ಕನುಗುಣವಾಗಿ ನಡೆಯಲು ಎಲ್ಲರೂ ಮನಸ್ಸು ಮಾಡಲೆಂದು ನಾನು ಕೇಳಿಕೊಳ್ಳುತ್ತೇನೆ. ಈ ರೀತಿಯಾಗಿ ಹಿಂಸೆಯಿಂದ ರಾಜ್ಯವನ್ನು ಕಟ್ಟುವ ಯೋಚನೆಯನ್ನು ದಯವಿಟ್ಟು ಬಿಡಿರಿ. ನಮ್ಮ ಮೈಸೂರು ಇದೇ ರೀತಿಯಲ್ಲೇ ಇನ್ನೂ ಕೆಲವು ದಿವಸ ಇರಲು ಅವಕಾಶಕೊಟ್ಟು ಯಾವಾಗ ಈ ಜನ ಪ್ರೀತಿಯಿಂದ ಅವರೊಡನೆ ಸೇರಲು ಬಯಸುತ್ತಾರೋ ಅವೊತ್ತು ಸಂತೋಷದಿಂದ ಸೇರುವಂತೆ ಮಾಡಿರಿ. ಆದ್ದರಿಂದ ಎರಡು ಕರ್ಣಾಟಕ ರಾಜ್ಯಗಳಾಗಲಿ ಈಗಿನ ಮೈಸೂರೇ ಒಂದು, ಮಿಕ್ಕ ಕರ್ಣಾಟಕ ಭಾಗಗಳು ಹಂಪೆಯಲ್ಲೋ ವಿಜಯನಗರದಲ್ಲೋ ಸ್ಥಾಪನೆಗೊಳ್ಳಲೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಇದುವರೆಗೂ ನನ್ನ ಮಾನ್ಯ ಸ್ನೇಹಿತರನೇಕರು ಮಾತನಾಡಿದ ಮಾತುಗಳನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅವರು ಹೇಳಿದ್ದನ್ನು ನಾನು ಅನುಮೋದಿಸುತ್ತೇನೆ. ಈ ಎಸ್. ಆರ್. ಸಿ. ವರದಿಯನ್ನು ನಾನು ನನಗೆ ತಿಳಿದಮಟ್ಟಿಗೆ ಓದಿದ್ದೇನೆ. ನನ್ನ ಮನಸ್ಸಿಗೆ ತಿಳಿದಂತೆ ಹೇಳುವುದಾದರೆ ಅದು ಸ್ವಾಗತಾರ್ಹವಾಗಿದೆ. ಒಬ್ಬೊಬ್ಬರ ದೃಷ್ಟಿಯಲ್ಲಿ ಏನೋ ಅಲ್ಪಸ್ವಲ್ಪ ದೋಷಗಳಿರಬಹುದು. ಆದರೂ ಇದರಲ್ಲಿ ಕರ್ನಾಟಕದ ಬಗ್ಗೆ ಕೆಲವು ಭಾಗಗಳು ಬಿಟ್ಟುಹೋಗಿದ್ದರೂ, ಈ ವರದಿಯನ್ನು ನಾನು ಶಿರಸಾವಹಿಸಿ ಒಪ್ಪಿಕೊಳ್ಳುತ್ತೇನೆ.

ಈಗ ಮಾನ್ಯ ಮಿತ್ರರು ಕೆಲವರು ಈ ರಿಪೋರ್ಟನ್ನು ತಯಾರುಮಾಡಿದವರ ದೃಷ್ಟಿ ಮತ್ತು ನಮ್ಮ ನಾಯಕರುಗಳ ಗುರಿಯೇನೆಂಬುದನ್ನು ಯೋಚನೆಮಾಡದೆ ಮಾತನಾಡಿದರು. ಕೇವಲ ಜಾತೀಯ ಭೂತ ತಾಂಡವಾಡುತ್ತಿದೆ ಅವರಲ್ಲಿ ! ಜಾತಿಯೆಲ್ಲಿ ? ಈ ವರದಿಯೆಲ್ಲಿ ? ನಾವೇನುಮಾಡುತ್ತಿದ್ದೇವೆ, ನಮ್ಮ ಗುರಿಯೇನೆಂಬುದೇ ಇಲ್ಲವಲ್ಲ! ಇವೊತ್ತು ಈ ವಿಚಾರವನ್ನು ಹೇಳಿಕೊಳ್ಳುವುದು ನಿಜವಾಗಿಯೂ ದುರದೃಷ್ಟ ! ಇಂಥವರನ್ನು ದೇಶಸೇವಕರೆಂದು ಹೇಳುತ್ತಾರೆಯೆ ? ವೀರಶೈವರು ವೀರಶೈವರೆಂದು ಬಹಳ ಭೀತಿಪಡುತ್ತಿದ್ದೀರಿ. ಈ ಸಂದರ್ಭದಲ್ಲಿ ಒಂದು ಮಾತು ನಾನು ಹೇಳಿದರೆ ಕೋಪಿಸಿಕೊಳ್ಳಬಹುದು. ವೀರಶೈವರ ಒಂದು ಮತವಾಗುತ್ತದೆ, ಅವರ ರಾಜ್ಯವಾಗುತ್ತದೆ ಎಂದು ಎಲ್ಲರ ಮನಸ್ಸಿನಲ್ಲೂ ಒಂದು ವಿಷಬೀಜವನ್ನು ಬಿತ್ತುತ್ತಿದ್ದೀರಲ್ಲಾ ; ನ್ಯಾಯವಾಗಿ ನೋಡಿದರೆ ತಾವುಗಳೆಲ್ಲರೂ ವೀರಶೈವಮತದವರಿಗೆ ಧನ್ಯವಾದಗಳನ್ನರ್ಪಿಸಬೇಕು. ಅವರು ಉಪಕಾರಸ್ಥರು. ನಿಜವಾಗಿಯೂ ಕರ್ಣಾಟಕವಾದರೆ ಲಿಂಗಾಯಿತ ಸಮಾಜಕ್ಕೆ ಧಕ್ಕೆಬೀಳುತ್ತದೆ. ಸ್ವಲ್ಪ ವಿಮರ್ಶನಾದೃಷ್ಟಿಯಿಂದ ಯೋಚನೆಮಾಡಿದರೆ ತಮಗೇ ಇದು ಅರ್ಥವಾಗುತ್ತದೆ. ವೀರಶೈವಮತ ಇಂದು ದೇಶಕ್ಕಾಗಿ ತ್ಯಾಗಮಾಡುತ್ತಿದೆ. ಅವರ ಸಹೃದಯಕ್ಕಾಗಿ, ಅವರ ನಿಸ್ಪೃಹ ದೇಶಸೇವೆಗಾಗಿ ಜನತೆ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಲಿಂಗಾಯಿತ ಸಮಾಜ ಇದುವರೆಗೂ ಯಾರಿಗೂ ಯಾವ ತೊಂದರೆಯನ್ನೂ ಕೊಟ್ಟಿಲ್ಲ. ಯಾವ ವಿಷಯದಲ್ಲೂ ಅವರದು ಅಭ್ಯಂತರವಿಲ್ಲ. ಈಗೇನೋ ನಮ್ಮ ಸಹೋದರರಿಬ್ಬರು ಮಂತ್ರಿಮಂಡಳದಲ್ಲಿದ್ದಾರೆ. ಮುಂದೆ ಅಖಂಡ ಕರ್ಣಾಟಕವಾದರೆ ಇದನ್ನೇ ಇನ್ನೆಷ್ಟು ಜನ ಹಂಚಿಕೊಳ್ಳಬೇಕಾಗುತ್ತದೆಂಬ ಪ್ರಶ್ನೆ ಹಾಕಿಕೊಳ್ಳಿ. ಆಗಲೂ ಲಿಂಗಾಯಿತರಿಗೆ ಒಂದು ಸ್ಥಾನ ಸಿಕ್ಕಬಹುದು, ಎರಡು ಸ್ಥಾನ ಒರಬಹುದು ಅಷ್ಟೆ. ಅದಕ್ಕೆ ಹೆಚ್ಚಿಗೆ ಕೊಟ್ಟರೆ ನೀವೇ ಮಟ್ಟುತ್ತೀರಿ ತಲೆಯಮೇಲೆ, ಇದನ್ನು ನೀವು ಯೋಚನೆಮಾಡುತ್ತಿಲ್ಲ, ಆದ್ದರಿಂದ ಯಾವ ದೃಷ್ಟಿಯಿಂದ ಅಖಂಡ ಕರ್ಣಾಟಕವಾಗಬೇಕೆಂಬುದನ್ನು ದಯವಿಟ್ಟು ಯೋಚನೆಮಾಡಿ. ಅದೊಂದನ್ನೂ ನೋಡದೆ ವೀರಶೈವ ರಾಜ್ಯವಾಗುತ್ತದೆ, ವೀರಶೈವ ಮತವನ್ನು ಕಟ್ಟುತ್ತಾರೆಂದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಇದಲ್ಲದೆ, ಹೊರಗೆ ಕೆಲವರು ಇನ್ನೂ ಒಂದು ಮಾತು ಹೇಳುತ್ತಿರುವುದನ್ನು ನಾನು ನೊಂದು ಕೇಳುತ್ತಿದ್ದೇನೆ. 'ಇನ್ನೇನಪ್ಪಾ ಎಲ್ಲರೂ ಒಂದು ಕಲ್ಲುಕಟ್ಟಿಕೊಳ್ಳಿ' ಎಂದು ಕೆಲವರು ಹೇಳುತ್ತಿದ್ದಾರೆ. ಅದೇನು 'ಕಲ್ಲುಕಟ್ಟಿಕೊಳ್ಳುವುದು' ಅಷ್ಟು ಸುಲಭವಾದದ್ದಲ್ಲ. ಅದು 5–10 ವರ್ಷ ತಪಸ್ಸುಮಾಡಿ ಶ್ರದ್ಧಾಭಕ್ತಿಕೂಡಿ ಮನಸ್ಸು ಪರಿಪಕ್ವವಾದವನು, ಯೋಗ್ಯನು ಎಂದು ಸ್ವಾಮಿಗಳಿಗೆ ಮನಸ್ಸಿಗೆ ಬಂದರೆ ಅವರು ಅನುಮತಿಕೊಟ್ಟರೆ ಲಿಂಗವನ್ನು ಕಟ್ಟಬಹುದು ಅಷ್ಟೆ. ಅದಕ್ಕೊಂದು ಬೇರೆ ಮಾರ್ಗವಿದೆ, ಬೇರೆ ಸ್ಥಾನವಿದೆ ಅಂಥದನ್ನು ಮರೆತು ಇಷ್ಟು ಸುಲಭವಾಗಿ ಕಲ್ಲುಕಟ್ಟಿಕೊಳ್ಳಿ ಎನ್ನುವುದಕ್ಕೆ ಅದು ದಾರಿಯಲ್ಲಿ ಬಿದ್ದಿದ್ದಲ್ಲ. ಯಾವ ಮನುಷ್ಯನು ವೀರಶೈವ ಮತವೇ ಮೋಕ್ಷಕ್ಕೆ ಸರಿಯಾದ ಮಾರ್ಗವೆಂದು ತಿಳಿದುಕೊಂಡು ತನ್ನನ್ನು ತಾನು ಅರಿತುಕೊಂಡು ಹಣ್ಣಾಗಿ ಬರುತ್ತಾನೋ ಅಂಥವನಿಗೆ ಕಟ್ಟುತ್ತಾರೆ ಅಷ್ಟೆ. ಅದು ಬಿಟ್ಟು ಪಾದರಿಗಳಂತೆ, ಮುಸಲ್ಮಾನರಂತೆ ಬಂದವರಿಗೆಲ್ಲಾ ಲಿಂಗಕಟ್ಟುತ್ತಾರೆಂದರೆ ನಾನದನ್ನು ಒಪ್ಪುವುದಿಲ್ಲ.

ಅದರೆ ಮುಖ್ಯವಾಗಿ ನಮ್ಮ ಮುಂದಿರುವ ಪ್ರಶ್ನೆಯೇನು ? ನಾವು ಯೋಚನೆಮಾಡುತ್ತಿರುವ ರೀತಿಯೇನು ? ಇವೊತ್ತು ನಾವು ಯೋಚನೆಮಾಡಬೇಕಾಗಿರುವ ಈ ರಿಪೋರ್ಟನ್ನು ಬಿಟ್ಟು ನಾವು ಯಾವ ಮಟ್ಟಕ್ಕಿಳಿದಿದ್ದೇವೆಂಬುದನ್ನು ಯೋಚನೆಮಾಡಿ. ಯಾರಿಂದ ಈ ರಿಪೋರ್ಟ್ ನಮ್ಮ ಮುಂದೆ ಬಂದಿದೆ? ಅಲ್ಲಿದ್ದವರೆಲ್ಲರೂ ದೇಶಕ್ಕಾಗಿ ದುಡಿದಿರುವವರೇ. ಒಬ್ಬರು ಒಂದು ರೀತಿಯಲ್ಲಿ ದುಡಿದಿರಬಹುದು, ಇನ್ನೊಬ್ಬರು ಇನ್ನೊಂದು ರೀತಿಯಲ್ಲಿ ದುಡಿದಿರಬಹುದು ಅಷ್ಟೆ. ಆದ್ದರಿಂದ ಏನಾದರೂ ಸ್ವಲ್ಪ ದೋಷಗಳಿದ್ದರೆ ಯಾವ ರೀತಿ ಅದನ್ನು ಸರಿಪಡಿಸಿಕೊಳ್ಳಬಹುದೆಂಬುದನ್ನು ಯೋಚನೆಮಾಡಿ ಕೇಂದ್ರದಿಂದ ಇವೊತ್ತು ನಮಗೆ ಆರ್ಡರ್‌ಮಾಡುವವರೂ ಸಹ ನಮ್ಮ ನಾಯಕರೇ ಅಲ್ಲವೆ ? ನಾವು ಅವರಿಗೆ ದೊಡ್ಡ ಸ್ಥಾನವನ್ನು ಕೊಟ್ಟು ಕುಳ್ಳಿರಿಸಿರು

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ವಾಗ ಅವರೇನಾದರೂ ಇಡೀ ಹಿಂದೂಸ್ಥಾನಕ್ಕೆ ಒಂದು ಆರ್ಡರ್ ಕೊಟ್ಟರೆ ಅದಕ್ಕೆ ಎಲ್ಲರೂ ತಥಾಸ್ತು ಎಂದು ತಲೆಬಾಗಬೇಕು. ನಿಜವಾದ ದೇಶಭಕ್ತರು ಅವರು. ಅವರು ಮೈಸೂರಿಗೇ ಒಂದು ಹೊರಗಡೆಗೇ ಒಂದು ವರದಿಯನ್ನು ತಯಾರುಮಾಡಿಲ್ಲ. ಇಡೀ ಹಿಂದೂಸ್ಥಾನದ ದೃಷ್ಟಿಯಿಂದ ಒಂದು ರಿಪೋರ್ಟನ್ನು ತಯಾರು ಮಾಡಿದ್ದಾರೆ. ಅಂಥಾದ್ದನ್ನು ಭಕ್ತಿಯಿಂದ ಯೋಚನೆ ಮಾಡಿ ಅಲ್ಪಸ್ವಲ್ಪ ತಪ್ಪುಗಳಿದ್ದರೆ ತೋರಿಸಿ ಸರಿಪಡಿಸಿಕೊಳ್ಳಿ ಎಂದು ಹೇಳುವುದನ್ನು ಬಿಟ್ಟು ಜಾತಿಯ ವಿಷಯಗಳನ್ನೆತ್ತುವುದೂ, ಅವರು ಅನ್ಯಾಯಮಾಡಿದ್ದಾರೆಂದು ಹೇಳುವುದೂ ಸರಿಯಲ್ಲ. ಇದನ್ನು ನೋಡಿದವರು ನಗುವುದಿಲ್ಲವೆ? ಇದು ನಮಗೆ ತರವಲ್ಲ. ನಾವೆಲ್ಲಾ ಸಹೋದರರಾಗಿ ಉಳಿಯಬೇಕು. ಬಾಳಬೇಕು. ಇವೊತ್ತು ಜಗಳವಾದರೂ ನಾಳೆ ನಾವು ಒಂದಾಗಬೇಕು. ನಾವೂ ಎಲ್ಲಿಯೂ ಹೋಗುವುದಿಲ್ಲ, ಅವರೂ ಎಲ್ಲಿಯೂ ಹೋಗುವುದಿಲ್ಲ. ಸಿಟ್ಟುಬಂದಾಗ ಒಂದೇಟು ಕೊಡಬಹುದು ಅಷ್ಟೇ. ಮತ್ತೆ ಒಂದಾಗಲೇಬೇಕು, ಅಣ್ಣತಮ್ಮಂದಿರೆಂದು ಹೇಳಿಕೊಂಡು ಹಿಂದೂಸ್ಥಾನವನ್ನು ನಾವು ಕಟ್ಟಬೇಕೆಂದಿರುವಾಗ ಒಂದೇ ಮನೆಯಲ್ಲಿ ಸಹೋದರರಾಗಿದ್ದವರು ಈ ರೀತಿ ಮುಖ ಅತ್ತ ತಿರುಗಿಸಿಕೊಂಡು ಮಾತನಾಡುವುದನ್ನು ನಾವು ಇನ್ನಾದರೂ ಮರೆಯಬೇಕು. ಆ ರೀತಿ ಮಾಡುವುದು ಮಹಾ ಪಾಪ. ಭಗವಂತನು ಎಲ್ಲರಿಗೂ ಒಳ್ಳೆಯ ಬುದ್ಧಿಯನ್ನುಕೊಟ್ಟು ದೇಶದ ಹಿತದೃಷ್ಟಿಯಿಂದ ಈ ವೈಷಮ್ಯಗಳನ್ನು ಜನರು ಮರೆಯಲೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಕರ್ಣಾಟಕದಿಂದ ಬರುವವರು ಭಿಕ್ಷುಕರಾಗಿ ಇಲ್ಲಿಗೆ ಬರುತ್ತಿಲ್ಲ. ಅವರೂ ಚೆನ್ನಾಗಿ ಬದುಕಿ ಬಾಳಿದವರು. ಹಿಂದೆಲ್ಲಾ ಅವರನ್ನು ನೆರೆಹೊರೆಯ ಸಹೋದರರೆಂದು ಹೇಳಿಕೊಂಡು ಬೇಕಾದಷ್ಟು ಸಹಕಾರ ನೀಡಿದವರನ್ನು ಇವೊತ್ತು, ಅವೊತ್ತಿನ ಕಾಲವೇ ಬೇರೆಯಿತ್ತು, ಇವೊತ್ತಿನ ಕಾಲವೇ ಬೇರೆ ರೀತಿಯಿದೆಯೆಂದು ಮಾತನಾಡುವುದು ಧರ್ಮವಲ್ಲ. ಸ್ವಾತಂತ್ರ್ಯ ಬಂದಿತು, ನಾವು ನಾಲ್ಕುಮಂದಿ ಮನೆ ಸೇರಿದೆವೆಂದು ಹೇಳಿ ಮಿಕ್ಕವರು ಬಂದರೆ ಬಾಗಿಲು ಹಾಕಬೇಡಿ.

ಇದೇನೇ ನಮ್ಮ ಸಂಸ್ಕೃತಿ? ಹೀಗೆ ಆಡತಕ್ಕದ್ದೇನೇನು ನಮ್ಮ ವೈಶಿಷ್ಟ್ಯ? ನಾವು ಇಡೀ ಭರತಖಂಡದಲ್ಲೆಲ್ಲಾ ನಮ್ಮ ಮೈಸೂರು ಮಾದರಿ ಸಂಸ್ಥಾನ ಎಂದು ಏನು ಹೇಳಿಕೊಳ್ಳುತ್ತಿದ್ದೆವೋ ಅಂಥ ಮಾದರಿಸಂಸ್ಥಾನಕ್ಕೆ ಈ ದಿವಸ ನಾವುಗಳು ಇಲ್ಲಿ ಹೀಗೆ ವರ್ತಿಸುತ್ತಿರುವುದು ಖಂಡಿತ ತರವಲ್ಲ; ನಮಗಿದು ಸಲ್ಲತಕ್ಕದ್ದಲ್ಲ ಎಂದು ನಾನು ತಮ್ಮೆಲ್ಲರಲ್ಲೂ ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಈ ವರದಿಯ ವಿಚಾರದಲ್ಲಿ ನಮ್ಮಲ್ಲಿ ನಡೆಯುತ್ತಿರುವಷ್ಟು ಅಧ್ವಾನ ಭರತಖಂಡದಲ್ಲೇ ಬೇರೆ ಇನ್ನಾವ ಪ್ರಾಂತ್ಯದಲ್ಲಿಯೂ ಆಗಿರಲಾರದೆಂದು ನಾನು ಭಾವಿಸುತ್ತೇನೆ. ನಮ್ಮ ಮೈಸೂರು ದೇಶ ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ಚರ್ಚೆಯಲ್ಲಿ ಇಷ್ಟೊಂದು ಕೆಳಮಟ್ಟದ ಕೀಳುದರ್ಜೆಗೆ ಇಳಿಯುತ್ತದೆಂದು ನಾನು ಕನಸು-ಮನಸಿನಲ್ಲೂ ಸಹ ಭಾವಿಸಿರಲಿಲ್ಲ. ಆದುದರಿಂದ ಇಂಥ ಸರಸವಲ್ಲದ ಕೀಳುದರ್ಜೆಯ ವರ್ತನೆಯನ್ನು ಇನ್ನು ಮುಂದುವರಿಸುವುದು ಖಂಡಿತ ಯಾರಿಗೂ ಒಳ್ಳೆಯದಲ್ಲ; ಇದನ್ನು ಖಂಡಿತ ಕೈಬಿಟ್ಟುಬಿಡಿ ಎಂದು ನಾನು ಕೈಜೋಡಿಸಿ ತಮ್ಮೆಲ್ಲರನ್ನೂ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ದೇಶದಲ್ಲಿ ಇಂಥ ಒಂದು ದುರ್ಭಾವನೆಗೆ ಖಂಡಿತ ಅವಕಾಶ ಕೊಡಬೇಡಿ, ನೀವು ಯಾವ ರೀತಿಯಲ್ಲೂ ಭಯಬೀಳಬೇಡಿ, ಅಂಥ ಭಯ-ಭ್ರಾಂತಿಗಳಿಗೆ ಯಾವತ್ತೂ ಅವಕಾಶವಿಲ್ಲ. ಅವುಗಳನ್ನೆಲ್ಲಾ ಬಿಟ್ಟುಬಿಡಿ ಎಂದು ನಾನು ತಮ್ಮೆಲ್ಲರಿಗೂ ಕೈಜೋಡಿಸಿ ಬೇಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಬಸವೇಶ್ವರನು ಎಲ್ಲರನ್ನೂ ಉದ್ಧಾರಮಾಡಿದರೋ ಅಥವಾ ಲಿಂಗಾಯಿತರನ್ನೇ ಉದ್ಧಾರಮಾಡಿದರೋ?

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅವರು ವೀರಶೈವರೊಬ್ಬರನ್ನೇ ಉದ್ಧಾರಮಾಡಲಿಲ್ಲ. ಅವರು ಇಡೀ ಜಗತ್ತನ್ನೇ ಉದ್ಧಾರಮಾಡಿದ್ದಾರೆ. ಅವರು ಹೇಳಿದಂಥ ಉಪದೇಶಗಳು ಕೇವಲ ವೀರಶೈವರಿಗೊಬ್ಬರಿಗೇ ಅಲ್ಲ. ಅವುಗಳನ್ನು ಇಡೀ ಜಗತ್ತಿಗೇ ಅನುಗ್ರಹಿಸಿದ್ದಾರೆ. ಅವರು ಹುಟ್ಟಿದುದು ಬ್ರಾಹ್ಮಣ ಜಾತಿಯಾದರೂ ಎಂದೂ ಅವರು ಜಾತಿಮತಗಳ ಭೇದವನ್ನೆಣಿಸಿದವರಲ್ಲ. ಆದುದರಿಂದಲೇ ಅವರು ಹರಿಜನರ ಹರಳಯ್ಯನಿಗೆ ಲಿಂಗಧಾರಣೆ ಮಾಡಿದರು. ಆದಕಾರಣ ಅವರ ವಿಚಾರದಲ್ಲಿ ತಾವು ಹಾಗೆಲ್ಲಾ ಅಪಾರ್ಥಮಾಡಿಕೊಳ್ಳಬಾರದು. ಇನ್ನಾದರೂ ನಾವು ಈ ಭಿನ್ನಭಾವನೆಗಳನ್ನಳಿದು ಎಲ್ಲರೂ ಅಣ್ಣತಮ್ಮಂದಿರಾಗಿ, ಸರಿಸಮಾನರಾಗಿ, ಒಂದು ನಾಡಿನವರಾಗಿ ಸುಖದಿಂದ ಬಾಳೋಣ, ಬದುಕೋಣ. ನಾವುನಾವುಗಳೇ ನಮ್ಮನಮ್ಮ ಜನರಲ್ಲೇ ಒಡಕನ್ನು ಹುಟ್ಟಿಸಿ ನಾಡಿನ ಅವನತಿಗೂ ಮತ್ತು ಅನ್ಯರಾಷ್ಟ್ರಗಳ ಎದುರಿನಲ್ಲಿ ನಾಚಿಕೆಗೇಡಾಗುವುದಕ್ಕೂ ಖಂಡಿತ ಅವಕಾಶಕೊಡಬಾರದು. ಆರೀತಿ ಭಾವನೆಗಳನ್ನು ಬೆಳೆಸುವುದು ಬೇಡ. ಇಲ್ಲಿಯವರೆಗೂ ಆಡಿದ್ದು ಆಗಿಹೋಯಿತು. ಇನ್ನಾದರೂ ಅದೆಲ್ಲವನ್ನೂ ಮರೆತು ಅನ್ಯೋನ್ಯದಿಂದ ಎಲ್ಲರೂ ದೇಶದ ಹಿತಕ್ಕಾಗಿ ಶ್ರಮಿಸೋಣ. ನಾವೇನೋ ಈಗ ಈ ಸಭೆಯಲ್ಲಿ ಕುಳಿತು ಭಾಷಣಮಾಡುವಾಗ ನಮ್ಮ ಮನಸ್ಸಿಗೆ ತೋಚಿದಹಾಗೆ ಮಾತನಾಡಿಬಿಡುತ್ತೇವೆ, ಆದರೆ ಕೊನೆಯಲ್ಲಿ ನಾವೆಲ್ಲರೂ ಆ ಮಾತುಗಳನ್ನು ಮರೆತು ಒಂದೇ ಆಗಿ ಇಲ್ಲಿಂದ ಹೊರಡುತ್ತೇವೆ. ಆದರೆ ಈ ನಮ್ಮ ಭಾಷಣಗಳ ವಿಚಾರವಾಗಿ ಹೊರಗಡೆಯಿರತಕ್ಕ ತಿಳುವಳಿಕೆ ಸಾಲದ ಮಕ್ಕಳೂ ಶಾಲಾ ಬಾಲಕರುಗಳೂ ತಮ್ಮ ತಮ್ಮ ಮನಸ್ಸಿಗೆ ತೋಚಿದಂತೆ ಹೇಳಿಕೊಂಡು ದೇಶದಲ್ಲಿ ಕಹಿ ವಾತಾವರಣವನ್ನುಂಟುಮಾಡಲು ಹವಣಿಸುತ್ತಾರೆ. ನಾವಿಲ್ಲಿ ಯಾರಾರು ಎಷ್ಟೆಷ್ಟು ಮಾತನಾಡಿದರೂ ಕಡೆಯಲ್ಲಿ ನಾವೆಲ್ಲರೂ ಇಲ್ಲಿ ಸ್ನೇಹಿತರಾಗಿಯೆ ಉಳಿದು ಹೊರಗಿನ ವಾತಾವರಣ ಮಾತ್ರ ಕೆಡುತ್ತದೆ. ನಾವು ನಿಮ್ಮ ಮನೆಗೆ ಬಂದು ಊಟಮಾಡುತ್ತೇವೆ. ನೀವು ನಮ್ಮ ಮನೆಗೂ ಬಂದು ಊಟಮಾಡುತ್ತೀರಿ. ಆದರೆ ನಮ್ಮ ನಿಮ್ಮ ವಿಚಾರದಲ್ಲಿ ಏನೂ ತೊಂದರೆಯಿಲ್ಲ. ಆದರೆ ನಾವು ಹಿಂದುಮುಂದು ನೋಡದೆ ಆಡತಕ್ಕ ಮಾತುಗಳಿಂದ ಹೊರಗಡೆ ಅನೇಕ ಅನರ್ಥಗಳುಂಟಾಗಲು ಅವಕಾಶವಾಗುತ್ತದೆ. ಅರಿಯದ ಆ ಬಾಲಕರುಗಳಿಂದ ಅನೇಕ ದುಷ್ಕೃತ್ಯಗಳುಂಟಾಗಬಹುದು. ಅಂಥಾದ್ದಕ್ಕೆಲ್ಲಾ ಖಂಡಿತ ಅವಕಾಶಮಾಡಿಕೊಡಬೇಡಿ. ನಮ್ಮಲ್ಲಿ ಏನಾದರೂ ಅಂಥ ಲೋಪದೋಷಗಳಿದ್ದರೆ ನಾವುಗಳೇ ಅದನ್ನು ಕುಳಿತುಕೊಂಡು ಸಮಾಧಾನದಿಂದ ತಿದ್ದಿಕೊಳ್ಳೋಣ. ಮುಂದೆ ರಚಿತವಾಗಲಿರುವ ಅಖಂಡ ಕರ್ಣಾಟಕದಲ್ಲಿ ವೀರಶೈವರದೇ ಮೆಜಾರಿಟಿ ಬರಬಹುದು; ಇಲ್ಲವೇ ಆದಿಕರ್ಣಾಟಕರದು ಬರಬಹುದು. ಹಾಗೇ ಯಾವುದೋ ಒಂದು ಕೋಮು ಮೆಜಾರಿಟಿಗೆ ಬರುತ್ತದೆ, ನಮ್ಮ ಕುಂಚಿಟಿಗರ ಜಾತಿ ಮೆಜಾರಿಟಿಗೆ ಬರುವುದಿಲ್ಲ; ಅದಕ್ಕಾಗಿ ನಮಗೊಂದು ಭಯವುಂಟಾಗಿವೆ ಎಂದು ತಾವು ಹೇಳುವುದಕ್ಕೆ ಅಂಥ ಅವಕಾಶಗಳೊಂದೂ ಇಲ್ಲ. ಇಲ್ಲಿಯವರೆಗೂ ಯಾವುದೂ ಅಂಥಾದ್ದು ನಡೆದಿಲ್ಲ. ಮುಂದೆ ನಡೆಯುವುದಕ್ಕೆ ಅವಕಾಶವೂ ಇಲ್ಲ. ಆದುದರಿಂದ ತಾವು ಹೇಳುತ್ತಿರುವಂಥ ಭಯಕ್ಕೆ

ಎಲ್ಲಿಯೂ ಅವಕಾಶವಿಲ್ಲ. ಇಂದು ದೇಶದಲ್ಲಿ ಪ್ರಜಾಪ್ರಭುತ್ವದ ಅಧಿಕಾರವಿದೆ. ನಾವೆಲ್ಲರೂ ಈ ದಿವಸ ಈ ಸಭೆಗೆ ಜನರಿಂದ ಓಟುಗಳನ್ನು ಪಡೆದುಕೊಂಡು ಬಂದಂಥವರಾಗಿದ್ದೇವೆ. ನಾವು ನಮಗೆ ಓಟು ಕೊಟ್ಟು ಕಳುಹಿಸಿದಂಥ ಜನರಿಗೆ ವಿರೋಧವಾಗಿ ನಡೆದಲ್ಲಿ ನಾವು ಇಲ್ಲ ರಾಜ್ಯಭಾರಮಾಡುವುದಕ್ಕೆ ಸಾಧ್ಯವುಂಟೆ? ಅಂಥ ಅಕ್ರಮ ನಡವಳಿಕೆಗಳಿಗೆ ಈ ಪ್ರಜಾಪ್ರಭುತ್ವದಲ್ಲಿ ಅವಕಾಶವೇ ಇಲ್ಲದಿರುವಾಗ ತಾವೇಕೆ ಇಷ್ಟೊಂದು ಆಲೋಚನೆ ಮಾಡಬೇಕು? ಇನ್ನಾದರೂ ತಾವು ಅಂಥ ಅನುಮಾನಗಳನ್ನು ತೊರೆದು ತೆರೆದ ಮನಸ್ಸಿನಿಂದ ಬನ್ನಿ. ಎಲ್ಲರೂ ಬಂದು ತಾಯಿಮಕ್ಕಳಂತೆ ಬಾಳಿ ಬದುಕೋಣ.

ಇನ್ನು ನಮ್ಮ ಮಹಾರಾಜರವರ ವಿಚಾರದಲ್ಲಿ ಬಹಳ ಆಕ್ಷೇಪವಾದ ಮಾತುಗಳನ್ನು ಬಳಸುತ್ತಿದ್ದಾರೆ, ಅವರೊಬ್ಬರು ದೊಡ್ಡ ತಪಸ್ವಿಗಳಿದ್ದಹಾಗೆ. ಅವರ ವಿಚಾರದಲ್ಲಿ ಅಪಶ್ರುತಿಮಾಡುವುದು ಬೇಡ. ಈ ದಿವಸ ಅವರಿಗೆ ಇರತಕ್ಕ "ಮಹಾರಾಜ" ಅನ್ನುವ ಒಂದು ಹೆಸರು ಹೋದಮಾತ್ರಕ್ಕೆ ಏನಾಯಿತು? ಅದಾದರೂ ಈ ಪ್ರಜಾರಾಜ್ಯದ ಸಂಪ್ರದಾಯಕ್ಕೆ ಅನುಗುಣವಾಗಿರತಕ್ಕದ್ದೇ ಆಗಿದೆ. ಆದರೆ ಅವರಿಗೆ ಇಲ್ಲಿಯತನಕ ಇದ್ದ ಹೆಸರು ಬದಲಾವಣೆಯಾದ ಮಾತ್ರಕ್ಕೆ ಏನಾಯಿತು? ಅವರಿಗೆ ಇರತಕ್ಕಂಥ ಸ್ಥಾನಮಾನಗಳೂ, ಸಂಬಳ ಸಂಭಾವನೆಗಳೂ, ಎಲ್ಲವೂ ಇಲ್ಲಿಯವರೆಗೂ ಇದ್ದಹಾಗೆಯೇ ಇನ್ನು ಮುಂದೆಯೂ ಇರುತ್ತವೆ, ಅವರು ನಮಗೆ ಹಿರಿಯರಾಗಿ ಇದ್ದೇ ಇರುತ್ತಾರೆ. ಅವರು ನಮಗೆ ಮಹಾರಾಜರಾಗಿರದಿದ್ದರೆ ಗೌರ್ನರ್ ಆಗಿರುತ್ತಾರೆ. ಅವರಿಗೆ ಸ್ಥಾನವಿಲ್ಲ ಅನ್ನುವಹಾಗಿಲ್ಲ. ಆದಕಾರಣ ಯಾರೂ ಅನವಶ್ಯಕವಾಗಿ ಅವರ ಹೆಸರನ್ನು ಬಳಸುವುದು ಬೇಡ. ಅವರ ಹೆಸರನ್ನು ನಾವು ಇಂದು ಕೈಬಿಡುತ್ತಿಲ್ಲ. ಎಂದು ನಾವು ನಮ್ಮ ಹೊಸ ಕಾನ್ಸ್ಟಿಟ್ಯೂಷನನ್ನು ರಚಿಸಿದೆವೋ ಅಂದೇ ಇವರೆಲ್ಲರನ್ನೂ ಕೈಬಿಟ್ಟಿದ್ದೇವೆ. ಹೀಗೆಲ್ಲಾ ಮಾತನಾಡಿ ದಾಕ್ಷಿಣ್ಯಕ್ಕೆ ನಮ್ಮ ಮಹಾರಾಜರ ಮೇಲೆ ಮತ್ತು ನಮ್ಮ ಮೈಸೂರಿನ ಮೇಲೆ ನಿಮಗೇ ಒಂದು ಹೆಚ್ಚಿನ ಅಭಿಮಾನವಿರುವುದು–ನಮಗೆ ಆ ಅಭಿಮಾನವಿಲ್ಲ ಎಂದು ತಾವು ಏನಾದರೂ ಭಾವಿಸಿದ್ದರೆ ಆ ಭಾವನೆ ತಪ್ಪಾಗುತ್ತದೆ. ತಮಗೆಲ್ಲರಿಗೂ ಅವರ ವಿಷಯದಲ್ಲಿ ಎಷ್ಟು ಗೌರವವಿದೆಯೋ ಅದಕ್ಕೂ ಹೆಚ್ಚಿನ ಗೌರವ ಅವರಲ್ಲಿ ನಮಗೆ ಇರುತ್ತದೆ. ಆದಕಾರಣ ತಾವುಗಳಾರೂ ವಿನಾಕಾರಣ ಸಂಶಯಪಡುವುದನ್ನು ಬಿಡಿ. ಇನ್ನಾದರೂ ನಾವೆಲ್ಲರೂ ಒಂದಾಗಿ ಸುಖವಾಗಿ ಬಾಳೋಣ; ದೇಶವನ್ನು ಅಭಿವೃದ್ಧಿಗೊಳಿಸೋಣ ಎಂದು ತಮ್ಮೆಲ್ಲರಲ್ಲೂ ಪ್ರಾರ್ಥನೆ ಮಾಡಿಕೊಂಡು ತಾವೆಲ್ಲರೂ ಈಗ ಸಭೆಯ ಮುಂದೆ ಮಂಡಿಸಿರತಕ್ಕ ಈ ಎಸ್.ಆರ್.ಸಿ. ವರದಿಗೆ ತಮ್ಮೆಲ್ಲರ ಒಮ್ಮತ ಬೆಂಬಲವನ್ನು ನೀಡಿ—ಆ ಬಳ್ಳಾರಿ ಜಿಲ್ಲೆ ಸಂಪೂರ್ಣವಾಗಿ ಕರ್ಣಾಟಕದಲ್ಲೇ ಉಳಿಯುವಂತೆ ಇದನ್ನು ತಿದ್ದಿ ಸರಿಪಡಿಸುವಂತೆ ಪ್ರಾರ್ಥಿಸಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಪೂರೈಸುತ್ತೇನೆ.

ಶ್ರೀ ಎಚ್.ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ–ಹೆಗ್ಗಡದೇವನಕೋಟೆ).—ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಈಗಾಗಲೇ ಚರ್ಚೆಯಾಗಿರತಕ್ಕಂಥ ಆ ಶೇಷಾದ್ರಿ ವರದಿಯ ಸಂಬಂಧದಲ್ಲಿ ಮಾತನಾಡುವಾಗ ಏನು ಹೇಳಿದ್ದೆನೋ ಅದನ್ನೇ ಈಗ ಮತ್ತೆ ಪುನಃ ಸಮರ್ಥನೆಮಾಡಬೇಕಾದಂಥ ಒಂದು ಸನ್ನಿವೇಶ ಬಂದೊದಗಿದೆ.

ಸ್ವಾಮಿ, ಈ ರಾಜ್ಯಗಳು ಪುನರ್ವಿಂಗಡಣೆಯಾಗಬೇಕು ಅನ್ನುವಂಥ ಒಂದು ವಿಚಾರ ಈ ಹೊತ್ತೇನೂ ಹೊಸದಾಗಿ ಹುಟ್ಟಿಬಂದಂಥ ಪ್ರಶ್ನೆಯೇನೂ ಅಲ್ಲ. ಆ ಎಸ್.ಆರ್.ಸಿ. ವರದಿಯಲ್ಲೇ ಈಗ ನಮೂದಿಸಿರುವಂತೆ ಈ ವಿಚಾರ ಭರತಖಂಡದಲ್ಲಿ ಬ್ರಿಟಿಷರು ಎಂದು ರಾಜ್ಯಭಾರಮಾಡುವುದಕ್ಕೆ ಪ್ರಾರಂಭಮಾಡಿದರೋ ಅಂದಿನಿಂದಲೂ ಒಂದಲ್ಲ ಒಂದು ರೂಪದಲ್ಲಿ ಈ ಪ್ರಶ್ನೆಯನ್ನು ಪ್ರಸ್ತಾಪಿಸುತ್ತಲೇ ಬಂದಿದ್ದಾರೆ. ಆದರೆ ಆಗಿನಿಂದಲೂ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಒಂದು ಸುಗಮವಾದ ಅವಕಾಶ ಸಿಕ್ಕದಂತೆ ಕೆಲವು ಸನ್ನಿವೇಶಗಳೂ ಸಂದರ್ಭಗಳೂ ಅಡ್ಡಿಬಂದುದರಿಂದ ಈ ಪ್ರಶ್ನೆಯನ್ನು ಹೀಗೆ ಮುಂದಕ್ಕೆ ತಳ್ಳಿಕೊಂಡು ಬರಲಾಯಿತು. ಆದರೆ ಎಂದೇ ಆಗಲಿ ಯಾರೇ ಆಗಲಿ ಈ ಪ್ರಾಂತ್ಯಗಳು ಪುನರ್ವಿಂಗಡಣೆ ಆಗಬಾರದು, ಈಗಿರುವುದೇ ಸರಿ ಎಂದು ಎಲ್ಲಿಯೂ ಹೇಳಿರುವುದಿಲ್ಲ. ಆ ರೀತಿ ಅಭಿಪ್ರಾಯವನ್ನು ಯಾರೂ ವ್ಯಕ್ತಪಡಿಸಿಲ್ಲ. ಈ ಹಿಂದೆ ಮಾತನಾಡಿದ ಮಹನೀಯರು ಯಾರಾಗಿದ್ದಾರೋ ಮತ್ತು ಈ ದಿವಸ ಯಾರು ಈ ಪ್ರಾಂತ್ಯಗಳ ಪುನರ್ವಿಂಗಡಣೆ ಆಗಬಾರದೆಂದು ವಿರೋಧಿಸುತ್ತಿದ್ದಾರೋ ಅಂಥ ಮಹನೀಯರೇ ಈ ಹಿಂದೆ ಅನೇಕ ವೇದಿಕೆಗಳ ಮೇಲೆ ನಿಂತು ಅನೇಕ ಸಂದರ್ಭಗಳಲ್ಲಿ ಹಾಗೂ ಬಹಳ ಜವಾಬ್ದಾರಿಯುತವಾಗಿ ಭಾಷಣಗಳನ್ನು ಮಾಡುತ್ತಿದ್ದಾಗ ಈ ರಾಜ್ಯಗಳು ಪುನರ್ವ್ಯವಸ್ಥೆಗೊಳ್ಳಬೇಕು. ಇವು ಭಾಷಾವಾರು ತತ್ವದ ಮೇಲೆ ವಿಭಜನೆಯಾಗಬೇಕು, ಅದು ತೀರಾ ಅನಿವಾರ್ಯ ಎಂದು ಹೀಗೆಲ್ಲಾ ಭಾಷಣಗಳನ್ನು ಮಾಡಿ ದೇಶದಲ್ಲಿದ್ದ ಜನಗಳಿಗೆಲ್ಲಾ ಇದರ ಹುಚ್ಚನ್ನು ಹಿಡಿಸಿದಂಥ ಆ ಮಹನೀಯರೇ ಈ ದಿವಸ ನಮಗೆ ಈ ಭಾಷಾವಾರು ಪ್ರಾಂತ್ಯಗಳು ಬೇಡ, ಇದು ಸರಿಯಲ್ಲ ಎಂದು ಹೇಳುತ್ತಿರುವುದನ್ನು ನೋಡಿದರೆ ನನಗಂತೂ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಈ ಮಹನೀಯರುಗಳೆಲ್ಲಾ ಘಂಟಾಘೋಷವಾಗಿ ಈ ಭಾಷಾವಾರು ಪ್ರಾಂತ್ಯಗಳು ರಚನೆ ಆಗಲೇಬೇಕೆಂದು 1947ರ ವರೆಗೂ ಕೇಳುತ್ತಲೇ ಬಂದು ಈ ದಿವಸ ಏಕಾಏಕಿ ಆ ಅಭಿಪ್ರಾಯವನ್ನು ಬದಲಾಯಿಸಿಕೊಂಡು ತಾವು ಹಿಂದೆ ಹೇಳಿದ್ದನ್ನೆಲ್ಲಾ ಮರೆತು ಈ ದಿವಸ ಅವರು ಏನು ಒಂದು ಹೊಸದಾದ ಅಭಿಪ್ರಾಯ ಸೂಚಿಸಿದ್ದಾರೋ ಅದಕ್ಕೆ ನಮ್ಮೆಲ್ಲರನ್ನೂ ಮನ್ನಣೆ ಕೊಡಿ ಎಂದು ಹೇಳಿ ನಮ್ಮೆಲ್ಲರನ್ನೂ ಈಹೊತ್ತು ಅವರ ಒಂದು ಹೊಸದಾದ ದಾಂಗೆ ಎಳೆದುಕೊಳ್ಳಲು ಪ್ರಾರಂಭಮಾಡುತ್ತಿದ್ದಾರೆ. ಅಭಿಪ್ರಾಯಗಳನ್ನು ಬದಲಾವಣೆ ಮಾಡಿಕೊಳ್ಳತಕ್ಕ ಹಕ್ಕು ಎಲ್ಲರಿಗೂ ಇದೆ. ಆದರೆ ಈ ರೀತಿ ಈ ಮಹನೀಯರುಗಳು ತಮ್ಮ ಹಿಂದಿನ ಅಭಿಪ್ರಾಯಗಳನ್ನೆಲ್ಲಾ ಏಕ್‌ದಂ ಇಷ್ಟು ಬೇಗ ಬದಲಾಯಿಸುವುದಕ್ಕೆ ಕಾರಣಗಳೇನು, ಹೀಗೇಕೆ ಇವರು ಬದಲಾವಣೆ ಆದರು ಅನ್ನುವುದನ್ನಾದರೂ ನಮಗೆ ತಿಳಿಸಿದ್ದರೆ ಮತ್ತು ಅಂಥ ನ್ಯಾಯವಾದ ಕಾರಣಗಳೇನಾದರೂ ಇದ್ದಿದ್ದರೆ ಇವರು ನಮ್ಮ ಮನವನ್ನೂ ಅವರಂತೆಯೇ ಒಲಿಸಿಕೊಳ್ಳಬಹುದಾಗಿತ್ತು. ಆದರೆ ಇವರು ಅಂಥ ಪ್ರಯತ್ನಗಳನ್ನೇನೂ ಮಾಡಿರುವುದಿಲ್ಲ. ಅವರು ತಮ್ಮ ಆ ಒಂದು ಗುಟ್ಟನ್ನು ತಿಳಿಸುವುದಕ್ಕೆ ಬಹಳ ಹಿಂದೆಗೆಟು ಹಾಕುತ್ತಿದ್ದಾರೆ. ಹಾಗೆ ಅವರು ತಮ್ಮ ಗುಟ್ಟನ್ನು ಹೊರಗೆಡವಲು ಯಾವಾಗ ಹಿಂದೂಮುಂದೂ ನೋಡುವುದಕ್ಕೆ ಷುರುಮಾಡಿದರೋ ಆಗಲೇ ಅವರ ಅಭಿಪ್ರಾಯಗಳಿಗೆ ನಾವು ಮನ್ನಣೆ ಕೊಡುವುದಕ್ಕೆ ಹಿಂಜರಿಯಬೇಕಾಯಿತು. ಅವರು ಆ ಗುಟ್ಟನ್ನು ಈಗಲಾದರೂ ಬಹಿರಂಗಪಡಿಸಲಿ. ಅದು ನ್ಯಾಯವಾದುದಾಗಿದ್ದರೆ ಈಗಲೂ ನಾವು ಅದನ್ನು ಒಪ್ಪಿಕೊಳ್ಳಲು ಸಿದ್ಧ. ಈ ದಿವಸ ರಾಜ್ಯಗಳ ಪುನರ್ವಿಂಗಡಣೆಯನ್ನು ನಮ್ಮ ಒಂದು ಸಂಸ್ಥಾನಕ್ಕೇ ಅನ್ವಯಿಸಿ ಮಾಡಿಲ್ಲ. ಇದ್ದ

(ಶ್ರೀ ಹೆಚ್. ಕೆ. ಶಿವರುದ್ರಪ್ಪ.)

ಇಡೀ ಭಾರತಕ್ಕೆ ಅನ್ವಯಿಸಿದಂಥ ಪ್ರಶ್ನೆ. ದೇಶದಲ್ಲಿ ಬದಲಾವಣೆ ಆಗತಕ್ಕ ಗಡಿಗಳ ಬಗ್ಗೆ ಅನೇಕರು ಅನೇಕ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ.

5-30 P.M.

ಆಂಧ್ರಪ್ರಾಂತನಿರ್ಮಾಣವಾದಾಗ ಆ ಆಂಧ್ರಪ್ರಾಂತ ಎಷ್ಟರಮಟ್ಟಿಗೆ ಕೆಲಸಮಾಡುತ್ತದೆ ಎಂಬುದನ್ನು ನೋಡಿಕೊಂಡು, ಅನಂತರ ಭಾಷಾವಾರು ಪ್ರಾಂತವಿಂಗಡಣೆ ಮಾಡೋಣ ಎಂದು ಅಲ್ಲಿಗೇ ಕೈಬಿಟ್ಟರು. ಆಂಧ್ರಪ್ರಾಂತ್ಯವು ಭಾಷಾವಾರು ಆಧಾರದ ಮೇಲೆ ನಿರ್ಮಾಣವಾಯಿತು ಎಂದು ಹೇಳುವುದರಲ್ಲಿ ಏನೇನೂ ಅಭ್ಯಂತರವಿಲ್ಲ. ಅದನ್ನು ಪರೀಕ್ಷಾರ್ಥವಾಗಿ ಮಾಡಿ ಭಿನ್ನಾಭಿಪ್ರಾಯವಿದ್ದ ಕಾರಣ ಒಂದು ಕಮಿಟಿಯನ್ನು ಕೇಂದ್ರ ಸರ್ಕಾರದವರು ರಚನೆಮಾಡಿದರು. ಭಿನ್ನಾಭಿಪ್ರಾಯ ಇಲ್ಲದೆ ಇದ್ದಪಕ್ಷದಲ್ಲಿ ಆ ಕಮಿಟಿಯ ಅವಶ್ಯಕತೆ ಇರಲಿಲ್ಲ. ಭಿನ್ನಾಭಿಪ್ರಾಯ ಇರುವ ಕಾರಣ ಕಮಿಟಿ ರಚನೆಯಾಯಿತು. ಕಮಿಟಿಯಲ್ಲಿದ್ದ ಮಾನನೀಯರು ಮೇಜರ್ ಕೋಮುಗಳಾದ ಲಿಂಗಾಯಿತರ ಅಥವಾ ಒಕ್ಕಲಿಗರ ಕೋಮಿಗೆ ಸೇರಿದವರಲ್ಲ. ಎಲ್ಲರೂ ಮೈನಾರಿಟಿ ಕಮ್ಯೂನಿಟಿಯವರು. ಮೈನಾರಿಟಿ ಕೋಮಿನ ಅಧ್ಯಕ್ಷರನ್ನೇ ಕೇಂದ್ರ ಸರ್ಕಾರದವರು ನೇಮಕಮಾಡಿ ಅವರ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಸರ್ಕಾರದವರು ಒಂದು ಸೂಚನೆಯನ್ನು ಕೊಟ್ಟರು. ಇವೊತ್ತಿನ ದಿವಸ ಕಮಿಟಿ ರಿಪೋರ್ಟು ನಮ್ಮ ಮುಂದೆ ಬಂದಿದೆ. ಅವರು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ತಮ್ಮ ವರದಿಯನ್ನು ತಯಾರುಮಾಡಿದ್ದಾರೆ ಎಂದು ಪಂಡಿತ ನೆಹರೂ ಅವರೇ ಹೇಳುತ್ತಿರುವಾಗ ಇನ್ನೂ ಯಾರಾದರೂ ಆ ಕಮಿಟಿಯವರನ್ನು influence ಮಾಡಿದ್ದಾರೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತು. ಕಮಿಟಿಯವರು ಯಾರ influenceಗೂ ಒಳಗಾಗದೆ ನಿರ್ವಿವಾದವಾಗಿ ಕೊಟ್ಟಿರುವ ಅಭಿಪ್ರಾಯಕ್ಕೆ ಇಷ್ಟೊಂದು ಜಿಜ್ಞಾಸೆ, ಇಷ್ಟೊಂದು ಭಾಷಣಗಳಾಗುತ್ತವೆ ಎಂದು ನಾನು ತಿಳಿದಿರಲಿಲ್ಲ. ಏತಕ್ಕೆ ನಾವು ಭಯಪಡಬೇಕು? ನಾವು ಭಾರತದ ಪ್ರಜೆಗಳಾಗಿರುವಾಗ ಇಲ್ಲಿ ಇದ್ದರೆ ಏನು! ಅಲ್ಲಿ ಇದ್ದರೆ ಏನು! ಎಲ್ಲಿದ್ದರೂ ನಾವು ಭಾರತದ ಪ್ರಜೆಗಳೇ. ಇದನ್ನು ಶಂಕೆಯ ಮನೋಭಾವನೆಯಿಂದ, ಒಂದು ಜಾತೀಯತೆಯ ದೃಷ್ಟಿಯಿಂದ ನೋಡುತ್ತಾ ಹೋಗುವುದು ಅನುಚಿತ ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಡಿ. ದೇವರಾಜ್ ಅರಸ್.—ಕಮಿಟಿಯವರಿಗೆ ಯಾರಾದರೂ memorandum ಕೊಟ್ಟು ಆ ಜಾತಿಯ ಅಭಿಪ್ರಾಯ ಹೀಗಿದೆಯೆಂದು ಏತಕ್ಕೆ ಹೇಳಬಾರದು? ಅದು ಹೇಗೆ influence ಮಾಡಿದಹಾಗಾಗುತ್ತದೆ?

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮಾನ್ಯ ಶ್ರೀ ದೇವರಾಜ್‌ಅರಸ್‌ರವರು ಹೇಳಿರತಕ್ಕ ವಿಚಾರವನ್ನು ಯೋಚನೆಮಾಡೋಣ. ಕಮಿಷನರವರು ಇಲ್ಲಿಗೆ ಬಂದಾಗ ನಮ್ಮೆಲ್ಲರ ಅಭಿಪ್ರಾಯಗಳನ್ನು ಕೊಡಬಾರದೆಂದು ಒಂದು ನಿಬಂಧನೆಯನ್ನು ಹಾಕಿಕೊಂಡೆವು. ಅದರಂತೆ ನಾವು ಯಾರೂ ಅಲ್ಲಿ ಹೋಗಿ ಹೇಳಲಿಲ್ಲ. ಯಾರು ಹೇಳಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ. ನಮ್ಮ ಶಾಸನಸಭಾ ಸದಸ್ಯರಮಟ್ಟಿಗೆ ಹೇಳುವುದಾದರೆ, ಇಂತಹ ಅಭಿಪ್ರಾಯಕ್ಕೆ ಎಡೆಕೊಟ್ಟಿರಲಾರರು. ಯಾವ ಕೋಮಿನವರೂ ಮಾಡಿರಲಾರರು. ಯಾರೋ ಬೇಜವಾಬ್ದಾರಿ ಮನುಷ್ಯರು ಮಾಡಿರಬಹುದು. ಆದರೆ ನಾವು ಜವಾಬ್ದಾರಿಯಿಂದ ವರ್ತಿಸಬೇಕು ಎಂದು ಹೇಳುತ್ತೇನೆ. ಈ S.R.C. ರಿಪೋರ್ಟ್‌ನಲ್ಲಿ ಜಾತೀಯತೆ ವಿಚಾರವನ್ನು ಪ್ರಸ್ತಾಪಮಾಡುತ್ತಾ ಯಾವ ಕೋಮಿನವರೂ dominate ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಅಂತಹ ಸಂದರ್ಭ ಬಂದಾಗ ಇತರ ಕೋಮಿನವರು ಮನಸ್ಸುಮಾಡಿದಪಕ್ಷದಲ್ಲಿ ಅವರನ್ನು ಮೈನಾರಿಟಿ ಕೋಮಿಗೆ ಇಳಿಸಬಹುದು ಎಂದು ಸರಿಯಾಗಿ ಲೆಕ್ಕಾಚಾರ ಹಾಕಿ ಹೇಳಿದ್ದಾರೆ. ನಾನು ಹೇಳುವುದ ಇಷ್ಟೆ. ಯಾವ ಜಾತೀಯು ರಾಜ್ಯವನ್ನು ಕಟ್ಟುವುದಕ್ಕಾಗಲಿ, ರಾಜ್ಯವನ್ನು ಸಂಪಾದನೆಮಾಡುವುದಕ್ಕಾಗಲಿ ಪ್ರಯತ್ನಮಾಡುವುದು ಸಾಧ್ಯವಿಲ್ಲ. ಆ ಕಾಲ ಹೋಯಿತು. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ 1928ನೇ ಇಸವಿಯ ಹಿಂದೆ ಬ್ರಾಹ್ಮಣರು ಒಂದು ಗೌರವಸ್ಥಾನವನ್ನು ಒಂದು ಹೆಚ್ಚಿನ ಅಂತಸ್ತನ್ನು ಪಡೆದಿದ್ದರು. ಎಲ್ಲಿ ನೋಡಿದರೂ ಬ್ರಾಹ್ಮಣರು ರಾಜ್ಯಭಾರಮಾಡುತ್ತಿದ್ದರು. ಅವರು ರಾಜ್ಯಭಾರಮಾಡುತ್ತಿದ್ದಾಗ ಎಲ್ಲರ ವಿಶ್ವಾಸವನ್ನು ಕಳೆದುಕೊಂಡಿದ್ದರಿಂದ ಮತ್ತು ಸರಿಯಾಗಿ ನಡೆದುಕೊಳ್ಳದೆ ಇದ್ದುದರಿಂದ Brahmin—Non-Brahmin Movement ಪ್ರಾರಂಭವಾಯಿತು. 1928ನೇ ಇಸವಿಯಿಂದ ಈಚೆಗೆ ಬ್ರಾಹ್ಮಣರಿಗೆ ಇರುವ ಸ್ಥಾನಮಾನಗಳು ಕಡಿಮೆಯಾಗುತ್ತಾ ಬಂದುವು. ಅವರು ಅಷ್ಟು ಉತ್ತಮಸ್ಥಿತಿಯಲ್ಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಹಾಗೆಯೇ ಜನರಿಗೆ ಪ್ರಜಾಪ್ರಭುತ್ವ ಬಂದ ಮೇಲೆ ಒಕ್ಕಲಿಗರು dominate ಮಾಡಿರಬಹುದು. ಆದರೆ ಒಕ್ಕಲಿಗರು ಕೂಡ ಶಾಶ್ವತವಾಗಿ ಆಳುವುದಕ್ಕೆ ಆಗುವುದಿಲ್ಲ. ಎಲ್ಲಿಯವರೆಗೆ ಅವರು ಎಲ್ಲರ ವಿಶ್ವಾಸವನ್ನು ಗಳಿಸಿರುತ್ತಾರೋ ಎಲ್ಲಿಯವರೆಗೆ ವಿಶ್ವಾಸ ಸಂಪಾದನೆಮಾಡುತ್ತಾರೋ ಅಲ್ಲಿಯವರೆಗೆ ಸಾಧ್ಯ. ಪ್ರಜಾಪ್ರಭುತ್ವದಲ್ಲಿ ಸ್ಥಿರವಾಗಿ ರಾಜ್ಯಭಾರ ಮಾಡುತ್ತೇವೆ ಎಂದು ನಂಬಿಕೊಂಡಿದ್ದರೆ ಅದು ತಪ್ಪು. ಒಂದು ವೇಳೆ ಲಿಂಗಾಯಿತರು ಬಂದರೆ, ಅವರಿಗೆ ಉಂಟಾಗುವ ಗತಿಯೂ ಅಷ್ಟೆ. ಎಲ್ಲಿಯವರೆಗೆ ಜನರ ವಿಶ್ವಾಸವನ್ನು ಪಡೆದಿರುತ್ತಾರೋ ಅಲ್ಲಿಯವರೆಗೆ ಸಾಧ್ಯ. ಅದರ ಮೇಲೆ ಆಗುವುದಿಲ್ಲ. ಈ ವಿಷಯವನ್ನು S.R.C. ಯವರು ಸರಿಯಾಗಿ ಪರಿಶೀಲನೆಮಾಡಿ ಯಾವ ಕೋಮಿನವರೂ dominate ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

Sri D. DEVARAJ URS.—Is it a fact that Vokkaligas are ruling Mysore?

ಶ್ರೀ ಎಚ್. ಕೆ. ಶಿವರುದ್ರಪ್ಪ.—ಒಂದು ವೇಳೆ ಹಾಗೆ ಭಾವಿಸಿ ಎಂದು ಹೇಳಿದೆನೇ ವಿನಾ ಅವರು ಹಾಗೆ ಮಾಡಿದ್ದಾರೆಂದು ಹೇಳಲಿಲ್ಲ. ಪ್ರಜಾಪ್ರಭುತ್ವದಲ್ಲಿ ಯಾರೂ dominate ಮಾಡುವುದಕ್ಕಾಗುವುದಿಲ್ಲ ಎಂದು ನನ್ನ ವಾದ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಎಲ್ಲರೂ ನಮ್ಮನ್ನು ಬಿಟ್ಟೇಬಿಡುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ನನ್ನಮಟ್ಟಿಗೆ ಹೇಳುವುದಾದರೆ ಅಖಂಡ ಕರ್ನಾಟಕಕ್ಕೆ ನೀವೇ ಮುಖ್ಯಮಂತ್ರಿಗಳಾಗಿರಿ. ಈ ಭಯ ಏತಕ್ಕೆ? ಯಾವತ್ತಾದರೂ ಲಿಂಗಾಯಿತರು ರಾಜ್ಯಭಾರಮಾಡುತ್ತಿದ್ದುದನ್ನು ನೋಡಿದ್ದೀರಾ? ಅವರು ಆ ರುಚಿಯನ್ನು ಕಾಣರು.

Sri D. DEVARAJ URS.—So you want to taste it?

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಿಂದೆ ಬಸವೇಶ್ವರರು ರಾಜ್ಯಭಾರ ಮಾಡಿಲ್ಲ. ಬಸವೇಶ್ವರರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರಷ್ಟೆ. ಲಿಂಗಾಯಿತರು ಯಾರಾದರೂ ರಾಜ್ಯಭಾರಮಾಡಿ ಅವರ ಕೈಕೆಳಗೆ ಒಕ್ಕಲಿಗರು ಇದ್ದು ಅವರಿಂದ ನೊಂದು ಈರೀತಿ ಮಾತು ಆಡುತ್ತಿದ್ದಾರೆಯೇ! ಇಲ್ಲ. ಈ ರೀತಿ ಭಯಪಡಬೇ

ಕಾಗಿಲ್ಲ. ಆದ್ದರಿಂದ ಜಾತೀಯತೆಯ ಪೆಡಂಭೂತವನ್ನು ಜನರಲ್ಲಿ ಕಲ್ಪಿಸಿ, ನಾವು ಮಾತನಾಡಿದ್ದೂ ಅಲ್ಲದೆ ಹಳ್ಳಿಹಳ್ಳಿಗಳಿಗೂ, ಮೂಲೆಮೂಲೆಗೂ ಹೋಗುವಂತೆ ಮಾಡಿ ಮೈಸೂರು ದೇಶಕ್ಕೆ ಕೊಡಲಿ ಕಂಟಕಪ್ರಾಯವಾಗಬಾರದು ಎಂದು ಹೇಳುತ್ತೇನೆ.

ಎರಡನೆಯದಾಗಿ ರಾಜರ ವಿಚಾರ ಪ್ರಸ್ತಾಪ ಬರುತ್ತಿದೆ. ಶ್ರೀಮನ್ಮಹಾರಾಜರ ವಿಚಾರದಲ್ಲಿ ಯಾವ ಮೈಸೂರಿನ ಪ್ರಜೆಯೂ ಸಹ ರಾಜಭಕ್ತಿಯಿಂದ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ರಾಜಭಕ್ತಿಯಿಂದ ಇಲ್ಲ ಎಂದು ಯಾರು ಹೇಳುತ್ತಿದ್ದಾರೋ ಅವರಿಗೆ ರಾಜಭಕ್ತಿ ಇಲ್ಲದೇ ಇರಬಹುದು ಎಂದು ಹೇಳುತ್ತೇನೆ. ಅದನ್ನು ಮುಚ್ಚುವುದಕ್ಕಾಗಿ ಈ ಪ್ರಯತ್ನ ಮಾಡುತ್ತಿದ್ದಾರೆಂದು ನನಗೆ ಅನ್ನಿಸುತ್ತದೆ. ರಾಜಭಕ್ತಿ ಇದೆಯೆಂದು ಯಾರು ಹೇಳುತ್ತಿದ್ದಾರೋ ಅವರೇ ಮೊದಲನೆಯದಾಗಿ ರಾಜರು ಬೇಡವೆಂದು ಓಟು ಮಾಡುತ್ತಾರೆ ಎಂಬ ಭರವಸೆ ನನಗಿದೆ. ರಾಜ್ಯಾಂಗವನ್ನು ನಿರ್ಮಿಸಿದಾಗ ರಾಜತ್ವದಲ್ಲಿ ಇಲ್ಲದೆ ಇದ್ದ ರಾಜಭಕ್ತಿ ಮೈಸೂರು ಧ್ವಜವನ್ನು ತಗೆದುಹಾಕುವಾಗ ಇಲ್ಲದೆ ಇದ್ದ ರಾಜಭಕ್ತಿ ಏಕದಂ S.R.C. ರಿಪೋರ್ಟ್ ನಮ್ಮ ಮುಂದೆ ಇಟ್ಟಾಗ ಹೇಗೆ ಬಂತು ?

ಶ್ರೀ ಡಿ. ಆರ್. ಕರಿಗೌಡ.—ಯಾವಾಗ ಮೈಸೂರು ಧ್ವಜವನ್ನು ಕಿತ್ತುಹಾಕಿದರೋ ಆ ದಿವಸದಿಂದಲೇ ಮೈಸೂರು ದೇಶ ಹಾಳಾಯಿತು.

ಶ್ರೀ ಟಿ ಹನುಮಯ್ಯ.—ಇಂಡಿಯಾ ದೇಶಕ್ಕೆಲ್ಲಾ ಒಂದೇ ಬಾವುಟ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹೊಸದಾಗಿ ಬಂದಿರುವ ರಾಜಭಕ್ತಿ ನೋಡಿದರೆ ಅದನ್ನು advertisement ಗೋಸ್ಕರ ಹೇಳುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ನಿಜವಾಗಿಯೂ ರಾಜಭಕ್ತಿ ನಮಗಿಲ್ಲವೆಂದು ಹೇಳಿದರೆ ಅದು ದ್ರೋಹಮಾಡಿದಹಾಗಾಗುತ್ತದೆ ಎಂದು ಹೇಳುತ್ತೇನೆ. ರಾಜ್ಯಾಂಗದಲ್ಲಿ ರಾಜಭಕ್ತಿ ಇಲ್ಲ. ಪ್ರಜಾಪ್ರಭುತ್ವ ಬಂದಮೇಲೆ, ಪ್ರಜೆಗಳೇ ರಾಜರುಗಳು ಎಂದು ಹೇಳಿದ ಮೇಲೆ, ರಾಜಭಕ್ತಿ ಎಲ್ಲಿದೆ ? ಒಂದು ಕಡೆ Constitutionಗೆ ತಾವು ಪ್ರಮಾಣಮಾಡಿರುತ್ತಾರೆ. ಇನ್ನೊಂದು ಕಡೆ ರಾಜರು ಇರಲಿ ಎಂದು ಹೇಳುತ್ತಾರೆ. ಇದು ಎಂತಹ ವಾದ ! ಯಾರಿಗೂ ಸಹ ರಾಜರ ಮೇಲೆ ದ್ವೇಷವಿಲ್ಲ. ರಾಜ್ಯಾಂಗದಲ್ಲಿ ರಾಜತ್ವಕ್ಕೆ ಸ್ಥಾನ ಇಲ್ಲದೇ ಇರುವುದರಿಂದ ನಿಜವಾಗಿಯೂ ರಾಜ್ಯಾಂಗಕ್ಕೆ ಪ್ರಮಾಣಮಾಡಿರುವುದರಿಂದ, S.R.C. ರಿಪೋರ್ಟನ್ನು ಈ ವಿಚಾರದಲ್ಲಿ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆಯೇ ಹೊರತು ಇನ್ನೇನೂ ಮಾರ್ಗವಿಲ್ಲವೆಂದು ಹೇಳುತ್ತೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಎ.ಬಿ.ಸಿ. ಎಂಬ ಮೂರು ರೀತಿಯ ಸಂಸ್ಥಾನಗಳಿವೆ. ಒಂದು ಕಡೆ ಕೊಡಗಿನ ಜನಸಂಖ್ಯೆ 28 ಲಕ್ಷ. ಇದೆಂತಹ ಸಂಸ್ಥಾನ, ಇದು ಹೋಗಬೇಕೆಂದು ಈ ವರದಿಯಲ್ಲಿ ಅಭಿಪ್ರಾಯ ಪಟ್ಟಿರುವುದು ತಪ್ಪಲ್ಲ. ಆದರೆ ಇನ್ನೊಂದು ಕಡೆ ಉತ್ತರ ಪ್ರದೇಶದಲ್ಲಿ ಆರೂವರೆ ಕೋಟಿ ಜನರಿರುವುದನ್ನು ಹಾಗೆಯೇ ಬಿಟ್ಟಿದ್ದಾರೆ. ಏನೇ ಆದರೂ ಎ. ಬಿ. ಸಿ. ಎಂಬ ತಾರತಮ್ಯ ಹೋಗುವುದು ನ್ಯಾಯವೆಂದು ನೀವು ಒಪ್ಪಬೇಕು. ಯಾವಾಗ ಇದನ್ನು ಒಪ್ಪಿ ಎಲ್ಲವನ್ನೂ ಎ ಸಂಸ್ಥಾನವೆಂದು ಮಾಡಿದವೋ ಆಗ ರಾಜಪ್ರಮುಖರ ಸ್ಥಾನವಿರುವುದಿಲ್ಲ. ಇದಕ್ಕೆ ಅನಿವಾರ್ಯವಾಗಿ ಒಪ್ಪಬೇಕು. ಇದಕ್ಕಾಗಿ ಮನಸ್ಸನ್ನು ಕೆಡಿಸಿಕೊಂಡು ಉದ್ರೇಕ ಪರಿಸ್ಥಿತಿಯನ್ನುಂಟುಮಾಡುತ್ತಿರುವುದನ್ನು ನಾನು ವಿಷಾದದಿಂದ ನೋಡುತ್ತಿದ್ದೇನೆ. ರಾಜಭಕ್ತಿ ನಮ್ಮಲ್ಲಿಯೂ ಇದೆ, ಇಲ್ಲವೆಂದಲ್ಲ. ಹೊರ ಪ್ರಾಂತಗಳಲ್ಲಿಯೂ ಮಿಗಿಲಾದ ರಾಜಭಕ್ತಿ ಇದೆ. ನಮಗಿಂತ ಹೆಚ್ಚಿನ ರಾಜಭಕ್ತಿಯಿದೆ. ಇಂಥವರು ನಮ್ಮ ರಾಜ್ಯಕ್ಕೆ ಬರುತ್ತೇವೆಂದರೆ, ಅವರನ್ನು ಏಕೆ ಕರೆದುಕೊಳ್ಳಬಾರದು?

ಒಳ್ಳಾರಿ ಒಂದು ವಿಚಾರದಲ್ಲಿ ಸಮಿತಿಯವರು ಬಹಳ ಅನ್ಯಾಯ ಮಾಡಿದ್ದಾರೆ. ಮೊದಲೇ ಎಲ್ಲರೂ ಸೇರಿ ತೀರ್ಮಾನಮಾಡಿ, ಒಂದು ಅಭಿಪ್ರಾಯಕ್ಕೆ ಬಂದು ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿರುವ ಪ್ರಶ್ನೆಯನ್ನು ಇವರು ಈ ದಿವಸ ಒಬ್ಬರಿಗೂ ಗೊತ್ತಿಲ್ಲದೆ ಹೀಗೆ ಮಾಡಿದ್ದಾರೆ. ನಾವು ಇದನ್ನೊಪ್ಪುವುದಕ್ಕಾಗುವುದಿಲ್ಲ. ಇದನ್ನು ಕೇಂದ್ರಕ್ಕೆ ತಿಳಿಸೋಣ, ಅವರು ಸರಿಯಾದ ತೀರ್ಮಾನ ಕೊಡಬೇಕೆಂದು ಪ್ರಾರ್ಥಿಸೋಣ. ಈ ವಿಷಯದಲ್ಲಿ ಬಹುಶಃ ಸಲಹೆಯನ್ನು ಅವರು ಅಂಗೀಕರಿಸದೆ ಇರಬಹುದು. ಒಂದು ವೇಳೆ ನಾವು ಕೊಡುವುದಿಲ್ಲವೆಂದು ಹೇಳಿದರೆ, ಎರಡು ಕರ್ಣಾಟಕವಾಗಬೇಕೆಂದರೆ ಏನುಮಾಡುವುದಕ್ಕಾಗುತ್ತದೆ? ಹೇಗೇ ಆದರೂ ಕೇಂದ್ರ ಸರ್ಕಾರವಿರುವಾಗ ಅವರು law and order ರಕ್ಷಣೆ ಮಾಡಿಯೇ ಮಾಡುತ್ತಾರೆ. ಅವರೂ ಡಿಕ್ಟೇಟರೇನೂ ಅಲ್ಲ, ಚುನಾಯಿತರಾಗಿ ಬಂದಿರುವವರು. ಆದುದರಿಂದ ನಾವು ಯಾರೂ ಅವರನ್ನು ಆ ರೀತಿ ಭಾವಿಸದೆ, ನಮ್ಮ ಪ್ರತಿನಿಧಿಗಳೇ ಹೇಳುತ್ತಿದ್ದಾರೆಂದು ತಿಳಿದು ಅವರ ತೀರ್ಮಾನಕ್ಕೆ ತಲೆಬಾಗೋಣ. ರಾಜ್ಯಾಂಗದ 3ನೆಯ ಆರ್ಟಿಕಲ್ ಪ್ರಕಾರ, ನಮ್ಮ ಅಭಿಪ್ರಾಯಗಳನ್ನು ಕೇಳುವುದು "They may ask" ಎಂದಿದೆ. ಕೇಳಿದರೂ ಕೇಳಬಹುದು, ಬಿಟ್ಟರೂ ಬಿಡಬಹುದು. They may ಎಂದಿದೆ. Subject to correction.

Sri L. SIDDAPPA.—In consultation.

ಶ್ರೀ ಎಚ್. ಕೆ. ಶಿವರುದ್ರಪ್ಪ.—I stand corrected, Sir. ಅದರ ಪ್ರಕಾರ ನಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದಾರೆ. ಹೀಗೆ ಕೇಳುತ್ತಿರುವಾಗ ನಮ್ಮ ನಿಜವಾದ ಅಭಿಪ್ರಾಯವನ್ನು ತಿಳಿಸೋಣ. ನಮ್ಮಲ್ಲಿ ಅನೇಕರಿಗೆ ಮನಸ್ಸು ನೊಂದಿರಬಹುದು. ಯಾವ ಕಾರಣದಿಂದ ಹೀಗೆ ಹೇಳುತ್ತಿದ್ದೇವೆಂಬುದನ್ನು ಕೇಂದ್ರಕ್ಕೆ ತಿಳಿಸಬಹುದು. ನಾವೇನು ಅಭಿಪ್ರಾಯವನ್ನು ಹೇಳಿದರೂ ಅಧ್ಯಕ್ಷರು ಕಳುಹಿಸುತ್ತಾರೆಂದು ನಂಬಿದ್ದೇನೆ. ಅವರಿಗೆ ನಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶವಿರುವಾಗ ನಾವು ಏಕೆ ಲಾಠಿ ಚಾರ್ಜಿಗೆ ಅವಕಾಶಕೊಟ್ಟು, ಮೈಸೂರು ದೇಶದಲ್ಲಿ ಹೀಗೆ ಮಾಡುತ್ತಿದ್ದಾರೆಂದು ಆಡಿಕೊಳ್ಳಲು ಅವಕಾಶ ಕೊಡಬೇಕು ?

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಒಂದು ವಿಷಯ. ಈ ಹೊತ್ತು ಈ ರಾಜ್ಯಗಳ ಪುನರ್ವಿಂಗಡಣೆ ಸಮಿತಿಯ ವರದಿಯ ಮೇಲೆ ಮಾತನಾಡುವಾಗ ಏನು ಭಾವನೆ ಬರುತ್ತಿದೆಯೆಂದರೆ, ರಾಜ್ಯಾಂಗದ 3ನೆಯ ಆರ್ಟಿಕಲ್ ಪ್ರಕಾರ ಭಾರತ ಸರ್ಕಾರದವರು ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಒಂದು ಬಿಲ್ ಕಳುಹಿಸಿರುವ ಹಾಗೂ, ನಾವು ಅದರ ಮೇಲೆ ನಮ್ಮ ಅಭಿಪ್ರಾಯ ಕೊಡುತ್ತಿರುವ ಹಾಗೂ, ಇದರ ಮೇಲೆ ಪಾರ್ಲಿಮೆಂಟಿನಲ್ಲಿ ಅಂತ್ಯ ತೀರ್ಮಾನ ಕೊಡುವ ಹಾಗೂ ಚರ್ಚೆ ನಡೆಯುತ್ತಿದೆ. ಆ ರೀತಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಈ ಹೊತ್ತು ಸಭೆಯಲ್ಲಿ 3ನೆಯ ಆರ್ಟಿಕಲ್ ಪ್ರಕಾರ ಚರ್ಚೆ ನಡೆಯುತ್ತಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏನಿದ್ದರೂ ಈ ಹೊತ್ತು ನಾವು ಕೊಡುವ ನಿರ್ಧಾರ ಬರಿಯ ಅಭಿಪ್ರಾಯವಾಗುತ್ತದೆ. ಇದಕ್ಕೆ ಬೆಲೆಯಿಲ್ಲದೇಯಿರಬಹುದು. ಇದನ್ನು ಪಾರ್ಲಿಮೆಂಟ್ ಒಪ್ಪಬಹುದು ಅಥವಾ ಬಿಡಬಹುದು ಎಂಬುದನ್ನು ನಾವು ತಿಳಿಯಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಪ್ರಾಂತ ಪುನರ್ವಿಂಗಡಣೆಯ ವಿಚಾರದಲ್ಲಿ ನಮ್ಮ ಅಭಿಪ್ರಾಯವನ್ನು ಕೇಳಬೇಕೆಂದಿರುವುದರಿಂದ ಕೇಳುತ್ತಿದ್ದಾರೆ. ಇದು ಮೈಸೂರಿಗೆ ಮಾತ್ರ ಸಂಬಂಧಪಟ್ಟ ಪ್ರಶ್ನೆಯಲ್ಲ. ನಮಗೆ ಸಂಬಂಧಪಟ್ಟಿರುವ ಹಾಗೆ ಹೈದರಾಬಾದು, ಬೊಂಬಾಯಿ, ಕೊಡಗು, ಮದರಾಸು ಇವಕ್ಕೆಲ್ಲಾ ಸಂಬಂಧಪಟ್ಟಿದೆ. ಈ ಐದು ರಾಜ್ಯಗಳ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು. ಹೀಗಿರುವಾಗ ಇದನ್ನು ಮೈಸೂರು ತೀರ್ಮಾನ ಮಾಡಿದ ಮಾತ್ರಕ್ಕೇ ಪೂರ್ತಿ ತೀರ್ಮಾನವಾಗುವುದಿಲ್ಲ. ಸಭಾನಾಯಕರು ಅಪ್ಪಣೆ ಕೊಡಿಸಿದ ಹಾಗೆ, ಇಲ್ಲಿ ಅರ್ಧ ಅರ್ಧದಷ್ಟು ಅಭಿಪ್ರಾಯ ಭಿನ್ನತೆ ಇದೆಯೆಂದು ಹೇಳುತ್ತಿದ್ದಾರೆ. ಅಲ್ಲಿ ಶೇಕಡ ನೂರರಷ್ಟು ಪರವಾಗಿರುವ ಹಾಗೆ ಕಾಣುತ್ತದೆ. ಅಲ್ಲಿನ ಒಂದು ಕೋಟಿ ಜನರು ಬೇಕೆಂದರೆ ಪಾರ್ಲಿಮೆಂಟ್ ಹೇಗೆ ಮಾಡುತ್ತಾರೆ? ಸ್ವಾಮಿ, ನಾವು ಆ ದಿವಸ ಬಳ್ಳಾರಿಯವರನ್ನು ಸ್ವಾಗತಿಸುವಾಗ ಯಾರೂ ಬೇಡವೆಂದು ಹೇಳಲಿಲ್ಲ, ಸಂತೋಷದಿಂದ ಎಲ್ಲರೂ ಸ್ವಾಗತಿಸಿದೆವು. ಆದರೆ ಈ ಹೊತ್ತು ಸಂಕುಚಿತ ಭಾವನೆಯಿಂದ ನಡೆಯುತ್ತಿದ್ದೇವೆ. ಕೆಲವರು ಮೈಸೂರಿಗೆ ಕೊಡಗು, ಮಂಗಳೂರು ಇವುಗಳನ್ನು ಮಾತ್ರ ಸೇರಿಸಿ ಎಂದು ಹೇಳುತ್ತಾರೆ; ಮೈಸೂರು ಹೀಗೆಯೇ ಇರಲೆಂದು ಹೇಳುತ್ತಾರೆ. ಇನ್ನು ಕೆಲವರು ಇನ್ನೊಂದು ರೀತಿ ಹೇಳುತ್ತಾರೆ. ಇದು ಹೇಗೆ ಸಾಧ್ಯ? ಕೊಡಗು, ಮಂಗಳೂರು ಸೇರಿಸಲು ಒಪ್ಪಿದ ಮೇಲೆ ಬೇರೆ ಕಡೆಯವರನ್ನು ಬೇಡವೆಂದು ಹೇಳುವುದಕ್ಕೇನು ಕಾರಣ? ಕೊಡಗು ಮಂಗಳೂರನ್ನು ಸೇರಿಸಿದರೆ unwieldy ಆಗುವುದಿಲ್ಲ, ಮಿಕ್ಕದ್ದು ಮಾತ್ರ ಏಕೆ ಬೇಡ? ಕೊಡಗಿನವರು ಮೈಸೂರು ದೇಶಕ್ಕೆ ಸೇರಲು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಮಿಕ್ಕವರು ಸೇರುತ್ತೇವೆ ಎಂದರೆ ಬೇಡವೆಂದು ಹೇಳುತ್ತಾರೆ. ಇದರಲ್ಲಿ ಯಾವ ವಾದವಿದೆ, ಯಾವ ತತ್ವವಿದೆ ಎಂಬುದು ಅರ್ಥವಾಗುವುದಿಲ್ಲ. ಇನ್ನೊಂದು ವಿಷಯ, ಈಗ ನಮ್ಮ ಸಭಾನಾಯಕರು ಭಾಷಣ ಮಾಡುವಾಗ ಇದನ್ನು ಸಂಪೂರ್ಣ ಸ್ವಾಗತಿಸಿದ್ದಾರೆ. ಇಷ್ಟೇ ಅಲ್ಲ, ವಿರೋಧ ಪಕ್ಷದ ನಾಯಕರೂ ಸ್ವಾಗತಿಸಿದ್ದಾರೆ. ಅಲ್ಲದೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಮಾನ್ಯ ಕಾಂಗ್ರೆಸ್ ಅಧ್ಯಕ್ಷರೂ ಸ್ವಾಗತಿಸಿದ್ದಾರೆ. ಹೀಗೆ ಮೂರು ಜನ ನಾಯಕರು ಸ್ವಾಗತಿಸಿರುವುದಕ್ಕೆ ನಾವೇಕೆ ಅಡ್ಡಿಯಾಗಬೇಕು? ಅವರು ನಮ್ಮ ನಾಯಕರೆಂದು ಒಪ್ಪಿದ ಮೇಲೆ ಅವರು ಹೇಳುವುದನ್ನು ಪಾಲಿಸದೇಯಿದ್ದರೆ ನಮ್ಮಲ್ಲಿ ನಿಜವಾದ loyalty ಇದೆಯೆ? ಇದನ್ನು ಸ್ವಾಗತಿಸಬೇಕೆಂದು ಮೂರು ಜನ ನಾಯಕರು ಏಕಕಂಠದಿಂದ ಹೇಳುತ್ತಿದ್ದಾರೆ. ಲೋಹಿಯಾ ಪಕ್ಷದವರೂ ಒಂದು ತೀರ್ಮಾನಕ್ಕೆ ಬಂದು ಇದನ್ನು ಸ್ವಾಗತಿಸೋಣವೆಂದು ಹೇಳಿದ್ದಾರೆ. ಆ ಪಾರ್ಟಿಯಲ್ಲಿದ್ದ ಕೆಲವು ಮಹನೀಯರು ಇದಕ್ಕೆ ವಿರೋಧವಾಗಿ ಮಾತನಾಡಿದ್ದಾರೆ. ಇದೇಕೆ ಆ ರೀತಿ ಮಾಡಿದರೋ ಗೊತ್ತಿಲ್ಲ. ಒಂದೇ ಪಕ್ಷದಲ್ಲಿದ್ದು ಅಭಿಪ್ರಾಯಗಳು ಆ ರೀತಿ ಬೇರೆಬೇರೆ ಬರಬಾರದು ಅವರು ಮೊದಲು ಪಿ. ಎಸ್. ಪಿ. ಪಾರ್ಟಿಯಲ್ಲಿದ್ದು ಅಲ್ಲಿ ಗಲಾಟೆ ಮಾಡಿಕೊಂಡು ಬೇರೆ ಪಕ್ಷಕ್ಕೆ ಹೋದರು. ಅಲ್ಲಿಯೂ ಅವರು ಹೆಚ್ಚು ದಿನ ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಅಂಥವರ ಅಭಿಪ್ರಾಯಕ್ಕೆ ಅಷ್ಟು ಬೆಲೆ ಕೊಡುವುದಕ್ಕಾಗುವುದಿಲ್ಲ.

ಆದ್ದರಿಂದ ಎಲ್ಲಾ ಪಕ್ಷದವರೂ ಒಪ್ಪಿರತಕ್ಕ ಒಂದು ತೀರ್ಮಾನಕ್ಕೆ ನಾವು ಮನ್ನಣೆ ಕೊಟ್ಟು ಕೇಂದ್ರ ಸರ್ಕಾರದವರು ಪಾರ್ಲಿಮೆಂಟ್ ಮುಂದೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದನ್ನು ಸರ್ವಾನುಮತದಿಂದ ಅಂಗೀಕರಿಸೋಣ. ನಾವೆಲ್ಲರೂ ಭಾರತದ ಪ್ರಜೆಗಳು, ಭಾರತದಲ್ಲಿಯೇ ಹುಟ್ಟಿ ಬೆಳೆದವರು, ಭಾರತ ಚೆನ್ನಾಗಿ ಬೆಳೆಯಲಿ, ಈ ವಿಷಯದಲ್ಲಿ ನಾವು ಗೊಂದಲವೆಬ್ಬಿಸುವುದು ತರವಲ್ಲವೆಂದು ಹೇಳಿ ನಾನು ಈ ಎಸ್. ಆರ್. ಸಿ. ವರದಿಯನ್ನು ಸ್ವಾಗತಿಸುತ್ತೇನೆ.

**Mr. SPEAKER.**—The House will now rise and meet tomorrow at Eight of the Clock.

---

*The House adjourned at Fifty Minutes past Five of the Clock to meet again at Thirty Minutes past Eight of the Clock on Saturday the 19th November 1955.*

---

WD 1451—GPB—550—13-2-1956